ಈಗ ಬೆಲೆ ವಿಚಾರದಲ್ಲಿ ವ್ಯಥೆಪಡುವುದಿಲ್ಲ. ಬೆಲೆ ಏನು ಬೇಕಾದರೂ ಆಗಬಹುದು. 13 ರೂಪಾಯಿ ಇದ್ದ ಸಾವರ್ರಿ 68 ರೂಪಾಯಿ ಆಗಿದೆ. ಸರಬರಾಯಿನ ಪ್ರಶ್ನೆ ಇಂಡಿಯಾ ದೇಶದ ಮಾತಲ್ಲ. ಮೈಸೂರು ದೇಶಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಾದರೆ, ಇವೊತ್ತು 50 ಲಕ್ಷ ಪಲ್ಲ ದಿನಸಿ ಇಟ್ಟುಕೊಂಡು ದೇಶವನ್ನು ಕಾಪಾಡುವುದು ಹೇಗೆ? ಬತ್ತ ಬೀಜಕ್ಕೆ 2 ಸೇರಿನಂತೆ ಸಿಕ್ಕುತ್ತದೆ. ನಾಲಾಬಯಲಿನಲ್ಲಿ 10, 20, 30 ಪಲ್ಲ ಇಟ್ಟುಕೊಂಡಿದ್ದರು. ಅವರಿಗೆ ಫೀ ಮಾರ್ಕೆಟ್ಟು ಇರಲಿಲ್ಲ. ಈಗ ಎರಡು ತಿಂಗಳಿನಿಂದೀಚೆಗೆ ಫ್ರೀ ಮಾರ್ಕೆಟ್ಟಿಗೆ ಅವಕಾಶ ಬಂದು ಆ ಬತ್ತವನ್ನು ನೆಟ್ಟಗೆ ತೆಗೆದುಕೊಂಡು ಬಂದರು. ಮೊನ್ನೆ ಏಕಾದಶಿಗೆ ಮಳೆ ಬರಬೇಕಾಗಿತ್ತು, ಬರಲಿಲ್ಲ. ಈ ರೀತಿ ಮಳೆ ಹೋದರೆ ನಾಲಾಬಯಲಿನವರಿಗೂ ಕ್ಷಾಮ ಬರುತ್ತದೆ. ಈಗಲೇ ಕ್ಷಾಮಬಂದರೆ ಮುಂದೆ ದೇಶದಲ್ಲಿ ಶೇಕಡ 25 ರಷ್ಟು ಭತ್ತ ಕಡಮೆಯಾಗುತ್ತದೆ ಎಂದು ತಿಳಿದುಕೊಳ್ಳಬೇಕು ಆದ್ದರಿಂದ ಹತೋಟಿ ತೆಗೆಯಕೂಡದು; ತೆಗೆದರೆ ಆ ಮೇಲೆ ಪುನಃ ಹಾಕುವುದು ಕಷ್ಟ. ಈಗಿರತಕ್ಕ ಹತೋಟಿ ಕಂಡೂ ಕಾಣದ ಹಾಗೆ ಇದೆ. ಇದನ್ನು ಹೀಗೆಯೇ ಬಿಟ್ಟುಬಿಡಿ. ಮೊನ್ನೆ ಯಾರೋ ಒಬ್ಬರು, ಮಂತ್ರಿಗಳು ಬರುತ್ತಿದ್ದಾಗ, ಒಂದು ಲಾರಿ ಲೋಡ್ ಒಳ್ಳೆಯ ರಾಗಿ ಇಟ್ಟುಕೊಂಡಿದ್ದು ಹೊಡೆಸಿಕೊಂಡು ಹೋಗುತ್ತಾ

ಇದ್ದರು. ಪತ್ತೆ ಯಾಯಿತು. ಅಂಥಾದೆಲ್ಲಾ ಸಿಕ್ಕುತ್ತವೆ. ಈಗ ಮಾರುವವರಿಗೆ ಬಹಳ ಸಂತೋಷ, ಕೊಳ್ಳುವವರಿಗೆ ಬಹಳ ಕಷ್ಟ. ಕೊಳ್ಳುವವರು ಯಾರು? ಮೈಸೂರು ದೇಶದಲ್ಲಿ ಎಷ್ಟು ಜನ ಇದ್ದಾರೆ ಎನ್ನುವ ಲೆಕ್ಕವನ್ನು ತೆಗೆದುಕೊಳ್ಳುವುದಾದರೆ, ಅವೊತ್ತಿನ ದಿವಸವೇ ಹೇಳಿದಹಾಗೆ, ಮೈಸೂರು ದೇಶದಲ್ಲಿ 8 ಲಕ್ಷ ಜನ ಸುಖವಾಗಿ ಜೀವನ ಮಾಡುತ್ತಾರೆ. 9 ಲಕ್ಷ ಜನ ಆರ್ಟಿಫಿಷಿಯಲಿ ಪ್ರೊಟೆಕ್ಟೆಡ್ ಏರಿಯಾದಲ್ಲಿ, ಎಂದರೆ ಮಾರ್ಕೋನ ಹಳ್ಳಿ, ಕಣ್ವ, ಕೃಷ್ಣರಾಜಸಾಗರ ಈ ಪ್ರದೇಶಗಳಲ್ಲಿ ಇದ್ದಾರೆ, 60 ಲಕ್ಷ ಜನ ಕ್ಷಾಮ ಪೀಡಿತ ಪ್ರದೇಶದಲ್ಲಿ ಇದ್ದಾರೆ. ಈ 60 ಲಕ್ಷ ಜನಗಳಲ್ಲಿ ಬೆಂಗಳೂರು ಮತ್ತು ಕೆ.ಜಿ.ಎಫ್. ಈ ಎರಡೂ ಸೇರಿಕೊಂಡಿವೆ. ಈ ಎರಡರಿಂದ 10 ಲಕ್ಷ ಜನ ಆಗುತ್ತಾರೆ. ನಾನು ಹೇಳುವುದು ಈ 10 ಲಕ್ಷ ಜನಗಳಿಗೆ ಸಾಲದು ಎಂದರೆ ಸರ್ಕಾರದವರು ಲೆಕ್ಕಾಚಾರ ಹಾಕಿ ವರ್ಷ ವರ್ಷಕ್ಕೆ ತಾವು ಅಕ್ಕಿಯನ್ನು ಏನು ತರಿಸುತ್ತೀರಿ ಅದನ್ನು ಅವರಿಗೇ ಕೊಟ್ಟು ಬಿಡಿ. ನಮ್ಮ ದೇಶದಲ್ಲಿರುವುದನ್ನು ನಾವು ಹೇಗಾದರೂ ಹಂಚಿಕೊಳ್ಳುತ್ತೇವೆ. ಅದು ಹೇಗೆಂದರೆ, ಮಧ್ಯಾಹ್ನ 12 ಘಂಟೆಗೆ ಯಾವ ಒಬ್ಬ ಬಡವನೇ ಬರಲಿ ನಾವು ಊಟ ಮಾಡದೇ ಅವನಿಗೆ ಅನ್ನ ಹಾಕುತ್ತೇವೆ. ಪೇಟೆಯಲ್ಲಿ ದುಡ್ಡು ಕೊಟ್ಟರೂ ಕೂಡ ಅನ್ನ ಹಾಕುವುದಿಲ್ಲ. ನಮ್ಮ ದೇಶದ ಅಕ್ಕಿ ತೆಗೆದುಕೊಂಡು ಪೇಟೆಯವರಿಗೆ ಏಕೆ ಕೊಡುತ್ತೀರಿ ಎಂದು ನನ್ನ ಪ್ರಶ್ನೆ. ಬೆಂಗಳೂರು, ಕೆ.ಜಿ.ಎಫ್. ನಲ್ಲಿರತಕ್ಕ 10 ಲಕ್ಷ ಜನಗಳಿಗೆ ಲೆಕ್ಕ ಹಾಕಿಕೊಂಡು ತರಿಸಿ, ಅವರಿಗೆ ಕೊಡಿ. ಇವೊತ್ತು ಬೆಂಗಳೂರು, ಕೆ.ಜಿ.ಎಫ್. ನಲ್ಲಿ ಇರತಕ್ಕ ಬಡವರು ಎಂದರೆ 3 ಲಕ್ಷ ಜನ. ಈ ಮೂರು ಲಕ್ಷ ಜನಕ್ಕೆ ಹಳೇ ದರದಂತೆ, ರೂಪಾಯಿಗೆ 2 ಸೇರಿನಂತೆ ಅಕ್ಕಿಕೊಟ್ಟರೆ ಏನೂ ನಷ್ಟವಾಗುವುದಿಲ್ಲ. ಶ್ರೀವರ್ಮಾ ಇಮಾಂರವರು ಹೇಳಿದಹಾಗೆ ಸರ್ಕಾರಕ್ಕೆ 25 ಲಕ್ಷ ರೂಪಾಯಿ ಇವೊತ್ತು ನಷ್ಟಆದೀತು, ಅದೂ ಬಡವರಿಗೋಸ್ಕರ. ಅನೇಕ ಜನ ಜವಾನರು ಇದ್ದಾರೆ, ಅವರಿಗೆ ಕೊಡಿ. ಸರ್ಕಾರಿ ನೌಕರರೂ ಇದ್ದಾರೆ, ಅವರಿಗೆ ಕೊಡಿ. ಸಾವಿರಾರು ರೂಪಾಯಿ ತೆಗೆದುಕೊಳ್ಳುವವರಿಗೆ ಕೊಡಬೇಡಿ. ಅವರಿಗೆ ಬೇಕಾದಷ್ಟು ಆಹಾರವಿದೆ, ಕೊಂಡುಕೊಳ್ಳುತ್ತಾರೆ. ನಾನು ಹೇಳುವುದು ಹಳ್ಳಿಯಲ್ಲಿರತಕ್ಕದ್ದನ್ನು ಕಿತ್ತುಕೊಂಡು ಬಂದು ಅವರಿಗಿಲ್ಲದೇ ಇನ್ನೊಬ್ಬರಿಗೆ ಕೊಡುವುದು ಏನು ಅರ್ಥ? ಚಾಲ್ತಿಸುಗ್ಗಿಯಲ್ಲಿ 16,17,097 ಪಲ್ಲಾ ಭತ್ತ ತೆಗೆದುಕೊಂಡು 3,22,78,375 ರೂಪಾಯಿಗಳಿಗೆ ವ್ಯಾಪಾರಸ್ಥರಿಗೆ ಕೊಟ್ಟು, 4, 95, 26, 509 ರೂಪಾಯಿಗಳನ್ನು ಮಾಡುತ್ತೇವೆ ಎಂದು ಸರ್ಕಾರದವರು ಧೈರ್ಯವಾಗಿ ಕೊಟ್ಟಿದ್ದೀರಲ್ಲಾ!

Sri H. SIDDAVEERAPPA.—May I intervene with your permission, Sir?

Mr. SPEAKER.—When It was discussed earlier, you stated you would explain it when the time arises.

Sri H. SIDDAVEERAPPA.—I only said that it is a fictitious figure.

Sri M. SHANKAR LINGE GOWDA.—I can understand the explanation. I would explain what he would explain. I know the explanation. (laughter.)

Mr. SPEAKER.—When Qn. No. 451 was asked, the Minister has answered as I indicated above.

ಶ್ರೀ ಎಂ. ಶಂಕರಲಿಂಗೇಗೌಡರು.—ಇದರಲ್ಲಿ ಖಂಡಿತವಾಗಿಯೂ ಅವರಿಗೆ ಲಾಭ ಬರುತ್ತದೆ ಎಂದು ಲೆಕ್ಕಹಾಕಿದ್ದೇನೆ. ಇದಕ್ಕೆ ಜವಾಬು ಅವರು ಏನು ಹೇಳಿದರು ಎಂದರೆ ಅಲ್ಲಿಂದ ತರಿಸುವುದು, ಇಲ್ಲಿಂದ ತರಿಸುವುದು ಎರಡೂ ಸೇರಿ ಮಾರುತ್ತೇವೆ ಎಂದು ಹೇಳಿದರು. ನಿಶ್ಚಯ. ಸಿಟಿಯವರಿಗೂ ನಮಗೂ ಸಂಬಂಧವಿಲ್ಲ. ನೀವು ತರಿಸಿಕೊಂಡದ್ದನ್ನು ಸಿಟಿಯವರಿಗೆ ಕೊಟ್ಟುಬಿಡಿ.

ಇದರಲ್ಲಿ ಎರಡು ಅಂಶಗಳಿವೆ: ಸಿಟಿಯವರಿಗೆ ಮಾತ್ರ ನಾವು ಸಹಾಯ ಮಾಡಕೂಡದು, ಎಲ್ಲರಿಗೂ ಒಂದೇರೀತಿ ಸಹಾಯ ಮಾಡಬೇಕೆಂಬುದು ಹೊಸ ಮಂತ್ರಿಮಂಡಳದ ಆಸೆ. ಹಳೆಯ ಮಂತ್ರಿ ಮಂಡಳದವರು ಒಂದು ಪತ್ರಿಕಾಗೋಷ್ಠಿಯನ್ನು ಕರೆದು ಅದರಲ್ಲಿ ಹೇಳಿದ ಸ್ಟೇಟ್‌ಮೆಂಟಿನ

(ಶ್ರೀ ಎಂ. ಶಂಕರಲಿಂಗೇಗೌಡರು)

ರೀತಿಯೇ ಬೇರೆ ರೀತಿಯಿದೆ. ಪತ್ರಿಕೆಗಳಲ್ಲಿ ನಾಲ್ಕು ಕಲವುಗಳಲ್ಲಿ ಈ ಸ್ಟೇಟ್‌ಮೆಂಟ್ ಬಂದಿತ್ತು. ಈಗ ನಮ್ಮ ಮಂತ್ರಿಗಳು ಹೇಳಿದ್ದನ್ನೂ ಆಗ ಬಂದಿದ್ದ ಸ್ಟೇಟ್‌ಮೆಂಟನ್ನೂ ನೋಡಿದರೆ, ಅದೊಂದು ಬರೀ ಥಳಕು ಸ್ಟೇಟ್‌ಮೆಂಟ್ ಎಂದು ಕಾಣುತ್ತದೆ. ಆದೇನೇ ಆಗಲಿ, ಅವರವರಿಗೇ ಬಿತ್ತು. ಆಗ್ಗೆ ಮಳವಳ್ಳಿ ವೀರಪ್ಪನವರು.........................

Mr. SPEAKER.—The Member has two minutes more.

ಶ್ರೀ ಎಂ. ಶಂಕರಲಿಂಗೇಗೌಡರು.—ನಾನು ಒಳ್ಳೆಯದನ್ನು ಹೇಳುವಾಗಲೇ ಹೀಗೆ 'two minutes more' ಎಂದು ಹೇಳುತ್ತೀರಿ! ನಾನು independent ಸದಸ್ಯ, ಸ್ವತಂತ್ರ ಅಭಿಪ್ರಾಯಗಳನ್ನು ಕೊಡುವವನು. ಒಳ್ಳೆಯ intricate ವಿಷಯಗಳನ್ನು ತಿಳಿಸುತ್ತಿರುವಾಗ ಈ ರೀತಿ ಗಲಾಟೆಯಾಗಿಬಿಟ್ಟರೆ ಏನು ಮಾಡುವುದು?

ಈಗ ನಾನು ಹೇಳುವುದು, ನಮ್ಮ ಬತ್ತ ತೆಗೆದುಕೊಂಡಿದಕ್ಕೆ ಸರಿಯಾಗಿ ಬೋನಸ್ ಕೊಡಬೇಕೆಂಬುದು ಒಂದು. ಎರಡನೆಯದು, ಈ ಸಚಿವರು ಕೊಟ್ಟ ಹೇಳಿಕೆಯಲ್ಲಿ ನಮೂದಿಸಿರುವಂತೆ ಬೊಂಬಾಯಿನಲ್ಲಿ ಎರಡನೆಯ ರಖಂ ಅಕ್ಕಿಗೆ ಪಲ್ಲಾ 88 ರೂಪಾಯಿಗಳಿವೆ. ನಮ್ಮ ದೇಶದಲ್ಲಿ ಅದಕ್ಕೆ ರೂ. 56-4-0. ಒಂದನೆಯ ರಖಂ ಒಳ್ಳೆಯ ಅಕ್ಕಿ ಅಲ್ಲಿ 91 ರೂಪಾಯಿಯಿದೆ; ನಮ್ಮಲ್ಲಿ 66 ರೂಪಾಯಿಯಿದೆ. ಇವೆರಡನ್ನೂ ನೋಡಿದರೆ ನಮ್ಮ ಸರ್ಕಾರದವರು ಇಲ್ಲಿ ಕಂಟ್ರೋಲನ್ನು ತೆಗೆದು ಬಿಟ್ಟರೂ ಬೆಲೆ 91 ರೂಪಾಯಿಗಳಿಗೆ ಮೇಲ್ಪಟ್ಟು ಹೋಗುತ್ತದೆಯೇ? ಅದಕ್ಕೆ ಮೇಲೆ ಎಂದಿಗೂ ಹೋಗಲಾರದು. 95 ರೂಪಾಯಿಗಳಿಗೆ ಮೇಲ್ಪಟ್ಟು ಹೋಗುವ ಸೂಚನೆಗಳಿದ್ದರೆ ನೀವು ಕಂಟ್ರೋಲ್ ಮಾಡಿ. ಆದ್ದರಿಂದ 91 ರೂಪಾಯಿನೊಳಗೆ ಸಿಕ್ಕುವ ಸಂದರ್ಭದಲ್ಲಿ ಕಂಟ್ರೋಲ್ ಏಕೆ? ಆದರಿಂದ ನಾನು ಹೇಳುವುದೇನೆಂದರೆ—ಇನ್ನು ಒಂದೆರಡು ತಿಂಗಳವರೆಗೂ ಈಗ ಯಾವರೀತಿ ಕಂಟ್ರೋಲ್ ಎಂಬ ಶಬ್ದವನ್ನು ಉಪಯೋಗಿಸಿ ಬೇಕಾದವರೆಲ್ಲರೂ ಯಾವ ಅಡ್ಡಿಯೂ ಇಲ್ಲದೆ ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಬಹುದೆಂದು ಒಂದು ಥಳಕು ಆರ್ಡರನ್ನು ಮಾಡಿದ್ದೀರಲಾ ಅದೇ ಥಳಕಿನಲ್ಲೇ ನಡೆದುಕೊಂಡು ಹೋಗಲಿ. ಅಷ್ಟೇ ಹೊರತು ಈಗ ಪೂರ್ತಿಯಾಗಿ ಕಂಟ್ರೋಲ್ ಎಂಬ ಶಬ್ದವನ್ನೇ ತೆಗೆದುಬಿಟ್ಟರೆ ಬಹಳ ಕಷ್ಟಕ್ಕೆ ಬರಬಹುದು. ಏಕೆಂದರೆ ಮಳೆ ಇನ್ನೂ ಹೊಯ್ದಿಲ್ಲ. ತೆನೆ ಕಾಣುವವರೆಗೂ ಸ್ವಲ್ಪ ಕಾದಿರುವುದು ಒಳ್ಳೆಯದು. ಮದ್ರಾಸಿನಲ್ಲಿ ಕಂಟ್ರೋಲನ್ನು ತೆಗೆದುಬಿಟ್ಟರು, ಇಲ್ಲಿಯೂ ತೆಗೆದುಬಿಡಬೇಕೆನ್ನುವ ವಾದ ಸರಿಯಲ್ಲ. ಮದ್ರಾಸಿನಲ್ಲಿ ಏನಾದರೂ ಏಟು ಬಿತ್ತೆಂದರೆ ರಾಜಾಜಿ ಸಾಹೇಬರೆ ಇರುವುದಿಲ್ಲ!! ಆದ್ದರಿಂದ ಪೋಲೀಸಿನವನು ಹೇಗೆ ರಾತ್ರಿ ಹೊತ್ತು ಕಳ್ಳ ಹೊಡೆದುಕೊಂಡು ಹೋದರೂ ಕಾಣದಂತೆ ಮಲಗಿಕೊಂಡಿರುತ್ತಾನೋ ಹಾಗೆಯೇ ನೀವು ಈ ಕಂಟ್ರೋಲಿನ ವಿಷಯದಲ್ಲಿ ಹೆಚ್ಚಿಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೋಗದೆ ಸುಮ್ಮನಿರಬೇಕು. ದರದ ವಿಚಾರದಲ್ಲಿ ರೂಪಾಯಿಗೆ ಒಂದೂವರೆ ಸೇರಿನಂತೆ ಇವೊತ್ತೇನೂ ಎಲ್ಲರೂ ಕೊಡುತ್ತಿಲ್ಲ. ಬ್ಲಾಕ್ ಮಾರ್ಕೆಟ್ಟನಲ್ಲಿ ಸಿಕ್ಕುವುದೂ ಕಷ್ಟವಾಗಿ ಗೋಧಿ ನಿಂತಿತು, ಹುಳಿತಿತು ಎಂದು ಹೇಳುವುದೆಲ್ಲಾ ಬರೀಸುಳ್ಳು. ಇನ್ನು ಒಂದು ತಿಂಗಳು ಹೋಗಲಿ, ಜನರು ಆ ಹುಳುಗಳನ್ನೇ ತಿನ್ನುವ ಗತಿ ಬರಬಹುದು! ಏಕೆಂದರೆ ಈಗಿನ್ನೂ ರಾಗಿಯ ಬೆಳೆಯನ್ನೇ ಕಾಣುತ್ತಿಲ್ಲ. ದುರ್ಭಿಕ್ಷ ಬರುವಂತಿದೆ ಇಂಥಾಕಾಲದಲ್ಲಿ ಕಂಟ್ರೋಲ್ ತೆಗೆಯಿರಿ ಎಂದು ಹೇಳುವವರು ದಾಸ್ತಾನಿಟ್ಟರುವವರು ಇರಬೇಕು ಅಷ್ಟೆ. ಕೊಳ್ಳುವವರೆಲ್ಲರೂ ಕಂಟ್ರೋಲ್ ತೆಗೆಯಬೇಡಿ ಎನ್ನುತ್ತಾರೆಂದು ಹೇಳಬಲ್ಲೆ. ಆದ್ದರಿಂದ ಈಗ ಮಂತ್ರಿಮಂಡಳದವರು, ಯಾರು ಏನೇ ಹೇಳಲಿ, ತಾವು ಮುಂದೇನಾದರೂ ಮತ್ತೆ ಈ ಭಾರ ಹೊರಬೇಕಾದ ಸಂದರ್ಭ ನೋಡಿಕೊಂಡು, ಹಿಂದು ಮುಂದೆ ಯೋಚನೆಮಾಡಿಕೊಂಡು, ತಮ್ಮ ಕೆಲಸ ಮಾಡ

ಬೇಕೇ ಹೊರತು, ತಂದೆ-ಮಕ್ಕಳು ಕತ್ತೆ ಹೊತ್ತುಕೊಂಡು ಹೋಗಿ ಕೊನೆಗೆ ಹಳ್ಳಕ್ಕೆ ಬಿದ್ದ ಕಥೆಯಂತೆ, ಅವರಿವರ ಮಾತುಗಳನ್ನು ಕೇಳಿಕೊಂಡು ದುಡುಕುವುದಕ್ಕೆ ಹೋಗಬಾರದು. ಈಗ ಕಂಟ್ರೋಲ್ ಯಾವ ರೀತಿ ಇದೆಯೋ ಅದೇರೀತಿ ಇಟ್ಟು ಕೊಂಡಿರಬೇಕೇ ವಿನಾ ಇನ್ನೇನೂ ವ್ಯತ್ಯಾಸ ಮಾಡಬೇಕಾಗಿಲ್ಲ. ದರಗಳು ಕೂಡ ಈಗಿರುವುದು ಸರಿಹೋಗಿದೆ ಯೆಂದು ಹೇಳಿ, ತಮ್ಮ ಈಗಿನ ಆಹಾರದ ನೀತಿ ಯಿಂದ ಇವೊತ್ತಿನ ದಿವಸ 95 ಲಕ್ಷ ರೂಪಾಯಿ ಗಳ ಉಳಿತಾಯವನ್ನು ಮಾಡಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಮುಖ್ಯವಾಗಿ ಹೊಸ ಮಂತ್ರಿಮಂಡಳದವರು ಹುಷಾರಾಗಿ ಹೋಗ ಬೇಕೇ ಹೊರತು, ಅವರಿವರು ಹೇಳಿದ್ದನ್ನು ಕೇಳಿದರೆ ಕತ್ತೆಯ ಮೇಲೆ ಸವಾರಿ ಮಾಡಿದ ಕಥೆಯ ಪಾಡಾಗುತ್ತದೆಂದು ಮತ್ತೊಮ್ಮೆ ಹೇಳಿ ಮುಗಿಸುತ್ತೇನೆ.

Mr. SPEAKER.—May I know how many Hon'ble Members would like to take part further in the debate ?

(Several Members stood up).

What time shall I prescribe ?

ಶ್ರೀ ಕೆ. ಹನುಮಂತಯ್ಯನವರು.—ಸ್ವಾಮಿ, ಸರ್ಕಾರದವರು ಉತ್ತರ ಕೊಡುವುದಕ್ಕೆ, ಈ ವಿಷಯದಲ್ಲಿ ತಮ್ಮ ಕೊನೆಯ ನಿರ್ಧಾರವೇನೆಂಬುದನ್ನು ತಿಳಿಸುವುವಕ್ಕೆ ಒಂದು ಘಂಟೆಯ ಕಾಲ ಬೇಕಾಗುತ್ತದೆ. ಆದ್ದರಿಂದ 4 ಘಂಟೆಗೆ ನಾವು ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟು ಮಿಕ್ಕ ಕಾಲವನ್ನು ಸದಸ್ಯರಿಗೆ ಕೊಡ ಬೇಕೆಂದು ನನ್ನ ಪ್ರಾರ್ಥನೆ.

Mr. SPEAKER.—So, we have 75 minutes before us. At the rate of 7 minutes, 7 or 8 Members can speak.

ಜನಾಬ್ ಜೆ. ಮಹಮ್ಮದ್ ಇಮಾಂ ರವರು.—ಈ ವಿಷಯದಲ್ಲಿ ಸರ್ಕಾರದವರು ವಿರೋಧ ಪಕ್ಷದವರುಗಳ ಮತ್ತು ಸ್ವತಂತ್ರರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ಬಹಳ ಮುಖ್ಯವಾದುದು. ಟ್ರೆಜರಿ ಬೆಂಚಿನಲ್ಲಿ ಆ ಕಡೆ ಇರುವವರ ಅಭಿಪ್ರಾಯ ಸರ್ಕಾರದವರಿಗೆ ಗೊತ್ತೇ ಇದೆ. ಸರ್ಕಾರದವರು ಏನು ಮಾಡಿದರೂ ಕೂಡ ಅವರು ಪುಷ್ಟೀಕರಿಸಿಯೇ ಪುಷ್ಟೀಕರಿಸುತ್ತಾರೆ. ಆದ್ದರಿಂದ ಸಾಮಾನ್ಯವಾಗಿ ವಿರೋಧ ಪಕ್ಷದವರಿಗೆ ಮತ್ತು ಸ್ವತಂತ್ರ ಸದಸ್ಯರಿಗೆ ಹೆಚ್ಚಿಗೆ ಅವಕಾಶಕೊಟ್ಟರೆ ಅವರ ಅಭಿಪ್ರಾಯಗಳೂ ಮತ್ತು ಭಿನ್ನಾಭಿಪ್ರಾಯಗಳೂ ತಿಳಿದು ಬರಲು ಅವಕಾಶವಾಗುತ್ತದೆ, ಆದಕಾರಣ ಸಾಧ್ಯವಾದಷ್ಟು ಈ ಕಡೆ ಅವಕಾಶ ಕೊಟ್ಟರೆ ಹೆಚ್ಚಿಗೆ ವಿಷಯಗಳು ತಮಗೆ ಗೊತ್ತಾಗುತ್ತವೆ.

I think it is in the interest of the Government, and it is desirable on the part of the Government, to gather the various opinions, for and against.

Mr. SPEAKER.—Naturally, I thought you argued at great length on behalf of the party !

Janab J. MOHAMED IMAM.—On behalf of the party also I argued.

Sri A. BHEEMAPPA NAIK (Molakalmuru).—Janab Imam has argued about food problem at great length. The other Members also should have equal opportunity. It is not a party question.

Mr. SPEAKER.—I will use my discretion. The time will be 5 to 7 minutes each and as many Members as possible will have the chance.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಅಧ್ಯಕ್ಷರೇ, ಆಹಾರದ ವಿಷಯದಲ್ಲಿ ಸರ್ಕಾರದ ಆಜ್ಞೆ ಯಾವ ರೀತಿಯಿದೆ ಯೆಂಬುದನ್ನು ಈಗ ಸರ್ಕಾರದ ಮಂತ್ರಿಗಳು ತಿಳಿಸಿದ್ದಾರೆ. ನನಗೆ ಕಾಲ ವಿಳಂಬಮಾಡಲು ಇಷ್ಟವಿಲ್ಲದಿರುವುದರಿಂದ ಒಂದೆರಡು ವಿಷಯಗಳನ್ನು ಮಾತ್ರ ಅರಿಕೆಮಾಡಿಕೊಂಡು ಮುಗಿಸುತ್ತೇನೆ. ಆಹಾರ ನಿಯಂತ್ರಣ ಹಾಕಿದ್ದರಿಂದ ದೇಶದಲ್ಲಿ ಆಹಾರಾಭಾವ ಯಾವ ರೂಪವನ್ನು ತಾಳಿತು, ಯಾವ ರೀತಿ ಆಹಾರದ ಅಭಾವ ಜಾಸ್ತಿಯಾಯಿತೆನ್ನುವುದಕ್ಕೆ ಬೇಕಾದಷ್ಟು ಕಾರಣಗಳಿವೆ. ಮೊದಲನೆಯದಾಗಿ ಆಹಾರದ ಬೆಳೆ ಕಡಮೆಯಾಗುತ್ತಾ ಬಂತು. ಕಾರಣ, ಶ್ರೀವರ್ಮಾ ಶಂಕರಲಿಂಗೇಗೌಡರು ಹೇಳಿದ ಹಾಗೆ, ಪಟ್ಟಣಗಳಲ್ಲಿ ಸರ್ಕಾರದವರು

(ಶ್ರೀ ಎಚ್. ಎಸ್. ರುದ್ರಪ್ಪನವರು)
ದವಸಗಳನ್ನು ಮಾರತಕ್ಕ ಬೆಲೆ ಅವರು ಕೊಳ್ಳುವ ಬೆಲೆಗಿಂತಲೂ ಕಡಮೆಯಾಗಿದ್ದುದರಿಂದ ಹಳ್ಳಿಯ ಜನರು ವ್ಯವಸಾಯವನ್ನು ಬಿಟ್ಟು ಪಟ್ಟಣಗಳಿಗೆ ಬಂದು ಕಂಟ್ರೋಲ್ ಬೆಲೆಗೆ ಕೊಂಡುಕೊಳ್ಳಲು ಪ್ರಾರಂಭಿಸಿದರು. ನನಗೆ ತಿಳಿದಿರುವಂತೆ, ಶಿವಮೊಗ್ಗ ಪಟ್ಟಣದಲ್ಲಿ ಹಿಂದೆ 26,000 ಜನಸಂಖ್ಯೆಯಿದ್ದದು ಇಂದು 42,000ಕ್ಕೆ ಏರಿರುವುದಕ್ಕೆ ಮುಖ್ಯಕಾರಣ, ಹಳ್ಳಿಗಳ ಕಡೆಯಿಂದ ಕೂಲಿಯವರೂ ಕೆಲಸವಿಲ್ಲದಿರುವವರೂ ಆ ಪಟ್ಟಣಕ್ಕೆ ಆಹಾರ ಸುಲಭ ದರದಲ್ಲಿ ಸಿಕ್ಕುತ್ತದೆಂದು ಬಂದು ಅಲ್ಲೇ ವಾಸವಾಗಿರುವುದು. ನಾನೇಕೆ ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆಂದರೆ, ಸರ್ಕಾರದವರು ಕೊಳ್ಳತಕ್ಕ ಬೆಲೆಗಿಂತಲೂ ಕಡಮೆ ದರದಲ್ಲಿ ಮಾರತಕ್ಕ ನೀತಿ ಸರಿಯಾಗಿಲ್ಲವೆಂಬುದನ್ನು ತೋರಿಸುವುದಕ್ಕೆ. ಸಬ್ಸಿಡಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇ ಬಹಳ ಅನ್ಯಾಯ ! ಆದ್ದರಿಂದ ಸರ್ಕರದವರು ಏನೇ ಆಗಲಿ ಇನ್ನು ಮೇಲೆ ಸಬ್ಸಿಡಿ ಹೆಚ್ಚಿಗೆ ಕೊಡಕೂಡದೆಂದು ನನ್ನ ಅಭಿಪ್ರಾಯ.

ಎರಡನೆಯದಾಗಿ, ಸರ್ಕಾರದವರು 7-8 ಕೋಟಿ ರೂಪಾಯಿಗಳನ್ನು ಸಬ್ಸಿಡಿಗಾಗಿ ಉಪಯೋಗಿಸುತ್ತಿದ್ದಾರೆಂದು ಹೇಳಿದರು. ಇದೇ 8 ಕೋಟಿ ರೂಪಾಯಿಗಳನ್ನು ನಿರಾವರಿ ಏರ್ಪಾಡುಗಳಿಗಾಗಿ ಕೊಟ್ಟಿದ್ದರೆ ಇಷ್ಟು ದಿನಕ್ಕೆ ನಮ್ಮ ದೇಶದಲ್ಲಿ ಆಹಾರದ ಅಭಾವ ಬಹುಮಟ್ಟಿಗೆ, ಶೇಕಡ 90 ರಷ್ಟು ಕಡಮೆಯಾಗುತ್ತಿತ್ತೆಂದು ನಾನು ಹೇಳಬಲ್ಲೆ. ಆದ್ದರಿಂದ ಹಿಂದೇನೋ ತಪ್ಪು ಮಾಡಿ ಸಬ್ಸಿಡಿ ಕೊಟ್ಟಿದ್ದರೂ ಇನ್ನು ಮುಂದೆ ಖಂಡಿತ ಕೊಡಕೂಡದು. ಈಗೇನೋ ಇಂಡಿಯಾ ಸರ್ಕಾರದವರಿಗೆ ಸಬ್ಸಿಡಿ ಕೊಡಬೇಕೆಂದು ಕೇಳಿದ್ದೇವೆ. ಅದು ನ್ಯಾಯವೋ ಅನ್ಯಾಯವೋ ಅದನ್ನು ಹೇಳ್ವುದಕ್ಕಿಷ್ಟಪಡುವುದಿಲ್ಲ. ಇಂಡಿಯಾ ಸರ್ಕಾರದವರೂ ಸಹ ಸಬ್ಸಿಡಿ ಕೊಡುವುದು ನ್ಯಾಯವಲ್ಲ. ಇದೇ ಹಣವನ್ನು ರೈತರಿಗೆ ಕೊಟ್ಟಿದ್ದರೆ ಹೆಚ್ಚಿಗೆ ಬೆಳೆ ಬೆಳೆಯಲು ಅವಕಾಶವಾದರೂ ಆಗುತ್ತಿತ್ತು. ಈಗ ಸರ್ಕಾರದ ವರಮಾನ ಕಡಮೆಯಾಯಿತು, ದೇಶದ ದುಡ್ಡು ದುರುಪಯೋಗವಾದಂತಾಗುತ್ತಿದೆಯೆಂಬ ಮುಂದಾಲೋಚನೆಯಿಂದ ಅವರಿದನ್ನು ನಿಲ್ಲಿಸಿದ್ದಾರೆಂದು ಹೇಳಬಹುದು. ಆದ್ದರಿಂದ ಇಂಡಿಯಾ ಸರ್ಕಾರದವರಾಗಲಿ, ನಮ್ಮ ಸರ್ಕಾರದವರಾಗಲಿ ಸಬ್ಸಿಡಿಕೊಡಬೇಕೆಂದು ಹೇಳುವುದು ನನಗೆ ಸೂಕ್ತವಾಗಿ ಕಾಣುವುದಿಲ್ಲ ; ಈ ಸಭೆಯವರೂ ಇದನ್ನು ಒಪ್ಪುತ್ತಾರೆಂದು ನಂಬಿದ್ದೇನೆ. ಹೀಗೆ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಆರು ಕೋಟಿ ರೂಪಾಯಿಗಳನ್ನೂ ನಮ್ಮ ನಿರಾವರಿಯೋಜನೆಗಳಿಗೆ ಖರ್ಚುಮಾಡುವುದಾದರೆ ಈ ಹತ್ತು ವರುಷಗಳಲ್ಲಿ ಆಹಾರಾಭಾವ ಹೋಗಲಾಡಿಸಲು ಸಾಧ್ಯವಾಗದ್ದನ್ನು ಇನ್ನೈದು ವರ್ಷಗಳಲ್ಲೇ ಸರಿಪಡಿಸಿಕೊಳ್ಳಬಹುದೆಂದು ಹೇಳುವುದು ಸರಿಯಾದ ವಾದ.

ವಿರೋಧ ಪಕ್ಷದ ನಾಯಕರು ಈಗ ಆಹಾರದ ಬೆಲೆ ಜಾಸ್ತಿಯಾಗಿದೆ ಎಂದು ಹೇಳಿದರು. ಯಾವ ಒಂದು ನಿಯಂತ್ರಣವನ್ನೇ ಆಗಲಿ, ಸರ್ಕಾರದವರು ಅದರ ಆಡಳಿತದ ವ್ಯವಸ್ಥೆಮಾಡತಕ್ಕ ಕಾಲದಲ್ಲಿ ಅವರು ಕೊಳ್ಳುವವರ ಮತ್ತು ಮಾರುವವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ನ್ಯಾಯವೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಆಹಾರ ಧಾನ್ಯಗಳ ಬೆಲೆ ಯಾವರೀತಿ ಹೆಚ್ಚಾಗಿದೆ, ದೇಶದಲ್ಲಿ ಇದರಿಂದ ಬೆಳೆಯುವವರ ಸಂಖ್ಯೆ ಹೆಚ್ಚಾಗಿದೆಯೆ ಎಂದು ನೋಡುವುದಾದರೆ, 1939-40 ರಲ್ಲಿ ಬೆಳೆಯುತ್ತಿದ್ದ ಜಮೀನಿನ ವಿಸ್ತೀರ್ಣ 1945-46 ರಲ್ಲಿ ಕಡಮೆಯಾಯಿತು. ಎಷ್ಟೋ ಜಮೀನು ಬೀಳು ಬಿದ್ದಿದೆ. ಜನರಲ್ಲಿ ಬೆಳೆಯತಕ್ಕ ಮನೋಭಾವ ಕಡಮೆಯಾಗಿರುವುದೇ ಇದಕ್ಕೆ ಕಾರಣ. ಬೆಳೆಯತಕ್ಕದ್ದನ್ನೇ ಮರೆತರು, ಪಟ್ಟಣಗಳಿಗೆ ಬಂದು, ಹಳ್ಳಿಗಳಕಡೆ ಬೆಳೆಯತಕ್ಕವರೂ ಕೂಡ 'ಕಮರ್ಷಿಯಲ್ ಕ್ರಾಪ್ಸ್' ಬೆಳೆಯುವುದಕ್ಕೆ ಪ್ರಾರಂಭಮಾಡಿದರು. ಇದು ಸ್ವಾಭಾವಿಕ, ಅಸ್ವಾಭಾವಿಕವೇನೂ ಅಲ್ಲ. ನೂರು ರೂಪಾಯಿಗಳಿಗೆ ಬದಲು ಇನ್ನೂರು ರೂಪಾಯಿ ಸಂಬಳ

ಬರುತ್ತದೆಂದರೆ ಮೈಸೂರಿನಿಂದ ಬೊಂಬಾಯಿಗೆ ಹೋಗುತ್ತಾರೆ. ಹಾಗೆಯೇ ಹೆಚ್ಚುಬೆಲೆ ಬರುವುದನ್ನು ಬೆಳೆಯುವುದು ನ್ಯಾಯವೇ ಹೊರತು ಅನ್ಯಾಯವಲ್ಲ. ಇದನ್ನು ನಿರೋಧಮಾಡಬೇಕೆಂದು ಹೇಳಿದರು, ವಿರೋಧ ಪಕ್ಷದ ನಾಯಕರು. ಇಂಥಾದ್ದನ್ನು ಸರ್ಕಾರಕ್ಕೆ ಹೇಳಿದರಲ್ಲಾ ಎಂದು ವಿಷಾದ ಪಡುತ್ತಿದ್ದೇನೆ. ರೈತರು ಈಗಾಗಲೇ ಕಷ್ಟಪರಿಸ್ಥಿತಿಯಲ್ಲಿದ್ದಾರೆ. ರೈತರು ಹಣವನ್ನು ಶೇಖರಣೆ ಮಾಡಿದ್ದಾರೆಂದು ಅವರು ಭಾವಿಸಿರುವಂತೆ ಕಾಣುತ್ತದೆ. ರೈತನಲ್ಲಿ ಹಣವಿದೆಯೇ ಎಂದು ಯಾವ ಹಳ್ಳಿಗೆ ಬೇಕಾದರೂ ಹೋಗಿ ನೋಡಲಿ. ಯಾವ ರೀತಿ ಹಣ ಬಂತೋ ಅದೇ ರೀತಿ ಖರ್ಚಾಗಿದೆ ಯೆಂಬುದನ್ನು ನಮ್ಮ ಸ್ನೇಹಿತರು ತಿಳಿಯಬೇಕು. ಸರ್ಕಾರದವರೇ ಆಗಲಿ, ಈ ಸಭೆಯಲ್ಲಿ ಯಾರೇ ಆಗಲಿ ಅಥವಾ ದೇಶದಲ್ಲಿ ಯಾರೇ ಆಗಲಿ ರೈತರಲ್ಲಿ ಹಣವಿದೆಯೆಂದು ತಿಳಿದಿದ್ದರೆ ಅದು ತಪ್ಪಭಿಪ್ರಾಯ. ನಮ್ಮ ಡಿಸ್ಟ್ರಿಕ್ಟಿನಲ್ಲಿ ನನಗೆ ಗೊತ್ತಿರುವಹಾಗೆ ಎಷ್ಟೋ ಹೆಚ್ಚಾಗಿ ಧಾನ್ಯವನ್ನು ನಿಗದಿಬೆಲೆಗೆ ಸರ್ಕಾರಕ್ಕೆ ಕೊಡುತ್ತಿದ್ದಾರೆ. ಈ ಸಾಲಿನಲ್ಲಿ 50 ಸಾವಿರ ಪಲ್ಲ ಕೊಡತಕ್ಕ ತಾಲ್ಲೂಕಿನಲ್ಲಿ 60-70 ಸಾವಿರ ಪಲ್ಲ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು? ಅವರಲ್ಲಿ ಅಷ್ಟು ಹಣವಿದ್ದಿದ್ದರೆ ಹೀಗೆ ಕೊಡುತ್ತಿದ್ದರೆ? ಖಂಡಿತ ಇಲ್ಲ. ಆರ್ಥಿಕಮುಗ್ಗಟ್ಟೇ ಇದಕ್ಕೆ ಕಾರಣ. ಬೆಲ್ಲ, ಅಡಿಕೆ ಇವುಗಳ ಬೆಲೆಗಳು ಇಳಿದುಹೋಗಿ ಅವರು ಹಣದ ಮುಗ್ಗಟ್ಟಿನ ಒತ್ತಾಯದಿಂದ ಸರ್ಕಾರಕ್ಕೆ ದವಸವನ್ನು ಹೀಗೆ ಕೊಟ್ಟರೆಂದು ನನಗೆ ಗೊತ್ತಿದೆ. ಸೆಪ್ಟೆಂಬರ್, ಅಕ್ಟೋಬರ್ ಹೊತ್ತಿಗೆ ತಮ್ಮ ದವಸ ಮುಗಿದುಹೋಗಿ ವ್ಯವಸಾಯಗಾರರೂ ಸಣ್ಣ ಸಣ್ಣ ಹಿಡುವಳಿದಾರರೂ ಆಹಾರವಿಲ್ಲದೆ ತೊಂದರೆ ಪಡುತ್ತಿದ್ದುದು ನನಗೆ ಗೊತ್ತಿದೆ. ಹೀಗಿರುವಾಗ ಅವರಲ್ಲಿ ಹೆಚ್ಚು ಹಣವಿದೆ ಎಂದು ತಿಳಿದುಕೊಳ್ಳಬಾರದು. ಹೊಸ ನಗರಕ್ಕೆ ಹೋಗಿದ್ದಾಗ ಏಕೆ ಇದ್ದ ದವಸನ್ನೆಲ್ಲಾ ಕೊಟ್ಟಿರಿ ಎಂದು ಕೇಳಿದೆವು. ಆಗ 'ಏನು ಮಾಡುವುದು, ನಮ್ಮಲ್ಲಿ ಹಣವಿಲ್ಲ' ಎಂದು ಹೇಳಿದರು. ಇದರಿಂದ ನಮ್ಮಲ್ಲಿ ಜಾಸ್ತಿದವಸವಿದೆ, ಕಂಟ್ರೋಲ್ ತೆಗೆಯಬೇಕು ಎಂಬ ಮನೋಭಾವವನ್ನು ಬಿಡಬೇಕು.

ಪೂರ್ತಿಯಾಗಿ 'ಡೀ ಕಂಟ್ರೋಲ್' ಮಾಡಬೇಕೆಂದು ವಿರೋಧಪಕ್ಷದ ನಾಯಕರು ಹೇಳುತ್ತಾರೆ. ಸರ್ಕಾರದಲ್ಲಿ ಮುಖ್ಯವಾಗಿ ಮನವಿ ಮಾಡಿಕೊಳ್ಳುವುದಿಷ್ಟು; ಯಾರೂ ನಿಯಂತ್ರಣ ಬೇಕೆಂದು ಹೇಳುವುದಿಲ್ಲ. ಇದರಿಂದ ಬಹಳ ಕಷ್ಟ. ಆದರೂ ಇರಬೇಕೆಂದು ಹೇಳುವುದಕ್ಕೆ ನಮಗೂ ದುಃಖವಾಗುತ್ತದೆ. ಜನರು ಕಷ್ಟಪರಂಪರೆಗಳನ್ನು ಈಗಾಗಲೇ ಹೆಚ್ಚಾಗಿ ಅನುಭವಿಸಿದ್ದಾರೆ. ದೇಶದಲ್ಲಿ ನಿಯಂತ್ರಣವಿರಬೇಕೆಂಬ ಆಶೆ ಅಥವಾ ಉತ್ಸಾಹ ಯಾರಿಗೂ ಇಲ್ಲ. ಆದರೆ ಮಳೆ ಬೆಳೆಗಳಿಲ್ಲದೇ ಇರುವುದರಿಂದ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ದಿನೇ ದಿನೇ ಹೆಚ್ಚುತ್ತಿದೆ. ಆದಕಾರಣ ಸೆಪ್ಟೆಂಬರ್, ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಜನರಿಗೆ ಆಹಾರ ಧಾನ್ಯವನ್ನು ಕೊಳ್ಳುವುದಕ್ಕೆ ಶಕ್ತಿಯಿಲ್ಲದೆ ತೊಂದರೆ ಬರಬಹುದು. ಈ ಕಾರಣದಿಂದ ಸರ್ಕಾರದವರು ಯೋಚನೆಮಾಡಿ, 'ಡೀ ಕಂಟ್ರೋಲ್' ಈಗ ಎಷ್ಟು ಮಟ್ಟಿಗಿದೆಯೋ ಇದೇ ರೀತಿಯಲ್ಲಿ ಚಾಚೂ ಮುಂದುವರಿಯದೆ ಅಕ್ಟೋಬರ್‌ವರೆಗೆ ಮುಂದುವರಿಸಿಕೊಂಡು ಬರಬೇಕೆಂದು ಸರ್ಕಾರದಲ್ಲಿ ವಿನಂತಿ. ಇದಕ್ಕಿಂತ ಹೆಚ್ಚು 'ಡೀ ಕಂಟ್ರೋಲ್' ಖಂಡಿತ ಮಾಡಬಾರದು. ಈ ಅಧಿವೇಶನಕ್ಕೆ ಬರುವಾಗ ಪೂರ್ತಿ 'ಡೀ ಕಂಟ್ರೋಲ್' ಆಗಬೇಕೆಂಬ ಅಭಿಪ್ರಾಯ ನನಗೂ ಇತ್ತು. ಆದರೆ ಈ ಹೊತ್ತು ನನಗೆ ಅನೇಕ ಪತ್ರಗಳು ಬಂದಿವೆ. ಅವುಗಳನ್ನು ನೋಡಿದರೆ ದೇಶದಲ್ಲಿ ಎಲ್ಲಿಯೂ ಇನ್ನೂ ಬಿತ್ತನೆ ಆಗಿಲ್ಲ. ವ್ಯವಸಾಯಗಾರರೂ ದವಸವನ್ನು ವಿಶೇಷವಾಗಿ ಕೊಳ್ಳುತ್ತಿದ್ದಾರೆ, ಇದಕ್ಕಾಗಿ ಒಡವೆಗಳನ್ನು ಅಡವಿಡುತ್ತಿದ್ದಾರೆ, ಎಂದು ಕಾಗದ ಬಂದಿದೆ. ಆದಕಾರಣ ಕಂಟ್ರೋಲನ್ನು ಈಗಿರುವುದಕ್ಕಿಂತ ಹೆಚ್ಚು ಸಡಿಲ ಮಾಡಬಾರದೆಂದು ಹೇಳುತ್ತೇನೆ.

ಆಹಾರಧಾನ್ಯ ಮಾರಲು ವ್ಯಾಪಾರಗಾರರಿಗೆ ಲೈಸೆನ್ಸ್ ಕೊಡುತ್ತೇವೆಂದು ಹೇಳುತ್ತೀರಿ. ಇನ್ನು ಮೂರು ತಿಂಗಳುಕಾಲದವರೆಗೂ, ಸುಭಿಕ್ಷ

(ಶ್ರೀ ಎಚ್. ಎಸ್. ರುದ್ರಪ್ಪನವರು)
ವಾಗುತ್ತದೆಯೆ ಎಂಬುದನ್ನು ಅಂಕಿ ಅಂಶಗಳಿಂದ ನೋಡಿದ ವಿನಾ, ಹಾಗೆಮಾಡಬಾರದು. ಈಗ ನಮ್ಮ ಜಿಲ್ಲೆಯಲ್ಲಿ ಕಂಟ್ರೋಲ್ ರೇಟು ಪಲ್ಲಕ್ಕೆ 20 ರೂಪಾಯಿಗಳು, ಅದನ್ನು 25-26 ರೂಪಾಯಿಗಳಿಗೆ ಕೇಳುತ್ತಾರೆ ವ್ಯಾಪಾರಗಾರರು. ಸರ್ಕಾರದವರು ವ್ಯಾಪಾರಸ್ಥರಿಂದ ಅಂಕಿ ಅಂಶಗಳನ್ನು ಪಡೆದು ಹತೋಟಿ ಅವರ ಮೇಲಿಡುತ್ತೇವೆ ಎಂದರೆ ಸಾಧ್ಯವಾಗುವುದಿಲ್ಲ. ಎಷ್ಟೇ ಜವಾಬ್ದಾರಿಯನ್ನು ತೆಗೆದುಕೊಂಡರೂ, ಎಷ್ಟೇ ಎಚ್ಚರಿಕೆ ತೆಗೆದುಕೊಂಡರೂ ನಾಳೆ ಕಷ್ಟವಾಗುತ್ತದೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಶ್ರೀ ವರ್ಾ ಶಂಕರಲಿಂಗೇಗೌಡರು ಹೇಳಿದ ಹಾಗೆ, ಪುನಃ ಹಿಂದಕ್ಕೆ ಹೋಗಬೇಕಾಗುತ್ತದೆಯೋ ಏನೋ ಎಂದು ಯೋಚನೆಮಾಡುತ್ತಿದ್ದೇವೆ ಈ ಹತೋಟಿ ವಿಚಾರದಲ್ಲಿ. ಈ ಕಂಟ್ರೋಲ್ ಏಕೆ ಬಂತು ಎಂಬುದನ್ನು ಯೋಚಿಸಿದರೆ, ಒಂದು ಸ್ಥಳದಲ್ಲಿರತಕ್ಕ ಮಾಲು ಇನ್ನೊಂದು ಕಡೆ ಹೊರಟುಹೋದರೆ ಆ ಸ್ಥಳದ ಜನರಿಗೆ ಅಭಾವವಾಗುತ್ತದೆ, ಹೀಗಾಗಬಾರದು ಎಂಬ ಉದ್ದೇಶದಿಂದ ಕಂಟ್ರೋಲ್ ಮಾಡಿದ್ದಾರೆ. ಆಹಾರ ಧಾನ್ಯದ ಚಲನೆಗೆ ಅವಕಾಶಕೊಟ್ಟರೆ 'ಸರ್‌ಪ್ಲಸ್' ಇರುವ ಸ್ಥಳಗಳಲ್ಲಿ ಕೂಡ ಅಭಾವ ವುಂಟಾಗಲು ಕಾರಣವಾಗುತ್ತದೆ. ಆದುದರಿಂದ ವ್ಯಾಪಾರಸ್ಥರಿಗೆ ಲೈಸೆನ್ಸ್ ಕೊಡಬಾರದೆಂದು ಪ್ರಾರ್ಥಿಸುತ್ತೇನೆ.

ಮೂರನೆಯದಾಗಿ, ನಾನು ಒಂದು ವಿಷಯ ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಕೆಲವರು ಆಹಾರಧಾನ್ಯಗಳ ಧಾರಣೆ ಬಹಳ ಜಾಸ್ತಿ ಎಂದು ಹೇಳಿದರು. ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ 'ಮದುವೆ ಆದ ಹೊರತು ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಟ್ಟಹೊರತು ಮದುವೆ ಆಗುವುದಿಲ್ಲ' ಎಂದು. ಆಹಾರಾಭಾವ ಕಡಮೆಯಾಗಬೇಕಾದರೆ ರೈತರಿಗೆ ಸಾಕಾದಷ್ಟು ಬೆಲೆ ಕೊಡುತ್ತೇವೆಂದು ಭರವಸೆ ಕೊಟ್ಟರೆ ಉತ್ಪತ್ತಿ ಹೆಚ್ಚು ಮಾಡಿ ಕೊಡುತ್ತಾರೆಯೇವಿನಾ ಬಲಾತ್ಕಾರದಿಂದ ಕಾನೂನು ಮಾಡಿದರೆ ಇದು ಸಾಧ್ಯವಾಗುವುದಿಲ್ಲ. ರೈತರಿಗೆ ಸಾಕಷ್ಟು ಹಣ ಸಿಕ್ಕುತ್ತದೆಂದರೆ, ನಿಮ್ಮ ನೀತಿಬೋಧನೆಯೂ ಬೇಡ, ಕಾನೂನೂ ಬೇಡ, ಹಿಮಾಲಯಾ ಪರ್ವತದ ತಪ್ಪಲಲ್ಲಾದರೂ ಬೆಳೆಯುತ್ತಾರೆ. ನೀವು ಹೆಚ್ಚು ಬೆಳೆ ಬೆಳೆಯಿರಿ ಎಂದು ಪ್ರಚಾರ ಮಾಡುವುದೂ ಬೇಡ. ಯಾವ ನಿಯಂತ್ರಣವಾದರೂ ಮಾಡಿ ಅಥವಾ ಬಿಡಿ ರೈತರಿಗೆ ಹೆಚ್ಚು ಬೆಲೆ ಸಿಕ್ಕುವ ಹಾಗೆ ಮಾಡಬೇಕೆಂದು ಸೂಚಿಸುತ್ತೇನೆ.

2-30 P.M.

ಶ್ರೀ ಎಸ್. ಗೋಪಾಲಗೌಡರು (ಸಾಗರ-ಹೊಸನಗರ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಒಂದು ದೊಡ್ಡ ಸಮಸ್ಯೆ ಚರ್ಚೆಗೆ ಬಂದಿದೆ. ಮಾನ್ಯ ಗೃಹಮಂತ್ರಿಗಳವರು ನಮ್ಮ ದೇಶದಲ್ಲಿ ಎಂದು ಈ ಆಹಾರ ಹತೋಟಿಗಳ ಆಜ್ಞೆ ಜಾರಿಗೆ ಬಂತು, ಅದು ಏನು ಕಾರಣದಿಂದ ಬಂತು, ಅದು ಹೇಗೆ ದಿನದಿನಕ್ಕೂ ಮುಂದುವರಿದುಕೊಂಡು ಬಂತು, ಮತ್ತು ಹಾಗೆ ಮುಂದುವರಿದುಕೊಂಡು ಬಂದದ್ದು ಈ ದಿವಸ ಯಾವ ಮಟ್ಟದಲ್ಲಿ ನಿಂತಿದೆ ಎಂಬೀ ಅನೇಕ ಸಂಗತಿಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ಈ ಆಹಾರ ಹತೋಟಿ ಆಜ್ಞೆಗಳು ಜಾರಿಗೆ ಬಂದದ್ದು ಎರಡನೆಯ ಮಹಾ ಸಂಗ್ರಾಮದ ಕಾಲದಲ್ಲಿ. ಈ ಹತೋಟಿಗಳನ್ನು ಜಾರಿಗೆ ತಂದದ್ದು, ದೇಶದಲ್ಲಿ ಜನರಿಗೆ ಮುಖ್ಯವಾಗಿ ಅವರ ನಿತ್ಯಜೀವನೋಪಾಯಕ್ಕೆ ಏನೇನು ವಸ್ತುಗಳು ಅಗತ್ಯವಾಗಿ ಆವಶ್ಯಕಗಳಾಗಿದ್ದವೋ ಅಂಥ ವಸ್ತುಗಳನ್ನು ಒಂದು ನ್ಯಾಯವಾದ ದರದಲ್ಲಿ ಒದಗಿಸಿ ಹಂಚುವುದಕ್ಕಾಗಿ.

ಈ ಆಹಾರದ ಕೊರತೆಯೆಂಬುದು ನಮ್ಮ ಒಂದು ಸಂಸ್ಥಾನಕ್ಕಾಗಲಿ, ಅಥವಾ ನಮ್ಮ ಇಂಡಿಯಾದೇಶ ಒಂದಕ್ಕಾಗಲಿ ಬಂದಿರತಕ್ಕದ್ದಲ್ಲ. ಇದು ಇಡೀ ಪ್ರಪಂಚಕ್ಕೇ ಉಂಟಾಗಿರತಕ್ಕ ಸಮಸ್ಯೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದರೆ ಇಂಥ ಕಠಿಣ ಸಮಸ್ಯೆಗಳು ಉಂಟಾಗಲು ಏನು ಒಂದು ಮುಖ್ಯಕಾರಣ ಎಂಬುದಕ್ಕೆ ಮಾಲ್ಥೂಸ್ ಎಂಬ ತತ್ವಜ್ಞರು ಏನು ಹೇಳಿದ್ದಾರೆಂದರೆ—ಪ್ರಜಾಸಂಖ್ಯೆ ದೇಶದಲ್ಲಿ

ದಿನದಿನಕ್ಕೂ ಮುಂದುವರಿಯುತ್ತಾ ಹೋಗಿ, ಆಹಾರಧಾನ್ಯಗಳ ಉತ್ಪತ್ತಿಯು ಅದೇ ದಾಮಾಷಾದಲ್ಲಿ ಮುಂದುವರಿಯದೇ ಹೋದರೆ ಇಂಥ ವಿಪತ್ತು ದೇಶಕ್ಕೆ ಒದಗುತ್ತದೆ ಎಂದು ಬಹಳ ಹಿಂದೆಯೇ ಇದನ್ನು ತಿಳಿಸಿದ್ದಾರೆ. ಇನ್ನೂ ಮುಂದುವರಿದು ಅವರು ಏನು ತಿಳಿಸಿದ್ದಾರೆಂದರೆ—ಹಾಗೆ ಜನಸಂಖ್ಯೆ ಏರುತ್ತಾ ಹೋದ ಹಾಗೆಲ್ಲಾ, ಅವರಿಗೆ ಆವಶ್ಯಕವಾದ ವಸ್ತುಗಳನ್ನು ಮತ್ತು ಮುಖ್ಯವಾಗಿ ಆಹಾರ ಪದಾರ್ಥಗಳನ್ನು, ಒದಗಿಸುವುದಕ್ಕೆ ಆ ಏರುತ್ತಿರುವ ಜನಸಂಖ್ಯೆಯ ದಾಮಾಷಕ್ಕೆ ಸರಿತೂಗುವಂಥ, ವಿಶ್ವವ್ಯಾಪಕವಾದಂಥ ಒಂದೊಂದು ಯೋಜನೆಗಳನ್ನು ಪ್ರತಿಯೊಂದು ರಾಷ್ಟ್ರವೂ ಸಿದ್ಧಪಡಿಸಿಟ್ಟುಕೊಳ್ಳಬೇಕೆಂದು ಬಹಳ ವರ್ಷಗಳ ಹಿಂದೆಯೇ ನಮಗೆಲ್ಲಾ ಒಂದು ಎಚ್ಚರಿಕೆಯನ್ನೂ ಸಹ ಇತ್ತಿದ್ದಾರೆ. ಈ ಮಹಾ ತತ್ವಜ್ಞಾನಿಯ ಎಚ್ಚರಿಕೆಗೆ ಅನುಗುಣವಾಗಿ ಪ್ರಪಂಚದಲ್ಲಿರತಕ್ಕ ಪ್ರತಿಯೊಂದು ದೊಡ್ಡ ದೊಡ್ಡ ರಾಷ್ಟ್ರಗಳೂ ಅಂಥ ಒಂದು ಯೋಜನೆಯನ್ನು ದೇಶದ ಮುಂದೆ ಇಡುತ್ತಲೇ ಬಂದಿವೆ. ಈ ಸಮಸ್ಯೆಗೆ ಸಂಬಂಧಪಟ್ಟಹಾಗೆ ಇದರಲ್ಲಿ ಎರಡು ಮುಖ್ಯ ಒಳಸಮಸ್ಯೆಗಳು ಅಡಕವಾಗಿರುತ್ತವೆ. ಒಂದನೆಯದು, ದೇಶದಲ್ಲಿ ಹೆಚ್ಚು ಆಹಾರವಸ್ತುಗಳನ್ನು ಬೆಳೆಯಬೇಕು ಎಂಬುದು. ಎರಡನೆಯದು, ಹಾಗೆ ಬೆಳದ ವಸ್ತುಗಳನ್ನು ದೇಶದಲ್ಲಿರತಕ್ಕ ಜನರಿಗೆಲ್ಲಾ ಸಮನಾಗಿ ಹಂಚತಕ್ಕದ್ದು ಎಂದು. ಈ ದಿವಸ ನಮ್ಮ ದೇಶದಲ್ಲಿ ಈ ಹಂಚತಕ್ಕ ರೀತಿಯನ್ನೇ ತಮ್ಮ ಮುಖ್ಯ ಆಹಾರ ನೀತಿಯೆಂದು, ಸಾರುತ್ತ ಈ ಹಂಚತಕ್ಕ ನೀತಿಯನ್ನು ಹೆಚ್ಚು ಬೆಳೆಯುಬೇಕೆಂಬ ನೀತಿಗೆ ಗಂಟುಹಾಕಿಕೊಂಡು ನಡೆಯುತ್ತಿರುವುದರಿಂದಲೇ ದೇಶದಲ್ಲಿ ನಮಗೆಲ್ಲಾ ಇಂಥ ಕಷ್ಟ ಪರಿಸ್ಥಿತಿ ಇಂದು ಬಂದಿದೆ. ಅಲ್ಲದೆ ಇದು ದಿನದಿನಕ್ಕೂ ಉಗ್ರರೂಪತಾಳುತ್ತಿದೆ. ಇಷ್ಟೆಲ್ಲಾ ಆಗಿದ್ದರೂ ಈ ತೊಡಕನ್ನು ಬಗೆಹರಿಸುವುದಕ್ಕೆ ಯಾವುದು ಮೂಲ ಪ್ರಯತ್ನವಿತ್ತೋ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ, ಎಂದರೆ ದೇಶದಲ್ಲಿ ಹೆಚ್ಚು ಆಹಾರಧಾನ್ಯಗಳನ್ನು ಉತ್ಪತ್ತಿಮಾಡದೆ, ಹೊರಗಡೆಯಿಂದ ಆಹಾರ ಧಾನ್ಯಗಳನ್ನು ಇಲ್ಲಿಗೆ ತರಿಸಿಕೊಳ್ಳಲು ಅವುಗಳಿಗೆ ಅಗಾಧವಾದ ಬೆಲೆಗಳನ್ನು ಕೊಟ್ಟು, ಈ ತೊಡಕಿನ ಸಮಸ್ಯೆಯನ್ನು ದಾಟಬೇಕೆಂದು ಮನಸ್ಸು ಮಾಡಿದ ನಮ್ಮ ಸರ್ಕಾರದವರಿಗೆ ಎಷ್ಟುದೂರ ಹೀಗೆ ದಾಟಿಕೊಂಡು ಹೋಗಲು ಸಾಧ್ಯವಾಯಿತು ಎಂಬುದು ನಮಗೆಲ್ಲಾ ಈಗಾಗಲೇ ಗೊತ್ತಿರುವ ವಿಷಯು. ಹೀಗೆ ಇವರು 'ಗಾಳಿ ಬಂದಾಗ ತೂರಿಕೋ' ಎಂಬ ನೀತಿಯನ್ನೇ ಅನುಸರಿಸುತ್ತಾ ಬಂದುದರಿಂದ ನಾವು ಈ ದಿವಸ ಯಾವ ಮಟ್ಟಕ್ಕೆ ಬಂದಿದ್ದೇವೆಂದರೆ—ನಾವು ಇದನ್ನು End ಮಾಡಬೇಕೋ ಅಥವಾ Mend ಮಾಡಬೇಕೋ ಎಂಬ ತೀರ್ಮಾನಕ್ಕೆ ಕೂತಿದ್ದೇವೆ.

ಆದರೆ ಈ ದಿವಸ ನಾವಿಲ್ಲಿ ತೀರ್ಮಾನಮಾಡಬೇಕಾದದ್ದು, ಈಗಾಗಲೇ ಜನಾಬ್ ಮಹಮದ್ ಇಮಾಂರವರು ತಿಳಿಸಿರುವಂತೆ, ಈ ಕಂಟ್ರೋಲ್ ಎಂಬುದನ್ನು ಈ ಕೂಡಲೇ ದೇಶಾದ್ಯಂತವೂ ಸಂಪೂರ್ಣವಾಗಿ ತೆಗೆದುಹಾಕಬೇಕೇ, ಅಥವಾ ಸರ್ಕಾರದವರು ಹೇಳುತ್ತಿರುವಂತೆ, ಇದನ್ನು ಸ್ವಲ್ಪ ಎಚ್ಚರಿಕೆಯಿಂದ ಸ್ವಲ್ಪ ಸ್ವಲ್ಪವಾಗಿಯೇ ಹೆಜ್ಜೆಯಿಡುತ್ತಾ ಮುಂದು ಪರಿಸಬೇಕೇ ಎಂಬುದು. ಇಂದಿನ ಗೊಂದಲಕ್ಕೆ ನಮ್ಮಲ್ಲಿ ಒಂದು ಎಕನಾಮಿಕ್ ಪಾಲಿಸಿ (coherent economic and social philosophy) ಮತ್ತು ಅಗತ್ಯವಾಗಿ ಬೇಕಾಗಿರುವ ನಿಖರವಾದ ಅಂಕಿ ಅಂಶಗಳಿಲ್ಲದಿರುವುದೇ ಮುಖ್ಯಕಾರಣವೆಂದು ನನಗೆ ಗೊತ್ತಾಗುತ್ತಿದೆ. ಮುಖ್ಯವಾಗಿ ಇದು ನಮ್ಮೆಲ್ಲರಿಗೂ ಸಂಬಂಧಪಟ್ಟಂಥ ಒಂದು ಸಮಸ್ಯೆಯಾಗಿದೆ. ಇದು ಒಬ್ಬ ಮನುಷ್ಯನಿಗೆ, ಅಥವಾ ಒಂದು ಪಾರ್ಟಿಗೆ ಸಂಬಂಧಪಟ್ಟದ್ದಾಗಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ಸಂಬಂಧಪಟ್ಟದ್ದಾಗಿದೆ. ಹಾಗೆಯೇ ಪ್ರತಿಯೊಬ್ಬರಿಗೂ ಒಂದು ಬಾಯಿ ಇದ್ದರೆ ಅದನ್ನು ಭರ್ತಿಮಾಡಿಕೊಳ್ಳಲು ಪ್ರತಿಯೊಬ್ಬರಿಗೂ ಎರಡು ಕೈಗಳಿರುತ್ತವೆ. ಹೀಗೆ ಒಂದು ಬಾಯಿ ಇರತಕ್ಕ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಎರಡು ಕೈಗಳಿಂದಲೂ ಕಷ್ಟ

(ಶ್ರೀ ಎಸ್. ಗೋಪಾಲಗೌಡರು)

ಪಟ್ಟು ಕೆಲಸಮಾಡಿದರೆ, ನಮ್ಮ ಹೊಟ್ಟೆಗೆ ಸಾಕಾಗುವಷ್ಟು ಆಹಾರವನ್ನು ನಾವೆಲ್ಲರೂ ಪ್ರಯತ್ನಪಟ್ಟರೆ ಸುಲಭವಾಗಿ ಒದಗಿಸಿ ಕೊಳ್ಳಬಹುದು. ಆದರೆ ಈ ದಿವಸ ಪ್ರತಿ ಯೊಬ್ಬ ನಾಗರಿಕನೆಂದು ಹೇಳಿಕೊಳ್ಳತಕ್ಕ ಮನುಷ್ಯನು ಈ ಕಷ್ಟತರವಾದ ವ್ಯವಸಾಯ ಕ್ಷೇತ್ರವನ್ನು ಬಿಟ್ಟುಬಿಟ್ಟು ಬೇರೆಬೇರೆ ಕ್ಷೇತ್ರ ಗಳಲ್ಲಿ ತನ್ನ ಜೀವನೋಪಾಯವನ್ನು ಕಲ್ಪಿಸಿ ಕೊಳ್ಳಲು ಹೋಗುತ್ತಿರುವುದು ಕಂಡುಬರು ತ್ತಿದೆ. ಇದರಿಂದ ನಮ್ಮ ಹಿಂದಿನಿಂದಲೂ ಬಂದಂಥ ಆರ್ಥಿಕಪರಿಸ್ಥಿತಿ ಮತ್ತು ಪೂರ್ವ ದಿಂದಲೂ ಆಚರಿಸಿಕೊಂಡು ಬರುತ್ತಿದ್ದಂಥ ಒಂದು ಸಾಂಪ್ರದಾಯಿಕವಾದ ಪದ್ಧತಿ ದಿನ ದಿನಕ್ಕೂ ಮಾಯವಾಗುತ್ತ ಬಂದು, ದೇಶದಲ್ಲಿ ಇಂದು ಆಹಾರ ಉತ್ಪತ್ತಿ ಕಡಮೆಯಾಗುತ್ತಾ ಬಂದಿದೆ. ಇದೇ ನಮ್ಮ ದೇಶದಲ್ಲಿರತಕ್ಕ ಇಂದಿನ ನಿಜಸ್ಥಿತಿ. ಆದರೆ, ವ್ಯವಸಾಯಗಾರ ನಿಗೆ ನಿಜವಾಗಿಯೂ ಅನೇಕ ಕಿರುಕುಳಗಳಿವೆ. ವಾಸ್ತವವಾಗಿಯೂ ಈ ಕೆಲಸ ಬಹಳ ಕಷ್ಟ ತರವಾದದ್ದೇ. ಈತನಿಗೆ ಯಾವರೀತಿಯಲ್ಲೂ ಪ್ರೋತ್ಸಾಹವೆಂಬುದೇ ಇಲ್ಲ. ಏತನ್ಮಧ್ಯೆ ಜಮೀನಿಗೂ, ಜಮೀನನ್ನು ಉಳತಕ್ಕವನಿಗೂ ನಡುವೆ ಇರತಕ್ಕ ಜನರ ಭಾರ ವ್ಯವಸಾಯಗಾ ರನಮೇಲೆ ವಿಪರೀತ ಹೆಚ್ಚಾಗಿ ಹೋಗಿದೆ. ಈ ವಿಚಾರವನ್ನು ಸರ್ಕಾರದವರು ಚೆನ್ನಾಗಿ ಮನ ಸ್ಸಿಗೆ ತೆಗೆದುಕೊಂಡು, ಆ ಭಾರವನ್ನು ಇಳಿಸ ತಕ್ಕ ಒಂದು ವ್ಯವಸ್ಥೆಯನ್ನು ಕಾರ್ಯಗತ ಮಾಡಿದರೆ ದೇಶದಲ್ಲಿ ಹೆಚ್ಚು ಆಹಾರದ ಉತ್ಪ ನ್ನಕ್ಕೆ ಅವಕಾಶವಾಗುತ್ತದೆ.

ಇನ್ನು ದೇಶದಲ್ಲಿ ಆಹಾರವನ್ನು ಹೆಚ್ಚು ಉತ್ಪ ತ್ತಿಮಾಡತಕ್ಕದ್ದರ ಬಗ್ಗೆ, short range scheme ಗಳಿಗೆ ನಾವು ತಕ್ಷಣ ಗಮನಕೊಡ ಬೇಕಾದ್ದು ಅತಿಮುಖ್ಯವಾದ ವಿಷಯ. ಇದರ ಜೊತೆಗೆ ದೇಶದಲ್ಲಿ ರೈತಾಪಿವರ್ಗದಲ್ಲಿರತಕ್ಕ ಜನರು ಯಾರಿದ್ದಾರೋ ಅವರಿಗೆ ಹೆಚ್ಚಿನ ಸಹಾಯವನ್ನು ನೀಡಿ, ಅವರಿಗಿರತಕ್ಕ ಕಿರುಕು ಳವನ್ನು ತಪ್ಪಿಸದವಿನಾ ನಾವು ಅವರನ್ನು ಹೆಚ್ಚು ಆಹಾರ ಬೆಳೆಯಿರಿ ಎಂದರೆ ಹೇಗೆ ಸಾಧ್ಯವಾ ದೀತು? ಆದ್ದರಿಂದ ನಾವು ಹೆಚ್ಚು ಆಹಾರ ಪಡೆ ಯತಕ್ಕ ಪ್ರಯತ್ನ ಮಾಡಬೇಕಾಗಿದ್ದರೆ ನಿಜ ವಾಗಿಯೂ ರೈತಾಪಿವರ್ಗದಲ್ಲಿರತಕ್ಕವರಿಗೆ ಒಂದು ಹೆಚ್ಚಿನ ಪ್ರೋತ್ಸಾಹ ಮತ್ತು ಸಹಾಯ ಗಳನ್ನು ನೀಡತಕ್ಕದ್ದೂ ಒಂದು ಬಹು ಮುಖ್ಯ ವಿಚಾರ. ಆದರೆ ಶ್ರೀಮಾನ್ ಎಚ್. ಎಸ್. ರುದ್ರಪ್ಪನವರು ಒಂದು ವಿಚಾರ ಹೇಳಿದರು, ಈಗಾಗಲೇ ಮಳೆಯಾಗದೆ ಹೊರಟುಹೋಗಿ, ನಮಗೆ ಮುಂದಕ್ಕೆ ಸಾಕಷ್ಟು ಆಹಾರ ದವಸ ಗಳು ಒದಗಬಹುದೆಂಬ ಒಂದು ಭರವಸೆ ಇಲ್ಲ ದಿರುವುದರಿಂದ ಈಗಿರತಕ್ಕ ಹತೋಟಿ ಪದ್ಧತಿ ಯನ್ನು ಮುಂದುವರಿಸದೇ ಹೋದರೆ, ಮುಂದೆ ದೇಶದಲ್ಲಿ ಈಗ ಇರತಕ್ಕ ಕಷ್ಟಕ್ಕಿಂತಲೂ ಅಧಿಕ ವಾದ ಕಷ್ಟವೂ ಮತ್ತು ತೊಂದರೆಗಳೂ ಒದಗಬ ಹುದು ಎಂದು. ಹಾಗೆ ಆಗದಂತೆ ನೋಡಿಕೊಳ್ಳು ವುದಕ್ಕಾಗಿ ಈಗಿರತಕ್ಕ ಪದ್ಧತಿಯನ್ನು ಮುಂದು ವರಿಸಲೇಬೇಕಾಗಿದೆಯೆಂದು ಹೇಳಿದರು. ಆದರೆ ಅವರು ಹೇಳುವ ರೀತಿಯಲ್ಲಿ ನಾವು ಈ ಗ್ರಹ ಗಳನ್ನೂ, ಮಳೆಗಳನ್ನೂ ಲೆಕ್ಕಹಾಕಿಕೊಂಡು ಹೋಗತಕ್ಕದ್ದು ನಮ್ಮ ನೀತಿಯಲ್ಲ. ಹಾಗೆ ಅವುಗಳನ್ನೇ ಲೆಕ್ಕ ಹಾಕಿಕೊಂಡು ನಾವು ಎಷ್ಟು ದೂರ ಹೋಗುವುದಕ್ಕೆ ಸಾಧ್ಯವಾದೀತು ಎಂಬು ದನ್ನು ನೋಡಬೇಕು. ನಮಗೇನು ಇದು ದಿವ ಸದ ಅಥವಾ ಒಂದು ತಿಂಗಳಿನ ಅಥವಾ ಒಂದು ವರ್ಷದ ಸಮಸ್ಯೆಯಲ್ಲ. ಒಂದು ವರ್ಷ ಮಳೆ ಬಂದರೆ ನಮ್ಮ ಹೊಟ್ಟೆತುಂಬುತ್ತೆ ಇಲ್ಲದಿದ್ದರೆ ಇಲ್ಲ ಎನ್ನುವಹಾಗಿಲ್ಲ. ಇದು ನಮ್ಮ ಜೀವಕ್ಕೆ ಹತ್ತಿರುವ ಪ್ರಶ್ನೆ. ಈ ಮಹಾ ಸಮಸ್ಯೆಯನ್ನು ಎದುರಿಸಬೇಕಾಗಿದ್ದರೆ ನಾವು ಹೊಸ ಹೊಸ ಯೋಜನೆಗಳನ್ನು ಕಂಡುಹಿಡಿದು ಅವುಗಳನ್ನು ಕಾರ್ಯಗತವಾಗುವಂತೆ ಮಾಡಬೇಕು. ದೇಶ ದಾದ್ಯಂತವೂ ಎಲ್ಲರೂ ದುಡಿದು ಹೆಚ್ಚು ಆಹಾರ ಉತ್ಪನ್ನಮಾಡಬೇಕು ಮತ್ತು ಬೆಳೆದದ್ದನ್ನು ಮಿಶ್ರಮಾಡಿ ಎಲ್ಲರಿಗೂ ಸರಿಸಮಾನವಾಗಿ ಹಂಚತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡ ಬೇಕು. ಈ ರೀತಿ ಪ್ರಯತ್ನಗಳಿಂದ ಈ ಮಹಾ ಸಮಸ್ಯೆಯನ್ನು ಎದುರಿಸಬೇಕೇ ಶಿವಾಯಿ,

ಮಳೆ-ಗ್ರಹ-ನಕ್ಷತ್ರಗಳ ಬಲದಮೇಲೆ ಇದನ್ನು ಲೆಕ್ಕಹಾಕುವುದು ಸರಿಯಲ್ಲ. ಇದಕ್ಕೆಲ್ಲಾ ಒಂದು planned economy ಬೇಕು. ಇದಕ್ಕೆ ಬಲವಾದ ಆರ್ಥಿಕ ತಳಹದಿಯಿರ ಬೇಕು. ಆದರೆ ಈ ದಿವಸ ದೇಶದಲ್ಲಿ ಉಂಟಾ ಗಿರತಕ್ಕ ಕಿರುಕುಳಗಳಿಗೆಲ್ಲಾ (chaos) ಈಗ ಆಚರಣೆಯಲ್ಲಿರುವ ಕಂಟ್ರೋಲೇ ಕಾರಣವೆಂದು ಹೇಳಬಹುದು. ಈ ಕಂಟ್ರೋಲ್‌ಗೆ ಬದಲಾಗಿ Intergated controls ಹಾಕಬೇಕು. ಈದಿವಸ, ದೇಶದಲ್ಲಿರತಕ್ಕ ಅನೀತಿಗಳನ್ನು ಆಚೆಗೆ ನೂಕಬೇಕಾಗಿದ್ದರೆ, ಅದಕ್ಕೆ efficient machinery ಇರಬೇಕು. ಅಗತ್ಯವಾದ ಮತ್ತು ಖಚಿತವಾದ ಅಂಕಿ ಅಂಶಗಳಿರಬೇಕು. ಈಗಿಗಿಂತಲೂ ಅಧಿಕ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವಂತೆ ಮಾಡಬೇಕು ಮತ್ತು ಬೆಳೆದದ್ದನ್ನು ಸರಿಸಮವಾಗಿ ಎಲ್ಲರಿಗೂ ಹಂಚತಕ್ಕಂಥ ಒಂದು ವ್ಯವಸ್ಥೆಯನ್ನು ಏರ್ಪಾ ಡುಮಾಡಬೇಕು. ಹೀಗೆ ಅತಿಮುಖ್ಯವಾದ ಈ ನಾಲ್ಕು ಅಂಶಗಳ ಪೈಕಿ ನಮ್ಮಲ್ಲಿ ಒಂದಾ ದರೂ ಇಲ್ಲ. ಜನರು ಎಷ್ಟನ್ನು ಬೆಳೆಯು ತ್ತಾರೋ, ಅದನ್ನು ಅವರು ನಿಷ್ಪಕ್ಷಪಾತವಾಗಿ ಹೇಳುತ್ತಿಲ್ಲ. ಕೊಂಡು ತಿನ್ನತಕ್ಕವರಾ ದರೋ, ನಿಖರವಾಗಿ ಇಷ್ಟೇ ಜನಗಳು ಇದ್ದೇ ವೆಂದು ಅವರೂ ತಿಳಿಸುವುದಿಲ್ಲ. ಹೀಗೆ ಇಂದಿನ ಕಂಟ್ರೋಲ್ ಪದ್ಧತಿ ಅನೇಕ ಲೋಪ ದೋಷಗಳನ್ನೊಳಗೊಂಡು, ಮುಂದುವರಿಯು ತ್ತಲೇ ಬಂದಿದೆ. ಈಗ ತಾವು ಈ ಕಂಟ್ರೋ ಲನ್ನು ಮುಂದುವರಿಸತಕ್ಕ ಬಗ್ಗೆ ಕೊಡುತ್ತಿರುವ ಕಾರಣಗಳು ಹಿಂದು ಮುಂದಾಗಿರುವಂತೆ ತೋರುತ್ತಿದೆ. Controls bring in scarcity; scarcity brings inflation ಎಂಬ ವಾದ ಮಾಡಿಕೊಂಡು ಬರುತ್ತಿದ್ದೀರಿ. ಹೀಗೆ ಈ ಕಂಟ್ರೋಲುಗಳು ಹೋಗಬೇಕೆಂದು ತಾವು ಮಾಡುತ್ತಿರುವ ವಾದಗಳಿಂದ ಅನಾಯಕ ತೆಗೆ ತಾವು ಆಹ್ವಾನ ಕೊಟ್ಟಹಾಗೆ ಆಗುತ್ತದೆ. ಇಲ್ಲಿಯತನಕವೂ ಇರತಕ್ಕ ಕಂಟ್ರೋಲ್ ಪದ್ಧ ತಿಯ ಸಲುವಾಗಿ ಜನರೆಲ್ಲರೂ ಮನಸ್ಸನ್ನು ಚಿಕ್ಕದುಮಾಡಿಕೊಂಡು, ಮರ್ಯಾದೆಗಳನ್ನೆಲ್ಲ ಕೈ ಬಿಟ್ಟು, ನಾನಾ ತೊಂದರೆಗಳಿಗೊಳಗಾಗಿ, ಡಿಪೋಗಳ ಬಳಿ ದಿನವೆಲ್ಲಾ ಕಾದು ನಿಂತು, ಅವರನ್ನು ಕಾಡಿ, ಬೇಡಿ ಅವರಿಗೆ ಸಲಾಂ ಹೊಡೆದು, ಸುಸ್ತಾಗಿ ಹೋಗಿರುವುದರಿಂದ ಈ ಕಂಟ್ರೋಲ್ ಹೋದಮೇಲಾದರೂ ಒಳ್ಳೆಯ ದಾಗಬಹುದೇನೋ ಎಂದು ಕಾತರದಿಂದಿದ್ದಾರೆ. ಈ ಕಂಟ್ರೋಲ್‌ಗಳ ಪರಿಣಾಮ ಹೀಗೆ ಜನ ರಲ್ಲಿ ಒಂದು ಮಾನಸಿಕ ದುಃಖವನ್ನುಂಟು ಮಾಡಿದೆ. ಹೀಗೆ ಜನರೆಲ್ಲರೂ ಈ ಬಗ್ಗೆ ಏನು ತೀರ್ಮಾನವಾಗುತ್ತೋ ಎಂದು ಕಾದು ಎದುರು ನೋಡುತ್ತಿದ್ದಾರೆ. ಅಂದ ಮಾತ್ರಕ್ಕೆ, ಕೊರತೆ ಪರಿಸ್ಥಿತಿಯ ನಿಜಸ್ವರೂಪ ತಿಳಿದಿರುವ ನೀವು ಕಂಟ್ರೋಲನ್ನು ತೆಗೆಯಬೇಕೆಂದು ವಾದಿಸುತ್ತಿ ರುವುದು ಹೇಗಿದೆಯೆಂದರೆ—ಜೈಲಿನಲ್ಲಿ ಅಳತೆ ತಿಂಡಿ ತಿಂದು 8-10ವರ್ಷ ಹಸಿವಿನಿಂದ ಬಳಲಿ ಹೋಗಿದ್ದಂಥ ಖೈದಿಯನ್ನು ಜೈಲಿನಿಂದ ಹೊರ ಗಡೆ ಬಿಟ್ಟ ಕೂಡಲೇ ಆತನಿಗೆ ಹೇಗೆ ಹೆಚ್ಚಾಗಿ ಊಟಮಾಡಿ ತನ್ನ ಹೊಟ್ಟೆಯನ್ನು ತುಂಬಿ ಕೊಳ್ಳಬೇಕೆಂದು ಒಂದು ಆಸೆಯುಂಟಾಗು ತ್ತದೋ, ಅಂಥ ಖೈದಿ ಜೈಲಿನಿಂದ ಹೊರಗೆ ಬಂದಮೇಲೆ, ಆತನಿಗೆ ದುಡಿಯಲು ಸರಿಯಾಗಿ ಕೆಲಸ ಸಿಕ್ಕದೆ ಹೊಟ್ಟೆತುಂಬ ಅನ್ನಸಿಕ್ಕದೆ ಇದ್ದಾಗ ಆತನ ಗತಿ ಹೇಗಾಗುತ್ತದೆಯೋ, ಹಾಗೆ ಇದೆ. ಇದನ್ನು ನಾವು ಜೈಲು ಅಧಿಕಾರಿಗಳಂತೆ ಆಲೋಚನೆಮಾಡಬೇಕಾಗಿದೆ. ಈ ಕಂಟ್ರೋಲು ಗಳನ್ನು ನಾವು ಒಂದು ಅನಿವಾರ್ಯ ಅನಿಷ್ಟ ವಾಗಿ ಕಟ್ಟಿಕೊಂಡು ಬಂದಿದ್ದೇವೆ. ವಾಸ್ತ ವಾಂಶಗಳ ಪರಿಸ್ಥಿತಿ ಹೀಗಿರುವುದರಿಂದ, ನೀವು ಒಮ್ಮೆ "ಗಾಳಿ ಬಂದಂತೆ ತೂರಿಕೋ" ಎಂಬ ನೀತಿಯನ್ನು ಮನ್ನಾಮಾಡಿ, ಇದನ್ನು ಒಂದು ವೈಜ್ಞಾನಿಕ ರೀತಿಯಲ್ಲಿ ಸರಿಪಡಿಸತಕ್ಕದ್ದು ಬಹಳ ಮುಖ್ಯವಾದದ್ದು. ತಾವು ಈ ಆಹಾರ ನೀತಿಯವಿಚಾರದಲ್ಲಿ ದೇಶದಲ್ಲಿರತಕ್ಕ ಸಮಸ್ತ ಜನರ ಅಭಿಪ್ರಾಯವೇನಿರುತ್ತದೆಯೆಂಬುದನ್ನು ಅರಿತುಕೊಂಡು, ಇದನ್ನು ಸರಿಪಡಿಸತಕ್ಕ ಬಗ್ಗೆ ಅವರೆಲ್ಲರ ನೆರವನ್ನು ಅಗತ್ಯವಾಗಿ ಪಡೆಯ ಬೇಕಾಗಿದೆ. ಇದರ ಜೊತೆಗೆ ತಾವು ಅವರೆಲ್ಲ ರಿಗೂ ಸರಿಯಾದ ಉದ್ಯೋಗಗಳನ್ನು ಕಲ್ಪಿಸಿ

(ಶ್ರೀ ಎಸ್. ಗೋಪಾಲಗೌಡರು)

ಕೊಡತಕ್ಕ ಯೋಜನೆಯನ್ನು ತಯಾರಿಸಿ ದೇಶದ ಮುಂದಿಡಬೇಕು. ಇನ್ನು ಕೂಲಿಗಾರರ ವಿಷಯವಾಗಿ ಈ ಒಂದು ಅಂಶವನ್ನು ನಾನು ತಮ್ಮಲ್ಲಿ ಒತ್ತಿಹೇಳಬೇಕಾದುದಿತ್ತು. ಅದಕ್ಕಾಗಿ ನಾನು ಒಂದು ಅಂಶವನ್ನು ಒತ್ತಿ ಹೇಳುತ್ತೇನೆ. ಈಗ ನಮ್ಮ ದೇಶದಲ್ಲಿ ಇರತಕ್ಕ ಪರಿಸ್ಥಿತಿಯಲ್ಲಿ ಸರ್ಕಾರದವರು ಹೊರಡಿಸಿರತಕ್ಕ ಹೇಳಿಕೆಯನ್ನು ನೋಡಿದರೆ, ಈಗಾಗಲೇ ಶ್ರೀಮಾನ್ ಎಂ. ಶಂಕರಲಿಂಗೇಗೌಡರು ಜನರು ಇನ್ನು ಮುಂದೆ ಹುಳಿತ ಆಹಾರಧಾನ್ಯಗಳನ್ನು ಕೇರಿಕೊಂಡು ತಿನ್ನತಕ್ಕ ಪರಿಸ್ಥಿತಿ ಬಂದರೂ ಬರಬಹುದು, ಎಂದು ಹೇಳಿರುವುದರ ಜೊತೆಗೆ ಮುಂದಕ್ಕೆ ಇನ್ನೂ ಒಂದು ಹೆಜ್ಜೆಹೋಗಿ ಹೇಳಬೇಕೆಂದರೆ, ಹೊಟ್ಟೆಗಿಲ್ಲದೆ ಹೋದರೆ ಮುನಿಸಿಪಾಲಿಟಿಯ ತೊಟ್ಟಿಗೆ ಊಟಮಾಡಿ ಎಸೆದ ಎಲೆಯಲ್ಲಿ ಏನಾದರೂ ಒಂದು ರೊಟ್ಟಿಯ ಚೂರು ಇದ್ದರೆ ಅದನ್ನೂ ತಿನ್ನುತ್ತಾರೆಂದು ತಿಳಿಸಿ ಅಧ್ಯಕ್ಷರ ಅಪ್ಪಣೆಯ ಪ್ರಕಾರ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎನ್. ಬೋರಣ್ಣಗೌಡರು (ಬೇಲೂರು).—ಸ್ವಾಮಿ, ಮಾನ್ಯ ಮಿತ್ರರು ಸಲಹೆಯನ್ನು ನೀಡುತ್ತಾ ಈಗಾಗಲೇ ಹಲವು ವಿಚಾರಗಳನ್ನು ತಿಳಿಸಿದ್ದಾರೆ. ಹೆಚ್ಚು ಆಹಾರ ಉತ್ಪನ್ನವಾಗಬೇಕಾದರೆ, ದೇಶದ ಜನರಿಗೆ ಎರಡು ಮೂರು ರೀತಿಯಲ್ಲಿ ಸರ್ಕಾರದಿಂದ ಸಹಾಯವಾಗಬೇಕಾದದ್ದೂ ಬಹಳ ಮುಖ್ಯವಾದುದು ಎಂಬುದನ್ನು ವಿಚಾರ ಮಾಡಬೇಕು. ಒಂದನೆಯದಾಗಿ, ಹೆಚ್ಚು ಆಹಾರ ಬೆಳೆಯಲು ಸರ್ಕಾರದವರು ನೀರಾವರಿ ಕಾಮಗಾರಿಗಳನ್ನು ಹೆಚ್ಚುಮಾಡಬೇಕು. ಅದಕ್ಕೆ ಸರ್ಕಾರದವರು ಈ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸಿಲ್ಲದಿರುವುದು ಬಹಳ ವಿಷಾದಕರ. ಎರಡನೆಯದು, ಸಣ್ಣ ಕೆರೆಗಳ ಜೀರ್ಣೋದ್ಧಾರಕ್ಕೆ ಸಾಕಾದಷ್ಟು ಹಣ ಒದಗಿಸಿಲ್ಲ. ಇದೂ ಬಹಳ ವಿಷಾದಕರ. ಆಹಾರವನ್ನು ಬೆಳೆಯುವ ಪ್ರದೇಶಗಳಿಗೆ ಇಂಥ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿ ಕೊಟ್ಟರೆ ಆಹಾರ ಬೆಳೆಯಲು ಸುಲಭ. ಮಲೆನಾಡಿನಲ್ಲಿರುವ ಕೆರೆಗಳನ್ನು ಉತ್ತಮ ಪಡಿಸದಿರುವುದರಿಂದ ಅಲ್ಲಿಂದ ಸಾಕಷ್ಟು ಉತ್ಪತ್ತಿಬರಲು ಅವಕಾಶವಿಲ್ಲವೆಂದು ಹೇಳಬೇಕಾಗಿದೆ. ಮಲೆನಾಡು ಪ್ರದೇಶದಲ್ಲಿ ಕೆರೆಗಳನ್ನು ರಿಪೇರಿ ಮಾಡಿಸುವ ಕೆಲಸವನ್ನು ಕೈಕೊಂಡು ತೂಬನ್ನು ಸರಿಪಡಿಸುವುದು, ಒಡೆದುಹೋದ ಕೆರೆಕಟ್ಟೆಸುವುದು ಈ ರೀತಿಯ ಸೌಕರ್ಯಗಳನ್ನು ಮಾಡಿಕೊಡುವುದಾದರೆ ಈಗ ನಿರೀಕ್ಷಿಸಿರುವುದಕ್ಕಿಂತ ಹೆಚ್ಚಾಗಿ ಎರಡು ಲಕ್ಷ ಪಲ್ಲಾಗಳಷ್ಟು ಬತ್ತವನ್ನು ಸರ್ಕಾರಕ್ಕೆ ಮಲೆನಾಡು ಪ್ರದೇಶದಿಂದ ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳುತ್ತೇನೆ. ಹತೋಟಿ ಈಗ ಯಾವ ರೀತಿಯಲ್ಲಿ ಮೊದಲು ಮಾಡಿದ್ದೇವೋ ಅದೇ ರೀತಿಯಲ್ಲಿ ಇದ್ದುಕೊಂಡಿರಲಿ, ಮುಂದಿನ ಸ್ಥಿತಿಗತಿಯೇನಾಗುತ್ತದೆಂದು ನೋಡಿ ಮಾರ್ಪಾಡು ಮಾಡೋಣ ಎಂದು ಕೆಲವರು ಅಭಿಪ್ರಾಯ ಪಟ್ಟರು. ಈಗಾಗಲೇ ಹತೋಟಿಯನ್ನು ಸಡಿಲಿಸಬೇಕೆಂದು ಪ್ರಯತ್ನ ಪಡುತ್ತಿರುವಾಗ, ದೇಶದಲ್ಲಿ ಹಾಹಾಕಾರವುಂಟಾಗುವಷ್ಟು ಸ್ಥಿತಿಗತಿ ಮಾರ್ಪಾಡಾಗಿರುವಾಗ, ಜನರಿಗೆ ಆಹಾರ ಸಲೀಸಾಗಿ ಸಿಕ್ಕದಂತೆ ಮಾಡುವುದು ಅಪರಾಧವಾಗುತ್ತದೆ. ಈಗಾಗಲೇ ಕಾಳಸಂತೆಯಲ್ಲಿ ಆಹಾರ ಸಿಕ್ಕುತ್ತಿಲ್ಲವೆಂದು ಹೆಚ್ಚಿನ ಬೆಲೆಗೆ ಧಾನ್ಯವನ್ನು ಮಾರುತ್ತಿದ್ದಾರೆಂದು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಎಲ್ಲಾ ಕಡೆಗಳಲ್ಲೂ ಈಗ ಸರ್ಕಾರ ಯಾವ ಬೆಲೆಗೆ ಮಾರುತ್ತಿದೆಯೋ ಆ ಬೆಲೆಗಿಂತ ಕಡಮೆ ದರದಲ್ಲಿ ಹೆಚ್ಚು ಧಾನ್ಯ ದೊರೆಯುತ್ತಿದೆ. ಮಾರ್ಕೆಟ್ಟಿನಲ್ಲಿ ಬೇಕಾದಷ್ಟಿದೆ. ಸಾಧಾರಣವಾಗಿ ಕೆಲವು ಭಾಗಗಳಲ್ಲಿ ನಾನು ಈಚೆಗೆ ಎರಡು ದಿವಸ ಸಂಚಾರಮಾಡಿದೆ. ಸರ್ಕಾರ ಈಗ $1\frac{1}{2}$ ಸೇರು ಮಾರುತ್ತಿದ್ದರೆ, ಅದೇ 2 ಸೇರಿನಂತೆ ಹೊರಗಡೆ ಕಡಮೆ ದರದಲ್ಲಿ ಸಿಕ್ಕುತ್ತಿದೆ, ಹೆಚ್ಚಾಗಿ ಕೊಡಬೇಕಾಗಿಲ್ಲ, ಈ ಪರಿಸ್ಥಿತಿಯಿದೆ. ರಾಗಿ ಕೆಲವು ಭಾಗದಲ್ಲಿ $4\frac{1}{2}$-5 ಸೇರುಗಳಂತೆ ಸಿಕ್ಕುತ್ತಿದೆ, ನಾಲ್ಕು ಸೇರಿನಂತೆ ಬಹಳವಾಗಿ ಎಲ್ಲಾ ಕಡೆಯೂ ಸಿಕ್ಕುತ್ತಿದೆ. ಆಹಾರದ ಅಭಾವ ಸ್ವಲ್ಪವಿದೆಯೆಂದು ಹೇಳುವಾಗ ನಮ್ಮ ಮಿತ್ರರು ಕೆಲವರು ಅಭಾವವಿಲ್ಲವೆಂದು ಹೇಳುತ್ತಾರೆ. ಆಹಾರ

ಬೆಳೆಯುವುದಕ್ಕೆ ಅವಕಾಶವಿಲ್ಲ, ಆಹಾರ ಧಾನ್ಯಗಳನ್ನು ಮಾರಿ ಹೆಚ್ಚಾಗಿ ಸಂಪಾದನೆ ಮಾಡುವುದಕ್ಕೆ ಸರ್ಕಾರ ಅವಕಾಶಕೊಡುವುದಿಲ್ಲ, ನಮ್ಮ ದವಸವನ್ನು ಬೇರೆ ರೀತಿಯಲ್ಲಿ ಬಲವಂತದಿಂದ ತೆಗೆದುಕೊಂಡು ಹೋಗುತ್ತಾರೆ, ಸರ್ಕಾರಿ ಅಧಿಕಾರಿಗಳು ಈ ರೀತಿ ಬೆಳೆದುದನ್ನು ಕೈಸೇರಲು ಅವಕಾಶಕೊಡುವುದಿಲ್ಲ, ಇದರ ಜೊತೆಗೆ ಲಂಚ ರುಷುವತ್ತು ಜಾಸ್ತಿಯಾಗಿ ರೈತರಿಗೆ ಎಷ್ಟೋ ತೊಂದರೆಯಾಗಿದೆ, ಕೊಡುವ ಪ್ರಮಾಣ ಸ್ವಲ್ಪ ಹೆಚ್ಚು ಕಡಮೆಯಾದರೆ ನಮ್ಮ ಮೇಲೆ ಕೇಸು ಹಾಕುತ್ತಾರೆ ಎಂದು ಜನರು ತಿಳಿದುಕೊಂಡು ಅದರಿಂದ ಫಲ ಕಡಮೆಯಾಗಿದೆ. ಸುಮಾರು 3-4 ವರ್ಷಗಳಿಂದ ರೈತರು ಕೋರ್ಟುಗಳಿಗೆ ಹೋಗಬೇಕಾಗಿದೆ. ಆದ್ದರಿಂದ ತಾವು ಕಷ್ಟಪಟ್ಟು ಬೆಳೆದು ಸರ್ಕಾರಕ್ಕೆ ಕೊಡಕೂಡದು ಎಂಬ ಭಾವನೆ ಅವರಲ್ಲಿ ಮೂಡುವ ಪರಿಸ್ಥಿತಿ ಬಂದಿದೆ. ಈಗ ಸ್ಟ್ಯಾಚ್ಯುಟರಿ ರೇಷನಿಂಗ್ ಪ್ರದೇಶವಿದೆ, ಆ ಪ್ರದೇಶಕ್ಕೆ ಎಷ್ಟು ಬೇಕೋ ಅಷ್ಟು ಆಹಾರವನ್ನು ಇಂಡಿಯಾ ಸರ್ಕಾರ ಒದಗಿಸಲಿ, ನಮ್ಮ ಹಳ್ಳಿಗಾಡಿನಲ್ಲಿ ಬೆಳೆಯುವ ಧಾನ್ಯ ಹಳ್ಳಿಗರಿಗೇ ಮುಡುಪಾಗಿರಲಿ ಎಂದು ಸರ್ಕಾರದವರು ಹೇಳುತ್ತಾರೆ. ಆ ತತ್ವವನ್ನು ಅಷ್ಟಾಗಿ ಒಪ್ಪುವುದಕ್ಕಾಗುವುದಿಲ್ಲ. ಒಂದುದೇಶದವರೆಂದಮೇಲೆ ಅವರಿಗೆ ಆ ಭಾವ ಬರುವಂತೆ ನಾವು ಅವಕಾಶವನ್ನುಂಟುಮಾಡಬೇಕಾದದ್ದು ನಮ್ಮ ಧರ್ಮ. ಆಹಾರವಿಲ್ಲದಿರುವಾಗ ನಮ್ಮಲ್ಲಿರುವುದನ್ನು ನಾವು ಬೇಕಾದವರಿಗೆ ಕೊಡಬೇಕಾದದ್ದು ಧರ್ಮ. ಅದನ್ನು ಬಿಟ್ಟು ನಾವು ಆಹಾರವನ್ನು ತುಂಬಿಕೊಂಡು ಇತರರಿಗೆ ಕೊಡದಿರುವುದು ಅಧರ್ಮ. ಆ ನೀತಿ ಸರಿಯಲ್ಲ. ಹಾಗೆ ಹೇಳಿದ ಮೇಲೆ ಇಂಡಿಯಾ ಸರ್ಕಾರದ ಕಡೆಯಿಂದ ಸಾಕಾದಷ್ಟು ಗೋಧಿ ವಗೈರೆ ದ್ವಿದಳ ಧಾನ್ಯ ಬರಬಹುದು. ಬಂದರೂ ನಮ್ಮ ದೇಶದಲ್ಲಿ ಹೆಚ್ಚಾಗಿ ಬೆಳೆದು ಆಹಾರವನ್ನು ಒದಗಿಸುವುದು ಪವಿತ್ರ ಕರ್ತವ್ಯ. ಈಗ ಅಕ್ಟೋಬರ್‌ವರೆಗೆ ಮಾತ್ರ ಸ್ಟ್ಯಾಚ್ಯುಟರಿ ರೇಷನಿಂಗ್ ಇರುತ್ತದೆ. ಸಾಧ್ಯವಾದರೆ ಮೈಸೂರು ಜಿಲ್ಲೆ ಮತ್ತು ದಾವಣಗೆರೆಯಲ್ಲಿ ತೆಗೆಯಬಹುದು. ಕೆ. ಜಿ. ಎಫ್. ಬೆಂಗಳೂರುಗಳಲ್ಲಿ ಹೆಚ್ಚು ಪ್ರಜಾಸಂಖ್ಯೆಯಿದೆ. ಆ ಪಟ್ಟಣಗಳನ್ನು ಸ್ಟ್ಯಾಚ್ಯುಟರಿ ರೇಷನಿಂಗ್ ಪ್ರದೇಶವೆಂದು ಭಾವಿಸಿ ಇಷ್ಟು ಪ್ರಮಾಣದಲ್ಲಿ ರೇಷನ್ ಕೊಡಬೇಕಾಗುತ್ತದೆ. ಆ ಕಡೆ ಸ್ಟ್ಯಾಚ್ಯುಟರಿ ರೇಷನಿಂಗ್ ಇಟ್ಟು ಬಾಕಿ ಕಡೆ ತೆಗೆದರೆ ಅಕ್ಟೋಬರ್ ಹೊತ್ತಿಗೆ ಅಲ್ಲಿನ ಪರಿಸ್ಥಿತಿ ಏನಾಗುತ್ತದೆ, ಬಾಕಿ ಕಡೆಯಿಂದ ಎಷ್ಟು ಬರಬಹುದು, ಎಲ್ಲೆಲ್ಲಿ ಏನೇನು ಪರಿಸ್ಥಿತಿಯಿದೆ ಎಂಬುದನ್ನು ಯೋಚನೆಮಾಡಿ ಆ ಮೇಲೆ ಎಲ್ಲಾ ಕಡೆಯೂ ಹತೋಟಿಯನ್ನು ವಜಾಮಾಡುವುದು ಸೂಕ್ತ ಎಂದು ಈ ಸಲಹೆಯನ್ನು ತಮ್ಮ ಮುಂದಿಟ್ಟು ನನ್ನ ಭಾಷಣ ಮುಗಿಸುತ್ತೇನೆ.

Sri M. LINGANNA (Nanjangud).—Sir, some of the Members have tabled cut motions. I want to know......

Mr. SPEAKER.—They are not moving them.

Sri M. LINGANNA.—I want to know whether they would get an opportunity to speak.

Mr. SPEAKER.—I have expressed myself on that point. The Hon'ble Member will have his chance.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಸ್ವಾಮಿ, ಆಹಾರದ ನಿಯಂತ್ರಣ ಹೋಗಬೇಕೆಂದು ಹೇಳುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಸುಮಾರು 83 ಲಕ್ಷ ಎಕರೆಗಳಷ್ಟು ತರಿ ಮತ್ತು ಖುಷ್ಕಿ ಜಮೀನು ರೈತರಿಗಿದೆಯೆಂದು ಅಂಕಿ ಅಂಶಗಳಿಂದ ತಿಳಿದುಕೊಂಡಿದ್ದೇನೆ. ಅದರಲ್ಲಿ ಸುಮಾರು ಹತ್ತು ಲಕ್ಷಕ್ಕೆ ಮೇಲ್ಪಟ್ಟು ಬಂಜರಿದೆ. ಬಂಜರಿರುವುದಕ್ಕೆ ಕಾರಣ, ಕೆಲವರು ಬಡಬಗ್ಗರಿಗೆ ಅನುಕೂಲವಿಲ್ಲದೆ ಆ ರೀತಿ ರೇಖೆ ಮಾಡಲು ಅನಾನುಕೂಲವಾಗಿರುವುದು. ಅದಕ್ಕೆ ಸರ್ಕಾರದವರು ಹೆಚ್ಚಾಗಿ ಸಹಾಯ ಒದಗಿಸುವುದರ ಮೂಲಕ ಆ ಹತ್ತು ಸಾವಿರ ಎಕರೆಗಳನ್ನು ಉತ್ತಮ ಸ್ಥಿತಿಗೆ ತರಲು ಅನುಕೂಲ ಕಲ್ಪಿಸಿಕೊಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ.

(ಶ್ರೀ ಎಸ್. ಸಿದ್ದಪ್ಪನವರು)

ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆಂಬ ಯೋಜನೆಯನ್ನು ಸುಮಾರು 3-4 ವರ್ಷಗಳಿಂದ ದೇಶದಲ್ಲಿ ಜಾರಿಗೆ ತಂದಿದ್ದರೂ ಅದಕ್ಕೆ ವೆಚ್ಚಮಾಡಿದ ಮೊಬಲಗಿನಿಂದ ಮಹಾಜನರಿಗೆ ಹೆಚ್ಚು ಸಹಾಯವೇನೂ ಆಗಿಲ್ಲ. ಕಾರಣವೇನೆಂದರೆ, ಈ ಯೋಜನೆಯನ್ನು ಬಹಳ ಸಂದರ್ಭಗಳಲ್ಲಿ ಕಾರ್ಯರೂಪಕ್ಕೆ ತಂದಿರುವುದು ಆಹಾರವನ್ನು ಬೆಳೆಯುವ ಕಾಲ ಮುಗಿದ ಮೇಲೆ ಆಗಿದೆ; ಆದ್ದರಿಂದ ಸಂಸ್ಥಾನದಲ್ಲಿ ಇದಕ್ಕಾಗಿ ಖರ್ಚುಮಾಡಿದ ಹಣದಿಂದ ರೈತರಿಗೆ ಸಹಾಯವಾಗದೆ ಅನ್ಯಾಯವಾಯಿತು ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಷ್ಟಪಡುತ್ತೇನೆ. ಸಂಸ್ಥಾನಾಮುಳೆ ಇರತಕ್ಕಂಥ ಕೆರೆಗಳನ್ನು ಉತ್ತಮ ಪಡಿಸಿದ್ದರೆ ಆಹಾರವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತಿತ್ತು. ಸಂಸ್ಥಾನದಲ್ಲಿ ಸುಮಾರು 12 ಲಕ್ಷಕ್ಕೆ ಮೇಲ್ಪಟ್ಟಿರುವ ರೈತಾಪಿ ಜನರು ಎಕರೆಗೆ ಒಂದು ಪಲ್ಲಾದಂತೆ ಹೆಚ್ಚಾಗಿ ಬೆಳೆದಿದ್ದರೂ ಸರ್ಕಾರದಲ್ಲಿ ಈಗಿರುವ ಆಹಾರದ ಅಭಾವ ತಪ್ಪುತ್ತಿತ್ತು ಎಂದು ಮಾತ್ರ ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಸಂಸ್ಥಾನಾಮುಳೆ ಕೆರೆಗಳಿಗಾಗಿ ಮೀಸಲಾಗಿಟ್ಟಿದ್ದ ಪ್ರತಿಸಾಲಿನ ಬಜ್ಜೆಟ್ ಮೊಬಲಗು ಪೂರ್ತಿ ಖರ್ಚಾಗದೆ ಅನೇಕ ಸಂದರ್ಭಗಳಲ್ಲಿ ಕೆರೆಗಳು ಉತ್ತಮವಾಗದೆ ಕಾಲಹರಣವಾಗಿದೆ. ಇದಕ್ಕೆ ಉದಾಹರಣೆ ಕೊಡಬಹುದು. ಮಾಗಡಿ ತಾಲ್ಲೂಕಿನಲ್ಲಿ 24 ಮೇಜರ್ ಕೆರೆಗಳೂ ಮತು 120 ಮೈನರ್ ಕೆರೆಗಳೂ ಇವೆ, ಅವುಗಳ ಪೈಕಿ 40 ಮೈನರ್ ಕೆರೆಗಳು ಜೀರ್ಣೋದ್ಧಾರವಾಗಿ ಇನ್ನು 80 ಕೆರೆಗಳು ಹಾಗೆಯೇ ಉಳಿದಿವೆ. ಸಂಕೀಘಟ್ಟ, ತಿಪ್ಪಸಂದ್ರ ಮುಂತಾದ ಕಡೆಯಲ್ಲಿರುವ ದೊಡ್ಡ ದೊಡ್ಡ ಕೆರೆಗಳು ರಿಪೇರಿಯಾಗದೆ ಹಾಗೆಯೇ ಇವೆ. ಆ ಪ್ರಾಂತದಲ್ಲಿ ಒಂದು ದೊಡ್ಡ ಜಲಾಶಯವನ್ನು ಕಟ್ಟಬೇಕೆಂದು ರೈತಾಪಿ ಜನರು ಹೇಳುತ್ತಿದ್ದರೂ, ಒಂದು ಹೆಚ್ಚಿನ ಸೌಕರ್ಯ ನೀಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರೂ ಸರ್ಕಾರ ಅದನ್ನು ಗಮನಿಸಿಲ್ಲ. ಕೆಲವು ದಿವಸಗಳಿಂದೀಚೆಗೆ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆಂದು ಹೇಳುತ್ತಿದ್ದರೂ, ರೈತರಿಗೆ ಮಾಗಡಿ ತಾಲ್ಲೂಕಿನಲ್ಲಿ ಬೇಕಾದ ಅನುಕೂಲತೆಗಳನ್ನು ಕಲ್ಪಿಸದಿರುವುದು ಅವರ ಮನಸ್ಸಿಗೆ ನೋವನ್ನುಂಟುಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು.

ಏಕೆಂದರೆ, ಸುಮಾರು 1942ನೇ ಇಸವಿಯಿಂದ 1952ನೇ ಇಸವಿಯವರೆಗೂ ಆಹಾರವನ್ನು ಬೆಳೆಯತಕ್ಕ ರೈತರಿಗೆ ಒಂದು ದೊಡ್ಡ ಕಿರುಕುಳವಾಗಿದೆ. ಆ ಕಿರುಕುಳವನ್ನು ಈಗ ತಾನೆ ಹೊಸದಾಗಿ ನೇಮಕವಾದ ಸರ್ಕಾರದವರು ಬಹಳದೂರ ದೃಷ್ಟಿಯಿಂದ ಆಲೋಚಿಸಿ ನಿರ್ಬಂಧವನ್ನು ತೆಗೆದಿದ್ದರ ಫಲವಾಗಿ ರೈತರೂ ಪಟ್ಟಣಗಳವರೂ ಸುಖವಾಗಿ ಶಾಂತಿಯಿಂದ ಆಹಾರವನ್ನು ತಂದು ಉಪಯೋಗಿಸಿಕೊಳ್ಳುವುದಕ್ಕೆ ಒಂದು ಅನುಕೂಲವಾಗಿದೆ. ಪಟ್ಟಣಗಳಿಗೆ ಬರತಕ್ಕ ಅನೇಕ ಪ್ರಜೆಗಳಿಗೆ ಮತ್ತು ಕೋರ್ಟು ಕಚೇರಿಗಳಿಗೆ ಬರತಕ್ಕ ಅನೇಕ ಜನರಿಗೆ 5 ಸೇರನ್ನಾದರೂ ಜೊತೆಯಲ್ಲಿ ತರುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂಬ ವಿಷಯವನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಈಗಾಗಲೇ ಮೈಸೂರು ಸಂಸ್ಥಾನದಲ್ಲಿ ಮಳೆ ಇಲ್ಲದೆ ನೀರು ಕಡಮೆಯಾಗಿ ಶೇಕಡ 25 ಭಾಗದಷ್ಟು ಬೆಳೆಯತಕ್ಕ ಅವಕಾಶ ರೈತರಿಗೆ ಕಡಮೆಯಾಗಿದೆ. ಆದಕಾರಣ ನಮ್ಮ ಮಾನ್ಯ ಸ್ನೇಹಿತರು ಈಗಾಗಲೇ ತಿಳಿಸಿದ ರೀತಿಯಲ್ಲಿ ಡಿಸೆಂಬರ್‌ವರೆಗೂ ಈಗಿರತಕ್ಕ ರೀತಿಯಲ್ಲೇ ಹತೋಟಿಯನ್ನು ಜಾರಿಯಲ್ಲಿಟ್ಟುಕೊಂಡಿದ್ದು ಸಂಸ್ಥಾನಾಮುಳೆ ಮಳೆ ಬಂದ ಮೇಲೆ ಎಲ್ಲ ಕಡೆಗಳಿಂದಲೂ ಲೆಕ್ಕಾಚಾರವನ್ನುತರಿಸಿಕೊಂಡು ಹೆಚ್ಚು ಹೆಚ್ಚು ಬೆಳೆಯತಕ್ಕ ರೈತರಿಂದ ಕಂದಾಯಕ್ಕೆ ತಕ್ಕಂತೆ ಒಂದು ವಸೂಲಿಕ್ರಮವನ್ನು ಏರ್ಪಡಿಸಿ ದವಸ ವಸೂಲುಮಾಡಿ, ಆ ದವಸವನ್ನೂ ಪರದೇಶದಿಂದ ತರಿಸತಕ್ಕ ದವಸವನ್ನೂ ಎರಡನ್ನೂ ಸೇರಿಸಿ ಸಂಸ್ಥಾನಾಮುಳೆ ಎಲ್ಲೆಲ್ಲಿ ಅಭಾವ ಇದೆಯೋ ಅಂಥಾ ಪ್ರಾಂತಗಳಿಗೆ ಒದಗಿಸುವುದರ ಮೂಲಕ ದೇಶದಲ್ಲಿ ಶಾಂತಿಯನ್ನು ಕಾಪಾಡಬೇಕೆಂದು

ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಆಹಾರಕ್ಕೆ ಕೊಡತಕ್ಕ ಬೆಲೆತೀರಾ ಕಡಮೆ, ಏಕೆಂದರೆ ರೈತನಿಗೆ ಇರತಕ್ಕ ಕಷ್ಟ ಬೆಳೆಯುವವರ ಜೊತೆಯಲ್ಲಿರುವವರಿಗೆ ಮಾತ್ರ ಗೊತ್ತಾಗುತ್ತದೆ. 1921ರಿಂದ 1939ನೇ ಇಸವಿಯವರೆಗೂ ರೈತ ಬಹಳ ಕಷ್ಟದಲ್ಲಿ ಸಿಕ್ಕಿಕೊಂಡಿದ್ದ. ಏಕೆಂದರೆ ಬೆಲೆ ಬಹಳ ಕಡಮೆಯಾಗಿತ್ತು; ಯಾವ ಸರ್ಕಾರವೂ ಕೂಡ ರೈತನಿಗೆ ಅನುಕೂಲವನ್ನು ಕಲ್ಪಿಸಿ ರೈತರ ಸಂಖ್ಯೆಯನ್ನು ಜಾಸ್ತಿಮಾಡಲಿಕ್ಕೆ ಅವಕಾಶಮಾಡಲಿಲ್ಲ. ಅಲ್ಲಿಂದೀಚೆಗೆ ಹತೋಟಿ ಪದ್ಧತಿ ಜಾರಿಗೆ ಬಂದಿದ್ದರಿಂದ ದುಡ್ಡು ಬರತಕ್ಕ ಫಸಲನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಆದ್ದರಿಂದಈಗ ತಾವುಗಳೆಲ್ಲ ಈ ಸಭೆಯಲ್ಲಿ ಯೋಚನೆ ಮಾಡಿ, ಆಹಾರಕ್ಕೆ ಕನಿಷ್ಠಪಕ್ಷ ಬತ್ತಕ್ಕೆ 22 ರೂಪಾಯಿಗಳಂತೆಯೂ ರಾಗಿಗೆ 22 ರೂಪಾಯಿಗಳಂತೆಯೂ ಮುಂದಿನ ಬೆಲೆಯನ್ನು ನಿಷ್ಕರ್ಷೆ ಮಾಡಿ, ಸಂಸ್ಥಾನದಲ್ಲಿ ಬರತಕ್ಕ ರೆವಿನ್ಯೂ ಕಂದಾಯವನ್ನು ದವಸದ ಮೂಲಕ ವಸೂಲು ಮಾಡುವಂತೆ ವ್ಯವಸ್ಥೆಗೊಳಿಸಿದರೆ ರೈತಾಪಿ ಜನಗಳಿಗೆ ಕಷ್ಟವಾಗುವುದಿಲ್ಲ. ಸರ್ಕಾರದವರಿಗೂ ಕಷ್ಟವಾಗುವುದಿಲ್ಲ. ಲಂಚ ರುಷುವತ್ತುಗಳಿಗೆ ಅವಕಾಶ ತಪ್ಪುತ್ತದೆ. ಹತ್ತುವರ್ಷಗಳಿಂದ ರೈತಾಪಿ ಜನರು ವಸೂಲಿ ಕ್ರಮದಲ್ಲಿ ಪಟ್ಟ ಕಷ್ಟ ನಷ್ಟಗಳನ್ನು ವಿವರಿಸಬೇಕಾದ ಆವಶ್ಯಕತೆ ಇಲ್ಲ. ಏಕೆಂದರೆ ಈಗ ಮಂತ್ರಿಮಂಡಲದಲ್ಲಿರತಕ್ಕ ಮುಖ್ಯ ಮಂತ್ರಿಗಳು ಮತ್ತು ಅವರ ಸಹೋದ್ಯೋಗಿಗಳು ರೈತರು. ಆದ್ದರಿಂದ ಅವರಿಗೆ ಚೆನ್ನಾಗಿ ರೈತರ ಕಷ್ಟಸುಖ ಗೊತ್ತಿದೆ. ರೈತರ ಕಷ್ಟ ಸುಖ ಗೊತ್ತಿರುವುದರಿಂದಲೇ ಸಂಸ್ಥಾನದ ಅಧಿಕಾರವನ್ನು ವಹಿಸಿಕೊಂಡವರು ಕ್ಷಣದಲ್ಲೇ ರೈತರಿಗೆ ಇರತಕ್ಕ ಕಷ್ಟ, ಕಿರುಕುಳವನ್ನು ತಪ್ಪಿಸಿದುದರ ಫಲವಾಗಿ ರೈತರು ಬಹಳ ಸಂತೋಷದಿಂದ ತಮ್ಮ ಕಾರ್ಯಕಲಾಪಗಳನ್ನು ಮಾಡಿಕೊಂಡು ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಜಮೀನನ್ನು ಉಪಯೋಗ ಮಾಡುತ್ತಾ ಇದ್ದಾರೆ. ಆದರೆ ಇನ್ನೂ ಅನೇಕ ರೈತರಿಗೆ ಜಮೀನು ಇಲ್ಲ. ರೈತರಿಗೆ ಜಮೀನು ಒದಗಿಸುವುದು ಸರ್ಕಾರದವರ ಕರ್ತವ್ಯ. ಎಲ್ಲಿ ಫಾರೆಸ್ಟು ನಾಶವಾಗಿ ಮಳೆ ಬೀಳುವುದಿಲ್ಲವೋ ಅಂಥ ಕಡೆ ಇರತಕ್ಕ ಜಮೀನುಗಳನ್ನು ಮತ್ತು ಮಾರ್ಕೋನಹಳ್ಳಿ, ನುಗು ಜಲಾಶಯಗಳು ಇವುಗಳ ಹತ್ತಿರ ಇರತಕ್ಕ ಜಮೀನುಗಳನ್ನು ಬಡರೈತರಿಗೆ ಕೊಟ್ಟು ಸಹಾಯಮಾಡಿದರೆ ದೇಶದಲ್ಲಿ ಆಹಾರ ಅಭಾವ ಇಲ್ಲ ಎಂದು ಖಂಡಿತವಾಗಿ ಹೇಳುವುದಕ್ಕೆ ಅವಕಾಶವಾಗುತ್ತದೆ. ಈಗ 60 ಲಕ್ಷದಿಂದ 90 ಲಕ್ಷಕ್ಕೆ ನಮ್ಮ ಪ್ರಜಾ ಸಂಖ್ಯೆ ಏರಿದೆ. ಇದರಲ್ಲಿ ಸುಮಾರು, ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿದ ಹಾಗೆ, ಹೊರಗಡೆಯಿಂದ 8-10 ಲಕ್ಷ ಪ್ರಜೆಗಳು ನಾನಾಕಾರಣದಿಂದ ಪಟ್ಟಣಗಳಿಗೆ ಬಂದು ಇಲ್ಲಿ ಕೇಂದ್ರೀಕೃತವಾಗಿದ್ದಾರೆ. ಆದ್ದರಿಂದ ಅವರಿಗೂ ಕೂಡ ಆಹಾರವನ್ನು ಒದಗಿಸಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಆದಕಾರಣ ಸರ್ಕಾರದವರು ಇದನ್ನು ಆಲೋಚನೆಮಾಡಿ ಈಗಿರತಕ್ಕ ಹತೋಟಿಯನ್ನು ಇನ್ನೂ ಕೆಲವು ಕಾಲ ಅನುಸರಿಸಿ ಸಂಸ್ಥಾನದಲ್ಲಿ ಎಲ್ಲಾ ಕಡೆಯ ಆಹಾರ ಉತ್ಪತ್ತಿ ಯಾವ ರೀತಿ ಆಗುತ್ತದೆ ಎಂಬ ಒಂದು ನಿರೀಕ್ಷಣೆಯನ್ನು ಗಮನಿಸಿ ತದನಂತರ ಹತೋಟಿಯನ್ನು ಪೂರ್ತಿಯಾಗಿ ತೆಗೆಯುವುದರ ಮೂಲಕ ಪ್ರಜೆಗಳಿಗೆ, ಅದರಲ್ಲಿಯೂ ರೈತಾಪಿ ಜನಗಳಿಗೆ, ಹೆಚ್ಚು ಸೌಕರ್ಯವನ್ನು ಕಲ್ಪಿಸಿಕೊಡುತ್ತೀರಿ ಎಂದು ನಂಬುತ್ತೇನೆ. ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ನಾನು ನನ್ನ ಈ ನಾಲ್ಕಾರು ಮಾತುಗಳನ್ನು ಸರ್ಕಾರದ ಮುಂದಿಟ್ಟು ಇವುಗಳನ್ನು ಆಲೋಚನೆಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಸ್ವಾಮಿ ಅಧ್ಯಕ್ಷರೇ, ಆಹಾರ ಸಮಸ್ಯೆಯ ವಿಷಯದಲ್ಲಿ ಈಗ ನಮ್ಮ ಮಾನ್ಯಸಭೆಯ ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಅವರು ಯಾವ ನಿರ್ಧರವಾದ ಅಭಿಪ್ರಾಯವನ್ನೂ ಸರ್ಕಾರದವರಿಗೆ ಸೂಚಿಸಿದ ಹಾಗೆ ಕಾಣಲಿಲ್ಲ. ಈಗಿನ ನಿಯಂತ್ರಣ ಸುಮಾರು ಡಿಸೆಂಬರ್‌ವರೆಗೂ ಮುಂದುವರಿದು ಅನಂತರ ದೇಶದಲ್ಲಿ ಬೆಳೆ ಚೆನ್ನಾಗಿಬಂದರೆ ಆಹಾರ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು

(ಶ್ರೀ ಎಂ. ಲಿಂಗಣ್ಣನವರು)

ನೋಡಿಕೊಂಡು ಸಂಪೂರ್ಣ ತೆಗೆದುಹಾಕ ಬೇಕೆಂಬ ಅಭಿಪ್ರಾಯ ಅವರಿಗೆ ಇದ್ದ ಹಾಗೆ ಕಾಣುತ್ತದೆ. ಎಂದರೆ ಒಂದು ರೀತಿ ಎಚ್ಚರಿಕೆ ಯಿಂದ ಹೋಗತಕ್ಕ ನೀತಿ ಇದು. ಈ ಸಂದರ್ಭ ದಲ್ಲಿ ಇದು ಉಚಿತವೇ ಆದರೂ, ನನ್ನ ಅನೇಕ ಮಾನ್ಯಮಿತ್ರರು ಹೇಳಿದಹಾಗೆ, ನೀವು ಈ ಆಹಾ ರದ ನೀತಿ ಏನಿದೆ, ಈ ನಿಯಂತ್ರಣ ಪದ್ಧತಿ ಏನಿದೆ ಇದನ್ನು ಮತ್ತೊಮ್ಮೆ ಹಾಕಬೇಕ್ಕಾ ದೀತೋ ಏನೋ, ಅಂಥ ಸಂದರ್ಭ ಬಂದೀತೋ ಏನೋ ಎಂಬ ಭಯ ನನಗೂ ಇದೆ. ಆದರೆ, ಈ ನಿಯಂತ್ರಣ ಪದ್ಧತಿಯಲ್ಲಿ ಅನೇಕ ನ್ಯೂನತೆ ಗಳೇನಿವೆ ಅವನ್ನು ಯೋಚನೆಮಾಡಿ ರೈತರಿಗೆ ಇರತಕ್ಕ ಕಷ್ಟಗಳನ್ನು ನಿವಾರಣೆಮಾಡಲು ಮಾನ್ಯ ಆಹಾರ ಮಂತ್ರಿಗಳು ಪ್ರಯತ್ನಪಡ ಬೇಕೆಂದು ನನ್ನ ಆಶೆ. ಅವರು ನಿಜವಾಗಿಯೂ ಕೂಡ ರೈತಾಪಿ ಜನರ ಬಾಂಧವರು. ನಿಯಂತ್ರಣ ವಿಷಯದಲ್ಲಿ ರೈತರಿಗೆ ಕಷ್ಟ ಏನಿದೆ ಎಂಬುದು ಚೆನ್ನಾಗಿ ಗೊತ್ತು. ಸುಗ್ಗಿಯಾಜ್ಞೆಯ ಲ್ಲಿರತಕ್ಕ ಪ್ರೊಟೆಕ್ಷನ್ ಪ್ರಾವಿಜನ್ ಏನಿದೆ ಅದ ರಂತೆ ನಿಜವಾಗಿಯೂ ರೈತರಿಗೆ ಪ್ರೊಟೆಕ್ಷನ್ ಸಿಕ್ಕುತ್ತಾ ಇಲ್ಲ. ಸುಗ್ಗಿಯಾಜ್ಞೆ ನಮ್ಮ ಮೈಸೂರು ದೇಶದಲ್ಲಿರತಕ್ಕದ್ದು ನನಗೆ ಗೊತ್ತಿರುವಹಾಗೆ ಇಡೀ ಹಿಂದೂಸ್ಥಾನದಲ್ಲೇ ಉತ್ತಮವಾಗಿರ ತಕ್ಕ ಒಂದು ಯಂತ್ರವಾಗಿದೆ. ಈ ಯಂತ್ರದಲ್ಲಿ ಪ್ರಾವಿಜನ್ ಏನೋ ಇದೆ, ಆದರೆ ಸರಿಯಾಗಿ ಜಾರಿ ಮಾಡುತ್ತಾ ಇಲ್ಲ. ಒಂದೇ ಒಂದು ಉದಾ ಹರಣೆ ಹೇಳಬೇಕೆಂದರೆ, ಒಂದು ಎಕರೆಯಲ್ಲಿ ಎಷ್ಟು ಬೆಳೆಯುತ್ತದೆ ಎಂಬುದನ್ನು ನಿಷ್ಕರ್ಷೆ ಮಾಡುವ ಸಂದರ್ಭದಲ್ಲಿ ಆ ಹಳ್ಳಿಯಲ್ಲಿರತಕ್ಕ ಶಾನುಭೋಗ ಅಥವಾ ಪಟೇಲ ಮತ್ತು ಚೇರ್ಮನ್ ಸೇರಿ ಎರಡು ಸಾರಿ ಪರೀಕ್ಷೆಮಾಡಿ ಪಹಣಿ ಬರೆಯಬೇಕೆಂದು ಇದೆ. ಹಾಗೆ ಯಾರು ಮಾಡುತ್ತಾರೆ ? ಇಷ್ಟ ಬಂದಷ್ಟು, ಒಂದು ಎಕರೆಗೆ 10 ಪಲ್ಲ ಬೆಳೆಯತಕ್ಕ ಕಡೆ 20 ಪಲ್ಲ ಬೆಳೆಯುತ್ತಾನೆ ಎಂದು ಬರೆಯುತ್ತಾರೆ. ಹಳ್ಳಿಯ ರೈತನನ್ನು, ಯಾರು ಜಮೀನಿನಲ್ಲಿ ಉತ್ಪನ್ನ ಮಾಡುತ್ತಾನೋ ಅವನನ್ನು, ಪ್ರಶ್ನೆಮಾಡುವ ಸಂಭವವೇ ಬರುವುದಿಲ್ಲ. ಇದರ ಜೊತೆಗೆ ಪಹಣಿಯನ್ನು ಬರೆದಾದ ಮೇಲೆ ಆಹಾರವನ್ನು ಸರ್ಕಾರಕ್ಕೆ ಬಿಟ್ಟುಕೊಡುವ ಕಾಲದಲ್ಲಿ ಅವನು ಕಷ್ಟಕ್ಕೆ ಸಿಕ್ಕುತ್ತಾನೆ. ಫುಡ್ ಶಿರಸ್ತೇ ದಾರರು, ಅಮಲ್ದಾರರು ಇವರ ಕೈಗೆ ಸಿಕ್ಕು ತ್ತಾನೆ. ಆಹಾರ ನಿಯಂತ್ರಣದ ಉದ್ದೇಶ ವೇನಿದೆಯೋ ಅದು ಸಫಲವಾಗದೆ, ವಿಷಾದಕರ ವಾದ ಪರಿಸ್ಥಿತಿ, ವಾತಾವರಣ ನಮ್ಮ ಹಳ್ಳಿ ಗಾಡುಗಳಲ್ಲಿರುವುದರಿಂದ, ಹಳ್ಳಿಯಲ್ಲಿರತಕ್ಕ ರೈತಬಾಂಧವರು ಅದನ್ನು ಬಹಳ ಕೀಳಾಗಿ ಕಾಣುತ್ತಾರೆ. ಈ ದೃಷ್ಟಿಯಿಂದ ನಿಯಂತ್ರಣದ ವಿಷಯದಲ್ಲಿ ಹಳ್ಳಿಗಾಡಿನ ಜನಗಳಿಗೆ ಮಾನಸಿಕ ವೈಪರೀತ್ಯ ಬಂದು, ನಮ್ಮ ಗೋಪಾಲಗೌಡರು ಹೇಳಿದಹಾಗೆ, ನಿಯಂತ್ರಣ ವಿಷಯದಲ್ಲಿ ಒಂದು ಬೇಜಾರು ಹುಟ್ಟಿಹೋಗಿ ಈ ನಿಯಂತ್ರಣ ಹೋದರೆ ಸಾಕು ಎಂಬ ಮನೋಭಾವ ಬಂದಿದೆ. ತಾವು ಆಹಾರ ನಿಯಂತ್ರಣವನ್ನು ಜಾರಿಗೆ ತರುವ ಸಂದರ್ಭದಲ್ಲಿ ಅನೇಕ ನ್ಯೂನತೆಗಳನ್ನು ಕಂಡು ಅದನ್ನು ಸಡಿಲಪಡಿಸಿರುವುದರಿಂದ ರೈತರು ನಿಜವಾಗಿಯೂ ಬಹಳ ಆನಂದದಿಂದ ಸ್ವಾಗತಿಸುವವರಾಗಿದ್ದಾರೆ.

3 P.M.

ಆದರೆ, ನಾವು ಆಹಾರದ ನಿಯಂತ್ರಣವನ್ನು ಜಾರಿಗೆತಂದು ಈಗಾಗಲೇ ಮೈಸೂರು ದೇಶ ದಲ್ಲಿ 16 ಲಕ್ಷ ಚಿಲ್ಲರೆ ಪಲ್ಲ ಬತ್ತವನ್ನು 19-21 ರೂಪಾಯಿಗಳಲ್ಲಿ ಸಂಗ್ರಹಣೆ ಮಾಡಿ ಕೊಂಡು, 33⅓ ರೂಪಾಯಿಗಳಿಗೆ ಮಾರಿ ಲಾಭ ಹೊಂದುತ್ತಿದ್ದೀರಿ. ಅಂದರೆ, you have stepped yourselves into the place of the middleman and you have made a profit out of procurement. During the last harvest period you have not paid any bonus whatsoever to the producer. At the same time, we are saying that the producer should be encouraged and that is not being done.

ಈ ದೃಷ್ಟಿಯಿಂದ ನಾವು ಅವನಿಗೆ ಯಾವ ರೀತಿ ಉತ್ತೇಜನ ಕೊಡಬೇಕು, ಯಾವರೀತಿ ನಾವು ಅವನಿಂದ ಪಡೆದ ಲಾಭಕ್ಕೆ ಪ್ರತಿಫಲ ವಾಗಿ ಪರಿಹಾರ ಕೊಡಬೇಕೆಂಬ ವಿಷಯ ದಲ್ಲಿ ನಾವು ನಿಗಾಕೊಟ್ಟಿಲ್ಲ. ಇದೇ ವಿಷಯದಲ್ಲಿ ನಾನೊಂದು ಖೋತಾ ನಿರ್ಣಯವನ್ನು ತಂದು ಪಲ್ಲ ಒಂದಕ್ಕೆ ಒಂದು ರೂಪಾಯಿಯನ್ನಾ ದರೂ ಪರಿಹಾರಕೊಡಬೇಕೆಂದು ಕೇಳಿದ್ದೇನೆ. ನಾನೇಕೆ ಇದನ್ನು ಕೇಳಿದ್ದೇನೆಂದರೆ, ಅವನಿಂದ ತೆಗೆದುಕೊಳ್ಳುವ ದವಸಕ್ಕೆ 19-21 ರೂಪಾಯಿ ಗಳನ್ನು ನಿರ್ಣಯ ಮಾಡುವಲ್ಲಿ ಅದನ್ನು ರೈತನ cost of production ನ್ನಿನ ಮೇಲೆ ನಿರ್ಣಯಿಸುವುದಿಲ್ಲ. ಶ್ರೀಮಾನ್ ಶಂಕರೇ ಗೌಡರು ಇದೇ ವಿಚಾರದಲ್ಲಿ ಪ್ರಶ್ನೆ ಕೇಳುತ್ತಾ ಯಾವ ಆಧಾರದ ಮೇಲೆ ಈ ದರವನ್ನು ಗೊತ್ತು ಮಾಡಿದ್ದೀರಿಎಂದು ಕೇಳಿದ್ದಕ್ಕೆ ಯಾವ basis ಮೇಲೆಯೂ ಇಲ್ಲವೆಂದು ಹೇಳಿದ್ದರು. Cost of Production ನ್ನಿನ ಮೇಲೆ ದರವನ್ನು ಗೊತ್ತುಮಾಡಿಕೊಂಡು ಅವನಿಂದ ಕೊಂಡಿದ್ದರೆ ಈರೀತಿ ವಾಪಸು ಬೋನಸ್ ರೂಪದಲ್ಲಿ ಏನಾ ದರೂ ಕೊಡಿ ಎಂದು ಹೀಗೆ ಕೇಳುತ್ತಲೇ ಇರ ಲಿಲ್ಲ. ಹಾಗಿಲ್ಲದೆ arbitrary ಯಾಗಿ ದರ ನಿಗದಿ ಮಾಡಿಬಿಟ್ಟು 19-21 ರೂಪಾಯಿಗಳಿಗೆ ಕೊಂಡದ್ದನ್ನು $33\frac{1}{2}$ ರೂಪಾಯಿಗಳಿಗೆ ಮಾರಿ ಲಾಭ ಪಡೆದಿರುವುದರಿಂದ ನಾವು ಕೇಳುವುದು ನ್ಯಾಯ ಮತ್ತು ಸಹಜ. ಹಾಗೆ ವಾಪಸ್ಸು ಕೊಟ್ಟರೆ ಅವನು ಇನ್ನೂ ಹೆಚ್ಚಿಗೆ ಬೆಳೆಯಲ್ಲು ಉತ್ತೇಜಕವಾಗುತ್ತದೆ. ಅವನು ಹೆಚ್ಚಿಗೆ ಬೆಳೆ ಯಲು ಪ್ರಾರಂಭಮಾಡುತ್ತಾನೆ. ಆದ್ದರಿಂದ ಈ ವಿಷಯವನ್ನು ಮತ್ತೊಮ್ಮೆ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ಹಿಂದೆ ಶ್ರೀಮಾನ್ ಚೆಂಗಲರಾಯರೆಡ್ಡಿಯವರು ಇದ್ದಾಗ ಈ ರೀತಿಯಾಗಿ ಒಮ್ಮೆ ಆಹಾರದ ಬೆಲೆ ಹೆಚ್ಚಿ ಸಿದಾಗ, ಪಲ್ಲಾ ಒಂದಕ್ಕೆ ಒಂದು ರೂಪಾಯಿ ನಂತೆ ರೈತರಿಗೆ ವಾಪಸು ಕೊಟ್ಟರು. ರೈತರಿಗೆ ಸಹಾಯ ಮಾಡಿದಷ್ಟೂ ಆತನಿಗೆ ಉತ್ತೇಜನ ಕೊಟ್ಟಷ್ಟೂ ಅವನು ಹೆಚ್ಚು ಹೆಚ್ಚು ಬೆಳೆಯುವು ದಕ್ಕೆ ಪ್ರಯತ್ನಪಡುತ್ತಾನೆ. ಅವನಿಗೂ ಬೆಳೆ ಯಲು ಉತ್ಸಾಹವಿರುತ್ತದೆ ಎಂಬುದೇ ಅವರು ಹಾಗೆ ಬೋನಸ್ ಕೊಟ್ಟಿದ್ದರ ಉದ್ದೇಶವಾ ಗಿತ್ತು. ಈಗಲೂ ನಮ್ಮ ಸರ್ಕಾರದವರು ಅದೇ ನೀತಿಯನ್ನನುಸರಿಸಿ ರೈತರಿಗೆ ಉತ್ತೇಜನ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಆಮೇಲೆ, ಈಗ ಸರ್ಕಾರದವರು ತಮ್ಮ ಆಹಾರ ನೀತಿಯನ್ನು ಸಡಿಲಮಾಡುತ್ತಾ ಬಂದಿದ್ದಾರೆ. ನಾಲ್ಕು ಪಟ್ಟಣಗಳಲ್ಲಿ ವಿನಾ ಬಾಕಿ ಎಲ್ಲ ಕಡೆಗಳಲ್ಲಿಯೂ ನಿಯಂತ್ರಣವನ್ನು ತೆಗೆದು ಆಹಾರಧಾನ್ಯಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿ ಸಲು ಅವಕಾಶ ಮಾಡಿದ್ದಾರೆ..............

Mr. SPEAKER.—So to say, you have spoken on your cut motion about the enhancement of one rupee per palla of food grains. That is over and the time is also over.

The House will now rise for lunch and meet again at 3-35 P.M.

The House adjourned for Lunch at Five Minutes past Three of the Clock and reassembled at Thirty-five Minutes past Three of the clock.

[Mr. SPEAKER in the Chair]

ಶ್ರೀ ಎಂ. ಶಂಕರಲಿಂಗೇಗೌಡರು (ನಾಗ ಮಂಗಲ).—ಅಧ್ಯಕ್ಷರೆ, ಒಂದು ವಿಚಾರವನ್ನು ತಮ್ಮಲ್ಲಿ ಹೇಳಬೇಕಾಗಿದೆ. ಸೆಕ್ರೆಟರಿಯವರು ನಮಗೊಂದು ನೋಟೀಸನ್ನು ಕಳುಹಿಸಿಕೊಟ್ಟಿ ದ್ದಾರೆ. ಅದರಲ್ಲಿ ಮೇ 14ನೆಯ ತಾರೀಖಿನಿಂದ ಸಂಬಳ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾನೇನು 100 ರೂಪಾಯಿ ಕೊಡಿ ಎಂದು ಕೇಳಲಿಲ್ಲ ! ಇಲ್ಲಿ 100 ರೂಪಾಯಿಗಳನ್ನು ಕೊಡುವುದು ಯಾವಾಗ ಎಂತು ಎಂದು ಹೇಳಿ ದ್ದಾರೆ. "Certified that I have continued to be a Member of the Legislative Assembly for the period for which the salary is drawn" ಎಂದು. I have become a member from the 4th of

(ಶ್ರೀ ಎಂ. ಶಂಕರಲಿಂಗೇಗೌಡರು)

February. ಇಂಥಾದ್ದಿರುವಾಗ ನಮಗೆ ಹೀಗೆ ಸರ್ಕ್ಯುಲರ್ ಕಳುಹಿಸಿ complusory ಯಾಗಿ ದುಡ್ಡು ತೆಗೆದುಕೊಳ್ಳಿ ಎಂದು ಹೇಳಿರುವುದು ಕ್ರಮಬದ್ಧವಾಗಿಲ್ಲ. This is out of order.

(Sri S. SRINIVASA IYENGAR) *Rose.*

Mr. SPEAKER.—Only 5 minutes. No Hon'ble Member will exceed five minutes. At 4-10 P.M. the Government may reply.

Sri S. SRINIVASA IYENGAR (T.-Narsipur).—Mr. Speaker, I beg to speak a few words about these controls. In my experience for the past 10 years, these controls have led to evasions. Evasions have further prompted us to resort to some other controls wherein fresh evasions are noticed. As a result of these things the agriculturists have been forced to live an unmoral life. These controls were brought into effect for the sole purpose of acquiring foodgrains necessary for the consumption of the consumers. The Government created the monopoly of purchase and sales. Food Acquisition orders have not been quite successful for the past several years. As a Member has already put it, most of the provisions have not been enforced properly. It has not been possible to enforce them because the entire thing depended on the estimate of food crops made by the Revenue authorities. The defects lay there. These controls are not helpful to the agriculturists.

We were told that the State had a deficit of 1·5 lakhs tons of foodgrains. The Grow More Food Campaign was initiated in 1948. Already for that scheme for the last four years 147 lakhs have been spent, but, I belive, our production has not increased. So, is it the agriculturist that has to be blamed for this or is it the Government that have to be blamed ?

Sri K. HANUMANTHAIYA (Chief Minister).—The Member. (Laughter).

Sri S. SRINIVASA IYENGAR.—Member also. I submit Sir, that most of these schemes that were undertaken in utter haste have not been completed making use of the available resources of the State. Before undertaking these schemes, I submit, Sir, we ought to have considered whether we could afford and we ought to have taken some other schemes which could have given us some relief. Unless we help the agriculturist to grow more foodgrains, it may not be possible to bridge the gap of deficit. How best could the State help the agriculturist to improve the methods ? At present we are having 7·72 lakhs acres under paddy irrigation and we have been able to procure 16 lakhs of pallas of paddy only. It comes to an average of 2 pallas an acre. We could certainly adopt some measures wherein the agriculturist can grow more paddy in his land. I believe, Sir, that the scheme so far undertaken by the Government have not been helpful to the extent that we expected. At present, these controls are not in the interest of the agriculturist. Therefore, I submit, these controls may be removed immediately and at the same time I also share with the opinion that immediately after the controls are removed, the prices may sky-rocket and it may be necessary to safeguard against any such contingency. In fact, the order of the food acquisition means a lot of evasion. Acquisition, perhaps, must follow the example of the bee, as Sri Ramaswamy Reddiar put it the other day in Madras Assembly. Bee collects honey from the flower without damaging the flower. But, I submit, as it is to-day, the acquisition order does not follow that example. Therefore, while appreciating the relaxation of the movements of foodgrains, I would also urge that the productive capacity of the land should be augmented and intensive steps ought to be taken to improve the agricultural methods and aid to the agriculturists is to be given in large measures. Thank you, Sir.

ಶ್ರೀ ವಿ. ವೆಂಕಟಪ್ಪನವರು (ಚನ್ನಪಟ್ಟಣ).—ಮಾನ್ಯ ಸಭಾಪತಿಗಳೇ, ಆಹಾರ ಮಂತ್ರಿಗಳು ಈ ದಿವಸ ನಮ್ಮ ಮುಂದೆ ಆಹಾರದ ವಿಷಯದಲ್ಲಿ ಕೆಲವು ಆವಶ್ಯಕವಾದ ವಿಷಯ

ಗಳನ್ನು ಇಟ್ಟಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

ಈಗ ಆಹಾರದ ಕಂಟ್ರೋಲಿನ ವಿಷಯದಲ್ಲಿ ಮಾತನಾಡುವಾಗ ಹಿಂದೆ ನಡೆದಿರತಕ್ಕ ವಿಷಯಗಳನ್ನು ಹೇಳುವುದರಿಂದ ಯಾವ ಪ್ರಯೋಜನವೂ ಆಗಲಾರದು, ಮತ್ತು ಅದು ಅನಾವಶ್ಯಕವೆಂದು ನನಗನ್ನಿಸುತ್ತದೆ. ಈಗ ತಾವು ಕೈಕೊಂಡಿತರಕ್ಕಂಥ ಆಹಾರದ ನೀತಿಯ ವಿಷಯ ಹೇಳಬೇಕಾದರೆ, ಇದರಿಂದ ದೇಶದಲ್ಲಿ ಸ್ವಲ್ಪಮಟ್ಟಿಗೆ ಜನರಿಗೆ ಅನುಕೂಲ ಮತ್ತು ಸಂತೋಷವುಂಟಾಗಿದೆಯೆನ್ನಬಹುದು.

ಆದರೆ ಇದು ಎಷ್ಟರ ಮಟ್ಟಿಗೆ ನೀತಿಯುತವಾದುದು ಎಂಬುದನ್ನು ನಾವು ಯೋಚನೆ ಮಾಡಬೇಕು. ತಾವು ಅವರಿಗೆ ಎಷ್ಟೆಷ್ಟು ಆವಶ್ಯಕವೋ ಅಷ್ಟನ್ನು ಮಾತ್ರ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವುದಕ್ಕೆ ಅವಕಾಶವಿದೆ ಎಂದು ಹೇಳಿದ್ದೀರಿ. ಈಗ ಹಾಗೆ ನಡೆಯುತ್ತಿದೆಯೆ ಎಂದರೆ, ಇಲ್ಲ. ಬೆಲೆಯ ವಿಷಯದಲ್ಲಿಯೂ ಕೂಡ ಬೇಕಾದಷ್ಟು ಬದಲಾವಣೆಯಾಗಿದೆ. ಅಲ್ಲದೆ ಸಾಗಿಸತಕ್ಕ ವಿಷಯದಲ್ಲಿ ಒಬ್ಬ ಮನುಷ್ಯ ಎಷ್ಟನ್ನು ಹೊತ್ತುಕೊಂಡು ಹೋಗಬಹುದೋ ಅಷ್ಟನ್ನೂ ಸಾಗಿಸುವುದಿರಲಿ, ಲಾರಿಗಳಲ್ಲಿ ಹೋಗುತ್ತಿದೆ ! ಶ್ರೀಮಾನ್ ಶಂಕರಲಿಂಗೇಗೌಡರು ಹೇಳಿದ ಹಾಗೆ, you will have to wink at it ; ಆದರೆ ಇದರಿಂದ ತೊಂದರೆಯಾಗುವುದರಲ್ಲಿ ಸಂಶಯವಿಲ್ಲ. ಊಟದ ಉಪಯೋಗಕ್ಕೇ ಸಾಗುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಕಂಟ್ರೋಲನ್ನು ಪೂರ್ತಿಯಾಗಿ ತೆಗೆದು ಇದರಿಂದ ಯಾವ ವಿಧವಾದ ತೊಂದರೆಯೂ ಆಗದಿರುವಂತೆ ನೋಡಿಕೊಳ್ಳುವುದು ಆವಶ್ಯಕ. ಆದರೆ ಈಗ ಮಾಡಿರುವುದರಲ್ಲಿ ಅನೀತಿಗೆ ನಾವೆಲ್ಲರೂ ಒಳಗಾಗಬೇಕಾದ ಸಂದರ್ಭ ಬಂದಿದೆ. ಸರ್ಕಾರದವರು ಕಂಡರೂ ಕಾಣದೆ ಇರುವ ಹಾಗಿರಬೇಕು. ಕೊಂಡುಕೊಳ್ಳುವುದು ಯಾವ ಬೆಲೆಯಲ್ಲಿ, ಸಾಗಿಸುವುದು ಹೇಗೆ ಎಂಬುದನ್ನೆಲ್ಲಾ ನೋಡಿದರೆ, ಈ ವಿಷಯದಲ್ಲಿ ಒಂದು ನಿಖರವಾದ ಏರ್ಪಾಡುಮಾಡುವುದು ಅಗತ್ಯವೆಂದು ಕಾಣುತ್ತದೆ. ಸರ್ಕಾರದವರು ಅಕ್ಕಿಯನ್ನು ಯಾವ ದರದಲ್ಲಿ ಕೊಳ್ಳುವವರಿಗೆ ಮಾರುತ್ತಿದ್ದೀರೋ ಅದಕ್ಕಿಂತ ಹೆಚ್ಚು ಬೆಲೆಗೆ ಬೇರೆಯವರು ಮಾರದಂತೆ ನೋಡಿಕೊಂಡರೆ ರೈತನಿಗೆ ಅನುಕೂಲವಾಗುತ್ತದೆ. ಹಾಗಿಲ್ಲದೆ ರೈತನಿಂದ ಕೊಂಡುಕೊಳ್ಳುವ ಭತ್ತದ ಬೆಲೆಯು ಈಗಿನ ಸರ್ಕಾರದವರು ನಿಗದಿಮಾಡಿರುವಷ್ಟೇ ಇರಬೇಕು, ಮಾರುವ ಬೆಲೆಯೂ ಈ ರೀತಿಯೇ ಇರಬೇಕೆಂದರೆ, ರೈತನಿಗೆ ಬಹಳ ಅನ್ಯಾಯ ಮಾಡಿದ ಹಾಗಾಗುತ್ತದೆ. ನಾನು ಉದಾಹಾರಣೆಗಾಗಿ ಒಂದು ಲೆಕ್ಕವನ್ನು ಹೇಳುತ್ತೇನೆ.

ಸಣ್ಣ ಬತ್ತವನ್ನು ಖಂಡುಗಕ್ಕೆ (2 ಪಲ್ಲ) 60 ರೂಪಾಯಿಗಳ ಹಾಗೆ ಕೊಂಡುಕೊಳ್ಳುತ್ತಾರೆ. ಅದನ್ನು ಅಕ್ಕಿಮಾಡಿಸಿ ರೂಪಾಯಿಗೆ ಒಂದೂವರೆ ಸೇರಿನಂತೆ ನೀವು ಗೊತ್ತುಮಾಡಿರುವ ಹಾಗೆಯೇ ಮಾರುತ್ತಾರೆ. ಆದರೂ ಯಾರು ವ್ಯಾಪಾರ ಮಾಡುತ್ತಾರೋ ಅವರಿಗೆ ನಫೆ ಬರುತ್ತದೆ. ಹೀಗೆ ಹೇಳಿದರೆ ಹಾಸ್ಯಾಸ್ಪದವಾಗಿ ಕಾಣಬಹುದು. ಲೆಕ್ಕಹಾಕಿ ನೋಡಿದರೆ ಗೊತ್ತಾಗುತ್ತದೆ. ಒಂದು ಖಂಡುಗ ಬತ್ತವನ್ನು ಅಕ್ಕಿ ಮಾಡಿಸಿದರೆ, ಕೊನೆಯ ಪಕ್ಷ ಒಂದು ಪಲ್ಲಾ ಐದು ಸೇರಾದರೂ ಅಕ್ಕಿ ಆಗುತ್ತದೆ. ಖಂಡುಗಕ್ಕೆ 60 ರೂಪಾಯಿಕೊಟ್ಟು ಕೊಂಡು, ಒಂದು ಪಲ್ಲಾ ಐದು ಸೇರು ಅಕ್ಕಿಯನ್ನು ಮಾರಿದರೆ 70 ರೂಪಾಯಿ ಸಿಕ್ಕುತ್ತದೆ. ರೈತನಿಗೆ ನಾವು ಕೊಡುವುದೆಷ್ಟು ? ಖಂಡಿಗೆ 40 ರೂಪಾಯಿ. ಅವನು 60 ರೂಪಾಯಿಗಳಿಗೆ ಮಾರಿದರೆ ಅವನಿಗೆ 20 ರೂಪಾಯಿ ಹೆಚ್ಚು ಬಂತು. ಹಾಗಿಲ್ಲದೆ ಅವನು 40 ರೂಪಾಯಿಗಳಿಗೆ ಮಾರಬೇಕೆಂದರೆ ಹೇಗೆ? ತಾವು ಲೈಸೆನ್ಸ್ಡ್ ಡೀಲರ್ಸ್ ಮಾಡಬೇಕೆಂದು ಹೇಳುತ್ತೀರಿ. ಯಾವ ರೀತಿ ಮಾಡುತ್ತೀರೆಂಬುದು ಗೊತ್ತಾಗದೇ ಇರುವುದರಿಂದ ಇದನ್ನು ಹೇಳುತ್ತಿದ್ದೇನೆ. ಈಗ 60 ರೂಪಾಯಿಗೆ ಕೊಂಡು ಅಕ್ಕಿಮಾಡಿ 70 ರೂಪಾಯಿಗೆ ಮಾರುತ್ತಾನೆ. ಅವನು ಬಾಡಿಗೆ, ಹಲ್ಲಿಂಗ್ ಚಾರ್ಜು ಕೊಟ್ಟರೂ ಎಳೆಂಟು ರೂಪಾಯಿ

(ಶ್ರೀ ವಿ. ವೆಂಕಟಪ್ಪನವರು)

ಲಾಭ ಸಿಕ್ಕುತ್ತದೆ. ಸರ್ಕಾರದವರು ಅಕ್ಕಿ ಬೆಲೆಯನ್ನು ಇದೇ ರೀತಿ ಇಟ್ಟು ರೈತ ಭತ್ತವನ್ನು ಖಂಡುಗಕ್ಕೆ 40 ರೂಪಾಯಿಗಳ ಪ್ರಕಾರ ಕೊಡಬೇಕೆಂದರೆ, ರೈತನಿಗೆ ಕಂಡ ಹಾಗೆಯೇ 20 ರೂಪಾಯಿಗಳು ಲುಕ್ಸಾನಾಗುತ್ತದೆ, ನೀವಾಗಿ ಮಧ್ಯಸ್ಥಗಾರರಿಗೆ, ವ್ಯಾಪಾರಸ್ಥರಿಗೆ ಸುಲಭವಾಗಿ ಒಂದು ಖಂಡುಗ ಭತ್ತಕ್ಕೆ ಸುಮಾರು 30 ರೂಪಾಯಿಗಳನ್ನು ಆದಾಯ ಮಾಡಿಕೊಳ್ಳುವಂತೆ ಏರ್ಪಾಡುಮಾಡಿದ ಹಾಗಾಗುತ್ತದೆ. ಆದುದರಿಂದ ಸ್ವಲ್ಪ ವಿಮರ್ಶೆಮಾಡಿ, ಯಾವ ರೀತಿ ಮಾಡಿದರೆ ರೈತನಿಗೆ ಅನ್ಯಾಯವಾಗುವುದಿಲ್ಲವೆಂದು ತೋರುತ್ತದೆಯೋ ಆ ರೀತಿ ಮಾಡಲು ಪರಿಶೀಲನೆ ಮಾಡಬೇಕು. ರೈತನಿಗೆ ಕೊಡಬೇಕಾದ ಒಂದು ಕನಿಷ್ಠ ಬೆಲೆಯನ್ನು ನಿಗದಿ ಮಾಡಬೇಕೆಂದು ಇದುವರೆಗೆ ಅನೇಕವೇಳೆ ಸರ್ಕಾರದ ಮತ್ತು ಕೆಲವು ಸಮಿತಿಗಳ ಗಮನಕ್ಕೆ ತಂದರೂ ಕೂಡ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಈ ದಿವಸ ತಾವು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ರೈತನಿಗೆ ಒಂದು ನಿಗದಿಯಾದ ಬೆಲೆಗಿಂತ ಕಡಮೆ ಬೆಲೆ ಸಿಕ್ಕದಂತೆ ಮಾಡಲು ಯೋಚನೆ ಮಾಡುತ್ತೇವೆ ಎಂದು ತಮ್ಮ ಭಾಷಣದಲ್ಲಿ ಹೇಳಿರುವುದಕ್ಕೆ ನಾನು ಕೃತಜ್ಞನಾಗಿದ್ದೇನೆ. ಈ ವಿಷಯವನ್ನು ಸಾಕಷ್ಟು ಪರಿಶೀಲನೆ ಮಾಡಿ ಸೂಕ್ತ ಏರ್ಪಾಡು ಮಾಡಬೇಕು. ಹೀಗೆ ಮಾಡುವಿರೆಂದು ನಂಬಿದ್ದೇನೆ. ಲೈಸೆನ್ಸ್ಡ್ ಡೀಲರುಗಳೂ ಇತರ ವ್ಯಾಪಾರಗಾರರೂ ನೀವು ನಿಗದಿಮಾಡಿದ ಬೆಲೆಗೆ ವ್ಯಾಪಾರ ಮಾಡುವಂತೆ ಅವಕಾಶ ಕೊಡುತ್ತೇವೆಂದು ಹೇಳುವಾಗ ಅವರು ಹೆಚ್ಚು ಶೇಖರಣೆ ಮಾಡಿಕೊಳ್ಳಲು ಅವಕಾಶವಿಲ್ಲದಂತೆ ಮಾಡುವುದೂ ಒಂದು ಅಗತ್ಯವಾಗಿ ನೋಡಬೇಕಾದ ವಿಷಯ. ವ್ಯಾಪಾರಸ್ಥರು ಬಹಳ ಹೆಚ್ಚಾಗಿ ಕೊಂಡು ಶೇಖರಣೆ ಮಾಡುತ್ತಾರೆಂದು ಕೆಲವರು ಹೇಳಿದರು. ಬ್ಯಾಂಕಿನವರು ಹೆಚ್ಚು ಹಣ ಕೊಟ್ಟರೆ ಇದಕ್ಕೆ ಅವಕಾಶವಾಗುತ್ತದೆ, ಆದರೂ ಅವರು ಹೆಚ್ಚು ಕಾಲ ದಾಸ್ತಾನಿಡಲಾರರು. ಏಕೆಂದರೆ, ಭತ್ತವನ್ನು ಒಂದು ವರ್ಷ ಅಥವಾ ಎರಡು ವರ್ಷದ ಮೇಲೆ ಇಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇಷ್ಟುಕಾಲ ಒಂದುವೇಳೆ ತೊಂದರೆ ಬಂದರೂ ಹೆದರುವುದಿಲ್ಲವೆಂದು ಹೇಳುವಂತಾಗಬೇಕು. ಈಗ ಸಮಯ ಸಿಕ್ಕಿದೆ; ದೇಶದಲ್ಲಿರುವ ದವಸ ಹೊರಗೆ ಬಂದಿದೆ. ಬೇಕಾದಷ್ಟು ಜನರು ಮಾರುವುದನ್ನು ತಾವು ನೋಡುತ್ತಿದ್ದೀರಿ. ಇದನ್ನು ಕೊಂಡು ಸರ್ಕಾರದವರು ಶೇಖರಿಸಿ buffer-stock ಆಗಿಮಾಡಿ ಸಾಕಷ್ಟು ದಾಸ್ತಾನಿಟ್ಟುಕೊಂಡರೆ, ದೇಶದಲ್ಲಿ ಕಷ್ಟ ಪರಿಸ್ಥಿತಿ ಬಂದರೂ ಹೆದರುವುದಿಲ್ಲವೆಂಬ ಮನೋಭಾವ ಬರುತ್ತದೆ. ಈ ರೀತಿ ಕಷ್ಟ ಬಂದರೂ ಸರ್ಕಾರದಲ್ಲಿ ಬೇಕಾದಷ್ಟು ದಾಸ್ತಿನಿದೆ ಎನ್ನುವುದು ಜನರ ಮನಸ್ಸಿನಲ್ಲಿ ಬಂದರೆ, ಕೆಲವರು ಲಾಭಕ್ಕಾಗಿ ದಾಸ್ತಾನು ಮಾಡಿ ದೇಶದಲ್ಲಿ ತೊಂದರೆ ಬರುವುದು ಬಹಳ ಮಟ್ಟಿಗೆ ಕಡಮೆಯಾಗುತ್ತದೆ. ಇದರಿಂದ ಕಷ್ಟ ಬರುವುದಿಲ್ಲವೆಂದು ನನ್ನ ನಂಬಿಕೆ.

ಅಧ್ಯಕ್ಷರು ಗಡಿಯಾರವನ್ನು ನನ್ನ ಕಡೆ ತಿರುಗಿಸಿದ್ದಾರೆ. ಆದುದರಿಂದ ನಾನು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಕಂಟ್ರೋಲನ್ನು ತೆಗೆದರೆ ದೇಶದಲ್ಲಿ ಅನಾಯಕತ್ವವಾಗಬಹುದೆಂದು ಹೇಳಿದರು. ಈ ಅಭಿಪ್ರಾಯ ಸರಿಯೆಂದು ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೋ ಅವನ್ನು ಮಾಡಿಕೊಂಡು ತಕ್ಕ ರೀತಿಯಲ್ಲಿ ಎಚ್ಚರಿಕೆಯಿಂದ ಮುಂದುವರಿಯುವ ನೀತಿಯನ್ನನುಸರಿಸಿಕೊಂಡು ಆದಷ್ಟು ಜಾಗ್ರತೆ ಕಂಟ್ರೋಲ್ ಹೋಗುವಂತೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ದೇಶದಲ್ಲಿ ಕಂಟ್ರೋಲ್ ಎಲ್ಲಿಯವರೆಗಿರುತ್ತದೆಯೋ ಅಲ್ಲಿಯವರೆಗೂ ನಮ್ಮ ದೇಶದ ಜನರ ನೀತಿ ಉತ್ತಮಗೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri Devaraj Urs, by means of a very lengthy article, has given expression to his opinion in the month of April in certain papers.

I have to say so, because no time can be given to him now to speak on the subject.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).— ಸ್ವಾಮಿ, ಆಹಾರ ನಿಯಂತ್ರಣ, ಆಹಾರ ಸಂಗ್ರಹಣೆ ಇವುಗಳ ಸಂಬಂಧದಲ್ಲಿ ರೈತರಿಗಿರತಕ್ಕ ತೊಂದರೆಗಳನ್ನು ಈ ಸಭೆಯಲ್ಲಿ ಹೇಳಬೇಕೆಂದರೆ, ಇದು ಜಾರಿಗೆ ಬಂದಲಾಗಾಯ್ತು ಇದರಿಂದಾಗುತ್ತಿರುವ ಕಷ್ಟಗಳನ್ನು ಸರ್ಕಾರದವರ ಗಮನಕ್ಕೆ ತರುತ್ತಲೇ ಇದ್ದೇವೆ. 1943ನೆಯ ಇಸವಿಯಿಂದಲೂ ಈ ಹತೋಟಿಯನ್ನು ತೆಗೆಯಬೇಕು, ಇದು ರೈತರ ಉದ್ಧಾರಕ್ಕೆ ಬಹಳಮಟ್ಟಿಗೆ ಅಡ್ಡಬಂದಿದೆಯೆಂದು ಅನೇಕ ವೇಳೆ ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ಸರ್ಕಾರದವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ, ಆಹಾರಧಾನ್ಯ 8-10 ಲಕ್ಷ ಪಲ್ಲ ಕಡಮೆ ಬರುವುದು; ಹಂಚುವುದು ಶೇಕಡ 12 ಜನರಿಗೆ ಮಾತ್ರ. ಹೀಗೆ ಶೇಕಡ 12ರಷ್ಟು ಜನರಿಗೆ ಹಂಚುವುದಕ್ಕಾಗಿ 10 ಲಕ್ಷ ಪಲ್ಲ ದವಸವನ್ನು ಶೇಖರಣೆ ಮಾಡುವುದಕ್ಕಾಗಿ, ಇಡೀ ದೇಶದ ಜನರಿಗೆ ತೊಂದರೆ ಕೊಟ್ಟು, ಅವರಿಗೆ ಆಹಾರವಿಲ್ಲದಂತೆ ಮಾಡುವುದು ಯಾವ ನ್ಯಾಯ? ಎಂದು ಈ ನೀತಿಯನ್ನು ವಿರೋಧಿಸಿಕೊಂಡು ಬಂದಿದ್ದೇವೆ. ಈಗ ಈ ಸರ್ಕಾರ ಬಂದಮೇಲೆ ಸಾಗಾಣಿಕೆಗಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದಾರೆ. ಇದರಿಂದ ದೇಶದಲ್ಲಿ ರೈತರು ಎಷ್ಟೋ ಸಂತೋಷಪಟ್ಟಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಎಲ್ಲಾ ನಿರ್ಬಂಧಗಳನ್ನೂ ತೆಗೆಯುತ್ತಾರೆಂದು ನಂಬಿಕೆಯಿದೆ. ಈ ಹೆಸರು ತೆಗೆದುಕೊಳ್ಳುವುದು ಮದರಾಸು ಸರ್ಕಾರಕ್ಕೆ ಸಿಕ್ಕಿತು.

ಮುಖ್ಯವಾಗಿ ಈ ನಿರ್ಬಂಧಗಳೆಲ್ಲಾ ಏತಕ್ಕಿರಬೇಕು? ತಾವು ಹೇಳಬಹುದು, ಆಹಾರಾಭಾವವಿರುವುದರಿಂದ ಈ ಕಂಟ್ರೋಲ್‌ಗಳಿರಲೇಬೇಕು ಎಂದು. ಆದರೆ ತಾವು ಭಾವಿಸಿರುವುದು ಸರಿಯಾಗಿಲ್ಲ. ಈ ಕಂಟ್ರೋಲ್‌ಗಳಿದ್ದಷ್ಟೂ ಆಹಾರಾಭಾವ ಹೆಚ್ಚುತ್ತದೆಯೇ ವಿನಾ, ಪರಿಸ್ಥಿತಿ ಎಂದಿಗೂ ಸುಧಾರಿಸುವುದಿಲ್ಲ. ಆದಕಾರಣ ಈ ಪರಿಸ್ಥಿತಿ ಸುಧಾರಿಸಲು ನಮಗಿರತಕ್ಕ ಮಾರ್ಗ ಒಂದೇ—ಎಂದರೆ ಈ ಕಂಟ್ರೋಲನ್ನು ಎತ್ತಿಹಾಕತಕ್ಕದ್ದು. ದೇಶದಲ್ಲಿರತಕ್ಕ ಜನರೆಲ್ಲಾ ಈಗ ಆ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ತಾವು ಪಾಶ್ಚಿಮಾತ್ಯ ರಾಷ್ಟ್ರಗಳ ಹೋಲಿಕೆಯಲ್ಲಿ ನಮ್ಮ ದೇಶವನ್ನು ಹೋಲಿಸಿದರೆ ಅದು ಸರಿಹೋಗುವುದಿಲ್ಲ. ನಮ್ಮ ದೇಶದಲ್ಲಿ ಸುಮಾರು ಶೇಕಡ 80 ರಷ್ಟು ಜನರು ಈ ವ್ಯವಸಾಯದ ಕಸುಬನ್ನು ಅವಲಂಬಿಸಿದ್ದಾರೆ. ಇಂಗ್ಲೆಂಡಿನಲ್ಲಾದರೋ ಪ್ರತಿಮೂವರಿಗೂ ಒಬ್ಬ ವ್ಯವಸಾಯಗಾರನಂತೆಯೂ, ಅಮೇರಿಕಾದಲ್ಲಿ ಪ್ರತಿ ಐದು ಜನಗಳಿಗೊಬ್ಬನಂತೆಯೂ ವ್ಯವಸಾಯ ಮಾಡತಕ್ಕವರಿದ್ದಾರೆ. ಅಲ್ಲಿ ಪ್ರತಿಯೊಬ್ಬ ವ್ಯವಸಾಯಗಾರನೂ ತಲಾ 10 ಪಲ್ಲಕ್ಕೆ ಕಡಮೆ ಇಲ್ಲದೆ ಬೆಳೆಯುತ್ತಾನೆ. ಇಲ್ಲಿ ನಮ್ಮ ದೇಶದಲ್ಲಾದರೋ ಪ್ರತಿ ನಾಲ್ಕು ಜನರಿಗೆ ಮೂವರು ವ್ಯವಸಾಯಗಾರರಿದ್ದಾರೆ. ಇವರು ಇಲ್ಲಿ ತಲಾ $2\frac{1}{2}$ ಪಲ್ಲ ಸರಾಸರಿ ಬೆಳೆದರೆ ಹೆಚ್ಚಾಯಿತು. ಹೀಗಿದ್ದರೂ ಆತನು ತನಗೇ ತಿನ್ನಲಿಕ್ಕೆ ಸಾಕಾದಷ್ಟನ್ನು ಬೆಳೆಯದಿರುವಾಗ ಸರ್ಕಾರದವರು ಆತನಲ್ಲಿರತಕ್ಕದ್ದನ್ನೆಲ್ಲಾ ಬಲೋದ್ಬಂಧಮಾಡಿ, ಆತನು ಕಷ್ಟಪಟ್ಟು ಬೆಳೆದಿದ್ದನ್ನು ಕಿತ್ತುಕೊಂಡು ಬರುವುದೂ, ಅಂಥ ಕಾನೂನುಗಳನ್ನು ಜಾರಿಗೆ ತರುವುದೂ ತೀರಾ ಅನ್ಯಾಯವೆಂದು ಹೇಳದೆ ವಿಧಿಯಿಲ್ಲ. ನಮ್ಮ ದೇಶದಲ್ಲಿ ಆಹಾರವನ್ನು ಕೊಂಡು ಬಳಸತಕ್ಕವರು ಶೇಕಡ 10ರಷ್ಟಿದ್ದಾರೆ. ಉತ್ಪತ್ತಿಮಾಡತಕ್ಕವರು ಶೇಕಡ 75ರಷ್ಟಿದ್ದಾರೆ. ಇಷ್ಟಿದ್ದಾಗ್ಯೂ ಈ ಶೇಕಡ 10ರಷ್ಟು ಬಳಸತಕ್ಕವರಿದ್ದಾರಲ್ಲಾ, ಇವರು ಶೇಕಡ 75ರಷ್ಟಿರತಕ್ಕ ಬೆಳೆಯತಕ್ಕವರನ್ನು ಎಷ್ಟು ಹೀನಾಯವಾಗಿ ಕಾಣುತ್ತಿದ್ದಾರೆಂದರೆ, ಆ ಜಟಕಾಗಾಡಿಹೊಡೆಯತಕ್ಕವನು ಕುದುರೆಯ ಹೊಟ್ಟೆಗೆ ಸರಿಯಾಗಿ ತಿಂಡಿಯನ್ನು ಕೊಡದೇ ಇದ್ದರೂ ಅದನ್ನು ಮೂಳೆ ಮುರಿಯುವಂತೆ ಹೊಡೆದು ಹೊಡೆದು ಹೇಗೆ ಒಂದು ಹೀನಾಯವಾದ ಭಾವನೆಯಿಂದ ಆ ಕುದುರೆಯನ್ನು ಓಡಿಸುತ್ತಿದ್ದಾನೋ, ಆ ರೀತಿಯಲ್ಲಿ ಈ ಶೇಕಡ 10 ರಷ್ಟಿರತಕ್ಕವರು ಈ ಬಡ ರೈತನ ಮೂಳೆಗಳನ್ನೆಲ್ಲಾ ಮುರಿದಿದ್ದಾರೆ. ಆತನಿಗೆ ಅಷ್ಟು ಕಿರುಕುಳ

(ಶ್ರೀ ಬಿ. ಹುಚ್ಚೇಗೌಡರು)

ಕೊಡುತ್ತಿದ್ದಾರೆ. ಆತನಿಗೆ ತಿನ್ನಲಿಕ್ಕೆ ಇರಲಿ, ಇಲ್ಲದೇ ಇರಲಿ, ಆತನಲ್ಲಿರತಕ್ಕದ್ದನ್ನೆಲ್ಲಾ ಕಿತ್ತುಕೊಂಡು ಬರುತ್ತಿದ್ದಾರೆ. ಏನು ಆ ಶ್ಯಾನು ಭೋಗ ಒಂದು ಲೆಖ್ಖ ಬರೆದಿರುತ್ತಾನೋ ಅದು ಸುಳ್ಳೇ, ನಿಜವೇ ಎಂಬುದನ್ನು ವಿವೇಚನೆಗೆ ತೆಗೆದುಕೊಳ್ಳದೆ ವರ್ತಿಸುತ್ತಿರುವುದೇ ಈ ಕಿರುಕುಳಗಳಿಗೆಲ್ಲಾ ಮೂಲ ಕಾರಣವಾಗಿದೆ. ಇದೂ ಹೋಗಲಿ, ಹಾಗೆ ಕಿತ್ತುಕೊಂಡು ಬಂದ ನಂತರ ಅದನ್ನು ಹಂಚುತ್ತಿರುವ ತಮ್ಮ ನೀತಿಯಲ್ಲಿ, ಇಂದು ಜಾರಿಯಲ್ಲಿರುವ ಪದ್ಧತಿಯಲ್ಲಾದರೂ, ಪ್ರತಿಯೊಬ್ಬರಿಗೂ ಅದನ್ನು ಸಮನಾಗಿ ಹಂಚುತ್ತೇವೆಂಬ ಒಂದು ಭರವಸೆಯಾದರೂ ಇದೆಯೋ ಎಂದರೆ ಅದು ಮೊಟ್ಟ ಮೊದಲೇ ಇಲ್ಲ. ಯಾರು ಈ ದಿವಸ ಬೆಳೆಯತಕ್ಕವನಿದ್ದಾನೋ ಆತನಿಂದ, ಆತನಿಗೆ ಸಾಕಾಗುವಷ್ಟು ಇಲ್ಲದಿದ್ದರೂ, ಆತನಲ್ಲಿರತಕ್ಕದ್ದನ್ನೆಲ್ಲಾ ಕಿತ್ತುಕೊಂಡು ಬಂದು ಯಾರು ಬೆಳೆಯದೆ ಇರುತ್ತಾನೋ ಆತನಿಗೆ ಅದನ್ನು ಹಂಚಿ, ಬೆಳೆಯುತಕ್ಕವನು ತನ್ನ ಹೊಟ್ಟೆಗಿಲ್ಲದೆ ಸಾಯುತ್ತಿದ್ದರೂ ಕಣ್ಣಾರ ನೋಡಿಕೊಂಡಾದರೂ ಇರುತ್ತಾರೆ. ಆತನಿಗೆ ಒಂದು ಹಿಡಿ ಅನ್ನಕ್ಕೂ ಮಾರ್ಗವಿಲ್ಲದಂತೆ ಅಡ್ಡಿಮಾಡಿರುವುದರಿಂದ ಆತನಿಗೆ ಸಾಯಬೇಕಾದ ಅವಸ್ಥೆ ಬಂದಿದೆ. ರೈತನಾದವನಿಗೆ ಈ ದಿವಸ ಏನಾದರೂ ಬೆಳೆಯಬೇಕೆಂಬ ಆಸೆಯಿದ್ದರೆ ಆತನಿಗೆ ಒಂದು ಹೆದರಿಕೆ ತುಂಬಾ ಬಂದುಹೋಗಿ ಬೆಳೆಯತಕ್ಕದ್ದನ್ನೇ ಕೈ ಬಿಟ್ಟಿದ್ದಾನೆ. ಏತಕ್ಕೆಂದರೆ ಸರ್ಕಾರದವರು ಪೋಲೀಸಿನವರನ್ನು ಕರೆದುಕೊಂಡು ಹೋಗಿ ರೈತನ ಮನೆಯನ್ನು ಝುಡ್ತಿಮಾಡಿ, ಆತನಲ್ಲಿದ್ದ ದವಸ ಧಾನ್ಯಗಳನ್ನು ಕಿತ್ತುಕೊಂಡು ಬರುವುದೊಂದೇ ಅಲ್ಲದೆ ಆತನನ್ನು ದಸ್ತಗಿರಿ ಕೂಡ ಮಾಡುತ್ತಿದಾರೆ. ಈ ನಾನಾ ತೊಂದರೆಗಳಿಂದ ಈ ಕಂಟ್ರೋಲನ್ನೇ ಕಿತ್ತೊಗೆಯಬೇಕೆಂದು ಈ ಹಿಂದೆಯೇ ಇಂದಿನ ಮುಖ್ಯಮಂತ್ರಿಗಳಾಗಿರತಕ್ಕವರು ಹೇಳುತ್ತಿದ್ದರು. ನಮ್ಮ ಪಾರ್ಲಿಮೆಂಟನಲ್ಲಿ ಕೂಡ ಇದನ್ನು ವಾದಮಾಡುತ್ತಿದ್ದರು. ಅವಷ್ಟು ಜಾಗ್ರತೆ ಕಿತ್ತುಹಾಕುತ್ತಾರೆಂಬ ನಿರೀಕ್ಷಣೆ ಕೂಡ ನಮಗಿರುತ್ತದೆ. ಹಿಂದೆ ಅಸೆಂಬ್ಲಿ ಇದ್ದಕಾಲದಿಂದಲೂ ಅನೇಕರು ಈ ಕಂಟ್ರೋಲನ್ನು ಕಿತ್ತೊಗೆಯಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದಿದ್ದಾರೆ. ಇಷ್ಟೇ ಅಲ್ಲದೆ ಪ್ರತಿವರ್ಷವೂ ನಾವು ಹೊರದೇಶಗಳಿಂದ ಆಹಾರ ತರಿಸತಕ್ಕ ಬಗ್ಗೆ ಖರ್ಚುಮಾಡುತ್ತಿರುವ 150 ಕೋಟಿ ರೂಪಾಯಿಗಳು ಮತ್ತು ಈ ಆಹಾರದ ಬಾಬಿನಲ್ಲಿ ಸಬ್‌ಸಿಡಿಗಾಗಿ ಕೊಡುತ್ತಿರುವ 50 ಕೋಟಿ ರೂಪಾಯಿಗಳೂ ಎಲ್ಲವೂ ನಷ್ಟವಾದಂತೆಯೇ ಸರಿ, ಹೀಗೆ ಮಾಡತಕ್ಕದ್ದು ಉಚಿತವಾದ್ದಲ್ಲ. ಈ ಪಾಲಿಸಿಯನ್ನು ಆದಷ್ಟು ಬೇಗ ರದ್ದುಪಡಿಸಬೇಕು ಎಂಬ ಬಗ್ಗೆ ವಿಶೇಷವಾಗಿ ಕೇಂದ್ರದ ಅಸೆಂಬ್ಲಿಯಲ್ಲಿ 1945ರಲ್ಲೇ ಆಹಾರ ಮಂತ್ರಿಗೂ ಮತ್ತು ವ್ಯವಸಾಯ ಮಂತ್ರಿಗೂ ವಾದ ನಡೆದಿದೆ. ಜನರೆಲ್ಲರೂ ಯಾವಾಗ ಈ ಕಂಟ್ರೋಲ್ ಹೋದೀತೋ ಎಂದು ಹಗಲೂ ರಾತ್ರಿ ದೇವರನ್ನು ಪ್ರಾರ್ಥಿಸುತ್ತಿದ್ದಾರೆ.

ಇನ್ನು ವ್ಯವಸಾಯಗಾರನ ಮೇಲೆ ದಿನ ದಿನಕ್ಕೂ ಏರುತ್ತಿರುವ ಕಂದಾಯದ ಹೊರೆಯನ್ನಂತೂ ಹೇಳತೀರದಾಗಿದೆ. ಆತನಿಂದ ಪ್ರತಿಯೊಂದಕ್ಕೂ ಸುಂಕವನ್ನು ವಸೂಲುಮಾಡುತ್ತಿದ್ದೀರಿ. ಕಂದಾಯ ತೆರುವವನಮೇಲೆ ರೂಪಾಯಿಗೆ ಇಷ್ಟೆಂದು ವಿದ್ಯಾಭ್ಯಾಸಕ್ಕಾಗಿ ತೆರಿಗೆ ವಿಧಿಸಿ, ಅದನ್ನು ವಸೂಲುಮಾಡಿಕೊಳ್ಳುತ್ತಿದ್ದೀರಿ. ಆದರೆ ಅಂಥ ರೈತನ ಮಗನಿಗೆ ಇಂದು ವಿದ್ಯಾಭ್ಯಾಸವಿಲ್ಲ. ತಾವು ರೈತನಿಗೆ ಆತನ ಆರೋಗ್ಯದ ವಿಚಾರವಾಗಿ ಮತ್ತು ಆತನ ಆರ್ಥಿಕಸ್ಥಿತಿಯ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡದಿದ್ದರೆ ಆತನು ಊರ್ಜಿತವಾಗುವಂತಿಲ್ಲ. ಈ ವಿಚಾರಗಳೆಲ್ಲವೂ ಶ್ರೀ ಭೀಮಪ್ಪನಾಯಕರಿಗೂ ತಿಳಿಯದೆ ಇಲ್ಲ. ಈ ದಿವಸ ಅವನಿರತಕ್ಕ ಪರಿಸ್ಥಿತಿಯಲ್ಲಿ ರೈತನಿಗೆ ಆತನು ಏನು ಬೆಳೆಯುತ್ತಾನೆ ; ಆತನ ಆರ್ಥಿಕ ವ್ಯವಸ್ಥೆಯೇನು; ಆತನ ಜೀವನದ ಒಂದು ಮುಖ್ಯಗುರಿ ಏನು ಎಂಬೀ ವಿಚಾರಗಳೊಂದೂ ಗೊತ್ತಿರುವುದಿಲ್ಲ. ರೈತನಿಗೆ ಸಾಲದ ಸೌಲಭ್ಯಗಳಿಲ್ಲ. ತಾನು ಬೆಳೆಯತಕ್ಕ ವಸ್ತುಗಳನ್ನು ಸರಿಯಾದ

ಬೆಲೆಗೆ ಮಾರತಕ್ಕಂಥಾ ಒಂದು ವ್ಯವಸ್ಥೆಯಲ್ಲಿ ಆತನು ಮೊದಲು ಮಾರಾಟ ಮಾಡುವುದಕ್ಕೆ ತಾವು 11 ರೂಪಾಯಿಗಳ ಖರೀದಿ ನಿಖರ ಮಾಡಿದ್ದನ್ನು ಈಗ 22 ರೂಪಾಯಿಗಳಿಗೆ ಏರಿಸಿರುತ್ತೀರಿ. ಆದರೆ ಹೀಗೆ ಆತನು ಬೆಳೆದ ಪದಾರ್ಥಗಳಿಗೆ ಒಂದು ಖರೀದಿಯನ್ನು ನಿಖರ ಮಾಡುವಾಗ ತಾವು ಆತನಿಗೆ ಆ ವಸ್ತುಗಳನ್ನು ಬೆಳೆಯಲು ಖರ್ಚೇನಾಯಿತು ಎಂಬುದನ್ನು ಪರಿಗಣಿಸುತ್ತೀರಾ? ಆತನು ಕೊಳ್ಳತಕ್ಕ ಸಾಮಾನುಗಳ ಬೆಲೆಯು ದಿನದಿನಕ್ಕೂ ಹೇಗೆ ಏರುತ್ತಿದೆ, ಡಿಮ್ಯಾಂಡಿಗೆ ತಕ್ಕ ಹಾಗೆ ಸಪ್ಲೈ ಇದೆಯೇ ಎಂಬುದನ್ನೆಲ್ಲಾ ಪರಿಶೀಲಿಸಿ ಬೆಲೆಯನ್ನು ನಿಖರಮಾಡಬೇಕು. ತಾವು ಈ ದಿವಸ ಹೊರಗಡೆಯಿಂದ ರಾಗಿ ಮತ್ತು ಅಕ್ಕಿಯನ್ನು ತರಿಸುವುದಕ್ಕಾಗಿ ಪಲ್ಲ ಒಂದಕ್ಕೆ ರಾಗಿಗೆ 43 ರೂಪಾಯಿಗಳಂತೆಯೂ, ಅಕ್ಕಿಗೆ 70 ರೂಪಾಯಿಗಳಂತೆಯೂ ದರ ಮಾಡಿಕೊಂಡು ತರುತ್ತಿದ್ದೀರಿ. ಹಾಗೆ ಹೊರಗಿನವರಿಗೆ ಕೊಡುತ್ತಿರುವ ಧಾರಣೆಯಲ್ಲೇ ನಮ್ಮ ರೈತ ಬೆಳೆದಿದ್ದನ್ನೂ ಕೊಂಡುಕೊಳ್ಳಿ ಎಂದು ಹೇಳಿದರೆ ಅದು ಸಾಧ್ಯವಿಲ್ಲವೆಂದು ತಾವು ಹೇಳುವಾಗ, ಇನ್ನು ರೈತ ಹೆಚ್ಚು ಬೆಳೆ ಬೆಳೆಯಲು ಯಾವ ರೀತಿ ಮನಸ್ಸು ಮಾಡಿಯಾನು? ಹೀಗಾದರೆ ದೇಶದಲ್ಲಿ ಆಹಾರಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕೆಂದರೆ ಯಾರು ಬೆಳೆಯುತ್ತಾರೆ? ಹೀಗೆ ತಾವು ಅವರಿಗೆ ಒಂದು ನಿರುತ್ಸಾಹವಾದ ರೀತಿಯಲ್ಲಿ ನೋಡಿದ್ದರಿಂದ ಈ ಹಿಂದೆ ಇಲ್ಲಿಗೆ 4-5 ವರ್ಷಗಳಲ್ಲಿ ಏನು ಬೆಳೆಯಾಗುತ್ತಿತ್ತೋ ಈಗ ಅಷ್ಟೂ ಆಗುತ್ತಿಲ್ಲ. ಅನೇಕ ಜಮೀನುಗಳು ಪಾಳು ಬಿದ್ದಿರುತ್ತವೆ. ಅದರ ಪರಿಣಾಮವಾಗಿ ಇಲ್ಲಿಗೆ ನಾಲ್ಕು ವರ್ಷಗಳಹಿಂದೆ ನಮ್ಮ ದೇಶದಲ್ಲಿ ಬೆಳೆಯಲಾಗುತ್ತಿದ್ದ 18 ಲಕ್ಷ ಎಕರೆ ರಾಗಿ, ಇಂದು 12 ಲಕ್ಷ ಎಕರೆಗೆ ಇಳಿದಿದೆ. $8\frac{1}{2}$ ಲಕ್ಷ ಎಕರೆಯಲ್ಲಿ ಆಗುತ್ತಿದ್ದ ಭತ್ತ ಇಂದು 7 ಲಕ್ಷಕ್ಕೆ ಇಳಿದಿದೆ. 4 ಲಕ್ಷ ಎಕರೆಯಲ್ಲಿ ಬೆಳೆಯುತ್ತಿದ್ದ ಜೋಳ ಇಂದು 3 ಲಕ್ಷಕ್ಕೆ ಇಳಿದುಹೋಗಿದೆ. ನಮ್ಮ ಒಂದು ಜಿಲ್ಲೆಯಲ್ಲಿ ಸುಮಾರು 72 ಸಾವಿರ ಎಕರೆಗಳಷ್ಟು ಜಮೀನು ಖಾಲಿ ಬಿದ್ದಿದೆ. ಹೀಗೆಲ್ಲಾ ನಮ್ಮ ಆಹಾರದ ಉತ್ಪತ್ತಿ ದಿನದಿನಕ್ಕೂ ಅಭಿವೃದ್ಧಿ ಹೊಂದುವ ಬದಲು ಇಳಿಮುಖವಾಗಿ ಹೋಗುತ್ತಿದೆ. ಇದಕ್ಕೆಲ್ಲಾ ಕಾರಣ ಈಗಿರತಕ್ಕ ಕಂಟ್ರೋಲುಗಳೇ ಆಗಿದೆ. ಈ ಕಂಟ್ರೋಲುಗಳು ರೈತನನ್ನು ಅಷ್ಟು ಇಕ್ಕಟ್ಟಿಗೆ ತಂದಿರುತ್ತವೆ. ಆದ್ದರಿಂದ ಈ ಕಂಟ್ರೋಲುಗಳನ್ನೆಲ್ಲಾ ಸಂಪೂರ್ಣವಾಗಿ ತೆಗೆದುಹಾಕಬೇಕು. ಇದೇ ವಿಚಾರವನ್ನು ನಮ್ಮ ಇಂದಿನ ಪ್ರಧಾನ ಮಂತ್ರಿಗಳೂ ಹೇಳಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಗಳೂ ಕೂಡ ಸರ್ಕಾರಕ್ಕೆ ತಕ್ಕಮಟ್ಟಿಗೆ ಬುದ್ಧಿಯನ್ನು ಕಲಿಸಿವೆ. ಆ ಚುನಾವಣೆಗಳೇ ನಿಮ್ಮನ್ನು ಈ ದಿವಸ ಇಷ್ಟು ದಾರಿಗೆ ತಂದಿರತಕ್ಕವುಗಳು. ಇದೂ ಅಲ್ಲದೆ, ನಿಮ್ಮ ಕೈಯಲ್ಲಿ ಇನ್ನೂ ದುಡ್ಡಿನ ಸೌಲಭ್ಯಗಳಿದ್ದಿದ್ದರೆ ಇಷ್ಟು ಬೇಗ ಈ ಮಟ್ಟಕ್ಕೂ ತಾವು ಇಳಿದುಬರುತ್ತಿರಲಿಲ್ಲ. ಆದರೆ ಈ ದಿವಸ ನಿಮ್ಮ ಕೈಯಲ್ಲಿ ಆ ದುಡ್ಡಿನ ಬಲವೂ ಸಹ ಇಲ್ಲದಂತಾಗಿದೆ. ಆದ್ದರಿಂದ ತಾವು ಆದಷ್ಟು ಜಾಗ್ರತೆ ಈ ಕಂಟ್ರೋಲುಗಳನ್ನೆಲ್ಲಾ ಸಂಪೂರ್ಣವಾಗಿ ವಜಾ ಮಾಡಬೇಕೆಂದು ನಾನು ತಿಳಿಸುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಅಧ್ಯಕ್ಷರೇ, ಸ್ವಾಮಿ, ಈ ಆಹಾರಾಭಾವವನ್ನು ದೀರ್ಘಾವಧಿಯಲ್ಲಿ ನಾವು ಯಾವ ರೀತಿಯಲ್ಲಿ ನೀಗಬಹುದೆಂಬ ಬಗ್ಗೆ ಪೀಠಿಕಾರೂಪವಾಗಿ ಒಂದೆರಡು ಅಂಶಗಳನ್ನು ತಿಳಿಸಿ ಅನಂತರ ನಾನು ಪ್ರಸ್ತುತ ಆಹಾರ ಪಾಲಿಸಿ ವಿಷಯದಲ್ಲಿ ಕೆಲವು ಸಲಹೆಗಳನ್ನೀಯ ಬಯಸುತ್ತೇನೆ.

ಇಂದು ನಮ್ಮ ದೇಶದಲ್ಲಿ ಉಂಟಾಗಿರತಕ್ಕ ಆಹಾರಾಭಾವ ಪರಿಸ್ಥಿತಿಗೆ ಮುಖ್ಯವಾದ ಕಾರಣಗಳು ಎರಡು. ಮೊದಲನೆಯ ಕಾರಣ ಪ್ರಜಾಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಿರುವುದು. ಎರಡನೆಯದು, ಹೀಗೆ ಹೆಚ್ಚುತ್ತಿರುವ ಪ್ರಜಾಸಂಖ್ಯೆಗೆ ಅನುಗುಣವಾಗಿ ಆಹಾರೋತ್ಪತ್ತಿ ಆಗದೆ ಇರುವುದು. ಆಹಾರ ಉತ್ಪತ್ತಿ ಹೆಚ್ಚಾಗದಿರುವುದಕ್ಕೆ ನಾನಾ ಕಾರಣಗಳಿವೆ. ಅದರಲ್ಲಿ ಮುಖ್ಯ ಕಾರಣಗಳೆಂದರೆ (1) ರೈತನಿಗೆ ಇದುವರೆಗೆ ಜಾರಿಯಲ್ಲಿದ್ದ ಆಹಾರ ನಿಯಂತ್ರಣ ಪದ್ಧತಿಯಿಂದುಂಟಾದ ಕಿರುಕುಳ, (2) ಆತನ ಜೀವನದ ಬಗ್ಗೆ

(ಶ್ರೀ ಕೆ. ವಿ. ಶಂಕರಗೌಡರು)

ನಾಗರಿಕರು ಎಂದು ಹೇಳಿಕೊಳ್ಳುವ ಜನರಿಗೆ ಇರುವ ತಿರಸ್ಕಾರ ಮನೋಭಾವ, (3) ಶರೀರ ಶ್ರಮದ ವಿಚಾರವಾಗಿ ಮುಂದುವರಿದ ಜನರಲ್ಲಿ ರುವ ಒಂದು ತಾತ್ಸಾರ ಮನೋಭಾವ, ಮತ್ತು (4) ರೈತನಿಗೆ ಆತನ ಕಷ್ಟಕ್ಕೆ ತಕ್ಕ ಪ್ರತಿಫಲ ಎಂದರೆ ಆತನ ಉತ್ಪತ್ತಿಗೆ ಒಂದು ನಿಖರವಾದ ಬೆಲೆ ಸಿಕ್ಕದೆ ಇರುವುದು. ಈ ನಾಲ್ಕೂ ಬಹು ಮುಖ್ಯ ಕಾರಣಗಳಾಗಿವೆ.

4 P.M.

ಈ ನಾಲ್ಕು ವಿಷಯಗಳಲ್ಲಿ ಮೂಲಭೂತ ಬದಲಾವಣೆಯಾಗದಿದ್ದರೆ ಆಹಾರದ ಉತ್ಪತ್ತಿ ಹೆಚ್ಚುವುದಕ್ಕೆ ಸಾಧ್ಯವಿಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಆದ್ದರಿಂದ ರೈತನ ಜೀವನದ ಬಗ್ಗೆ ಗೌರವ ಮತ್ತು ಪುರಸ್ಕಾರ ಮನೋಭಾವ ಬೆಳೆಯಬೇಕು. ಅವನು ಬೆಳೆಯುವ ಬೆಳೆಗಳಿಗೆ ಹೆಚ್ಚು ಬೆಲೆ ದೊರಕಬೇಕು. ಈ ಸಭೆಗೆ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ನೂರಕ್ಕೆ ಸುಮಾರು 80 ಜನರು ವ್ಯವಸಾಯದ ಉದ್ಯೋಗವನ್ನವಲಂಬಿಸಿದ್ದಾರೆ. ಬಾಕಿ ಇರುವ 20 ಜನರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಅನೇಕ ಸಂಸ್ಥೆಗಳಿವೆ ಮತ್ತು ಸರ್ಕಾರದವರೂ ಅನೇಕ ಕಾನೂನುಗಳನ್ನು ಮಾಡಿದ್ದಾರೆ. ಆದರೆ ಈ 80 ಜನರಿಗೆ ಯಾವ ಸಂಸ್ಥೆಯೂ ಇಲ್ಲ, ಕಾನೂನುಗಳೂ ಇಲ್ಲ. ಆದ್ದರಿಂದ ಅವರ ಸ್ಥಿತಿ ಅಷ್ಟು ಸಮರ್ಪಕವಾಗಿಲ್ಲ. ಅವರು ವ್ಯವಸಾಯದಿಂದ ಏನು ಉತ್ಪತ್ತಿಮಾಡುತ್ತಾರೋ ಅದರಿಂದ ತಮ್ಮ ಜೀವಮಾನವನ್ನು ಕಳೆಯಬೇಕಾಗಿದೆ. ಅಲ್ಲದೆ ಅವರ ಮಕ್ಕಳು ಮರಿಗಳ ಪೋಷಣೆ, ಅವರ ವಿದ್ಯಾಭ್ಯಾಸ ಮುಂತಾದ್ದನ್ನೆಲ್ಲವನ್ನೂ ಅವರ ವ್ಯವಸಾಯದ ಉತ್ಪತ್ತಿಯಲ್ಲೇ ನೋಡಿಕೊಳ್ಳಬೇಕು. ಸಂಸ್ಥಾನದಲ್ಲಿ ಅವರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲದೆ ಉತ್ಪತ್ತಿ ಹೆಚ್ಚಿಸಬೇಕೆಂಬ ಆಕಾಂಕ್ಷೆ, ಶ್ರದ್ಧೆ ಅವರಲ್ಲಿ ಕಡಮೆಯಾಗುತ್ತಿದೆ. ಇಂದು ಹಳ್ಳಿಗಳಲ್ಲಿ ಸಾಕಷ್ಟು ಅನುಕೂಲತೆಗಳು ಇಲ್ಲದೆ ಇರುವುದರಿಂದ ಜನರು ಪಟ್ಟಣಕ್ಕೆ ವಲಸೆ ಬರುವುದಕ್ಕೆ ಮುಖ್ಯಕಾರಣವಾಗಿದೆ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ತೀವ್ರವಾಗಿ ಪರಿಶೀಲಿಸಬೇಕು. ರೈತನ ಜೀವನೋದ್ಧಾರ ವ್ಯವಸಾಯವೇ ಆಗಿರುವುದರಿಂದ ಸಾಕಾದಷ್ಟು ಉತ್ಪತ್ತಿ ಬರುವಂತೆ ಅವನಿಗೆ ಬೆಲೆ ಗ್ಯಾರಂಟಿಮಾಡಿ ಕೊಡಬೇಕು. ಅಲ್ಲದೆ ಆ ಬೆಲೆ ದೊರಕುವಹಾಗೆ ಮಾಡಲೇಬೇಕು.

ಎರಡನೆಯದಾಗಿ, ಆಹಾರದ ಅಭಾವಕ್ಕೆ ಸೂಕ್ಷ್ಮಕಾರಣ ಒಂದಿದೆ. ಅದನ್ನು ದೀರ್ಘವಾಗಿ ನಾವು ಯೋಚನೆ ಮಾಡಬೇಕಾಗಿದೆ. ಅದೇನೆಂದರೆ ಪರದಾಸ್ಯದ ಅಡಿಯಲ್ಲಿ ಸಿಕ್ಕಿ ನರಳಿದ ಜನತೆಗೆ ಇಂದು ದಾಸ್ಯಮನೋಭಾವ ಅಂಟಿಕೊಂಡಿದೆ. ಯಾವುದಾದರೂ ಕೊರತೆ, ಅಭಾವ ಬಂದಾಗ ಅದನ್ನು ನೀಗುವುದಕ್ಕೆ ತನ್ನ ಸ್ವಪ್ರಯತ್ನ ಏನಿದೆ, ತನ್ನ ಸ್ವಸಾಮರ್ಥ್ಯದಿಂದ ಎಷ್ಟರಮಟ್ಟಿಗೆ ಆ ಅಭಾವ ನೀಗಬಹುದು ಎಂಬುದನ್ನು ಯೋಚಿಸಲಾರದಷ್ಟು ಜಡತೆಯಿಂದ ಕೂಡಿದೆ ಜನತೆ. ದೇಶದಲ್ಲಿ ಆಹಾರದ ಅಭಾವವಿರುವುದನ್ನು ಯಾವ ರೀತಿಯಲ್ಲಿ ನಿವಾರಿಸಬಹುದು, ಅದಕ್ಕೆ ಯಾವ ರೀತಿಯಾಗಿ ನಾವು ತೆಗೆದುಕೊಳ್ಳುವ ಆಹಾರವನ್ನು ಬದಲಾಯಿಸಬೇಕಾದದ್ದು ಸೂಕ್ತ, ಆಹಾರವನ್ನು ಹೆಚ್ಚಾಗಿ ಉತ್ಪತ್ತಿಮಾಡಿ, ಕೊರತೆಯನ್ನು ಹೇಗೆ ನೀಗಬಹುದು ಎಂಬೀ ವಿಚಾರಗಳನ್ನು ಯೋಚನೆಮಾಡಿ ಸ್ವಪ್ರಯತ್ನ ನಡೆಸುವ ಮನೋಭಾವ ಜನರಲ್ಲಿ ಬೆಳೆದುಬಂದಿಲ್ಲ. ದೇಶದಲ್ಲಿ ಆಹಾರದ ಅಭಾವವಿದೆ, ನಿಜ. ಸರ್ಕಾರ ಸಾಧ್ಯವಾದಷ್ಟು ಪ್ರಯತ್ನಮಾಡಿ ಆಹಾರತಂದು ಕೊಡಬೇಕು. ಅದರ ಜೊತೆಗೆ ತಮ್ಮ ಸ್ವಸಾಮರ್ಥ್ಯ ಮತ್ತು ಸ್ವಪ್ರಯತ್ನವನ್ನು ತೋರುವ ಮನೋಭಾವ ಜನತೆಗೆ ಬರುವಂತೆ ಅವಕಾಶ ಮಾಡಲು ಸರ್ಕಾರ ಇಂದು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಜನತೆ ಇಂದು ಮಂತ್ರಿಗಳು ಮನೆಯಬಾಗಿಲಿಗೆ ಆಹಾರ ತಂದು ಹಾಕಬೇಕು ಎಂಬ ಧೋರಣೆ ತಾಳಿದೆ. ಈ ಧೋರಣೆ, ಈ ಮನೋಭಾವ ಜನತೆಯ ಮನಸ್ಸಿನಿಂದ ದೂರವಾಗಿ ಕಾರ್ಯಶೀಲತ್ವ ಬರುವಂತೆ ಮಾಡ

ಬೇಕಾದ ತೀವ್ರ ಅಗತ್ಯವಿದೆ. ನಾನು ಮಂತ್ರಿಗಳ ಮನೆಯ ಉದ್ಯಾನವನಗಳನ್ನು ನೋಡಿದ್ದೇನೆ. ಈ ವಿಚಾರಗಳಲ್ಲಿ ವೈಯಕ್ತಿಕವಾದ ಮತ್ತು ವಿನಯಪೂರ್ವಕವಾದ ಅಭಿಪ್ರಾಯವನ್ನು ಸೂಚಿಸುವುದಾದರೆ—ಸೌಂದರ್ಯೋಪಾಸನೆ ಬೇಕೇ ಬೇಕು, ಸೌಂದರ್ಯ ಪರಮಾತ್ಮನ ಸ್ವರೂಪ, ನಿಜ—ಆದರೆ ಉದರೋಪಾಸನೆ ಸುಗಮವಾಗಿ ಸಾಗಿದಲ್ಲದೆ ಸೌಂದರ್ಯೋಪಾಸನೆ ಸಾಮಾನ್ಯವಾಗಿ ಸಾಗಲಾರದು. ಆದ್ದರಿಂದ ನಾನು ಮಂತ್ರಿಗಳನ್ನು ಪ್ರಾರ್ಥಿಸುವುದು—ತಮ್ಮ ತೋಟದಲ್ಲಿ, ಸೌಂದರ್ಯಕ್ಕೆ ಚ್ಯುತಿಬಾರದ ರೀತಿಯಲ್ಲಿ, ಯಾವುದಾದರೂ ಒಂದು ಮೂಲೆಯಲ್ಲಿ ಸ್ವಲ್ಪ ಜಾಗವನ್ನಾದರೂ ನುಡಿಸಾಗಿಟ್ಟು ತರಕಾರಿಯನ್ನು ಮತ್ತು ಒಂದು ಎಮ್ಮೆ ಅಥವ ಹಸುವನ್ನು ಸಾಕಿ ಹಾಲು, ಬೆಣ್ಣೆ ಉತ್ಪತ್ತಿಮಾಡಿ ಉಪಯೋಗಿಸಿದರೆ ಬಾಕಿ ಜನರೂ ಅದನ್ನು ನೋಡಿ ಅನುಸರಿಸುವುದಕ್ಕೆ ಸಹಕಾರಿಯಾಗುತ್ತದೆಂದು ವಿನಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪನವರು.—ತಮ್ಮ ಸಲಹೆ ಬರುವುದಕ್ಕೆ ಮುಂಚೆಯೇ ತರಕಾರಿ ಬೆಳೆಯುತ್ತಿದೆ. ತಮಗೂ ಒಂದು ದಿವಸ ರುಚಿ ತೋರಿಸೋಣ.

ಶ್ರೀ ಕೆ. ವಿ. ಶಂಕರಗೌಡರು.—ಬಹಳ ಸಂತೋಷ, ಅದು ಹೆಮ್ಮೆ ಪಡುವ ವಿಚಾರ. ಆದರೆ ಜವಾನರಿಂದ ಬೆಳೆಸಬಾರದು, ತಮ್ಮ ಖುದ್ದು ದೇಹಶ್ರಮದಿಂದ ಬೆಳೆಸಬೇಕು. ಈ ಮನೋಭಾವ ಜನರಿಗೂ ಬರಬೇಕು. ಜನರಿಗೆ ಇರುವ ಮನೋಭಾವ, ಮನೆ ಬಾಗಿಲಿಗೆ ದವಸ ಧಾನ್ಯ ತಂದುಕೊಡಬೇಕೆಂಬ ಮನೋಭಾವ ಖಂಡಿತ ಹೋಗಬೇಕು, ಮತ್ತು ಸರ್ಕಾರವೂ ಕೂಡ ಅದಕ್ಕೆ ತಕ್ಕ ಕಾರ್ಯಕ್ರಮಹಾಕಿ ಅನುಕೂಲತೆ ಕಲ್ಪಿಸಿಕೊಡಬೇಕು. ತರಕಾರಿ ಬೆಳೆಯಲು ಜಾಗ ಎಲ್ಲಜನರಿಗೂ ಎಲ್ಲಿ ಸಿಕ್ಕುತ್ತದೆ ಎಂದು ಕೇಳಬಹುದು. ಎಲ್ಲಕಡೆ ಇಲ್ಲದೇ ಹೋದರೆ ಅನೇಕಕಡೆ ಜಾಗ ಇದೆ. ಉದಾಹರಣೆ ಕೊಡುವುದಾದರೆ, ಕೈಗಾರಿಕಾ ಕ್ಷೇತ್ರಗಳಾದ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಬಳಿ, ಮಂಡ್ಯದ ಸಕ್ಕರೆ ಕಾರ್ಖಾನೆಯ ಬಳಿ ಜಮೀನಿಗೆ ಅಭಾವವಿಲ್ಲ. ಅಂಥ ಕಡೆ ಸಾಮೂಹಿಕ ವ್ಯವಸಾಯ ಪದ್ಧತಿಯ ರೀತಿ ಕಾರ್ಮಿಕರೂ ಅಧಿಕಾರಿಗಳೂ ಸಹಕರಿಸಿ ತರಕಾರಿ, ಪುಷ್ಟಿಕರವಾದ ಹಣ್ಣು ಬೆಳೆಯುವುದಕ್ಕೆ ಅವಕಾಶವಿದೆ. ಹಾಗೆ ಪ್ರಾರಂಭಿಸಿದರೆ ಜನರೂ ಅದನ್ನು ನೋಡಿ ಅನುಸರಿಸಲು ಅವಕಾಶವಾಗುತ್ತದೆ. ಎಷ್ಟೋ ಆಹಾರದ ಅಭಾವವನ್ನು ನೀಗುವುದಕ್ಕೆ ಇದರಿಂದ ಅವಕಾಶವಾಗುತ್ತದೆ ಎಂದು ಈ ಸಭೆಯಲ್ಲಿ ಸೂಚಿಸಲಿಚ್ಛಿಸುತ್ತೇನೆ.

ಈಗ ಪ್ರಸ್ತುತ ಆಹಾರ ನೀತಿಯ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಪಕ್ಕದ ಮದ್ರಾಸಿನಲ್ಲಿ ಆಹಾರದ ಹತೋಟಿಯನ್ನು ಪೂರ್ಣವಾಗಿ ರದ್ದುಮಾಡಿರುವುದರಿಂದ ನಮ್ಮ ಸಂಸ್ಥಾನದಲ್ಲೂ ಪೂರ್ತಿಯಾಗಿ ಯಾಕೆ ರದ್ದುಮಾಡಬಾರದು ಎನ್ನುವ ಮನೋಭಾವನೆ ಅನೇಕರಲ್ಲಿರಬಹುದು. ಆ ವಿಚಾರದಲ್ಲಿ ಅನೇಕ ಮಾನ್ಯ ಸ್ನೇಹಿತರು ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಹತೋಟಿಯನ್ನು ಪೂರ್ಣವಾಗಿ ರದ್ದುಮಾಡಿದರೆ ಸಮಾಜದಲ್ಲಿ ಈ ಒಂದು ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ಜನರಿಗೆ ತೊಂದರೆಯನ್ನುಂಟುಮಾಡುವ ಸಮಾಜ ಘಾತುಕರಿದ್ದಾರೆ. ಪೂರ್ತಿಯಾಗಿ ಹತೋಟಿ ಸಡಿಲವಾದಾಗ ಈ ಸಮಾಜ ಘಾತುಕರು ತಮ್ಮ ಚತುರೋಪಾಯದಿಂದ ಧಾನ್ಯಗಳ ಕೃತಕ ಅಭಾವ ಉಂಟುಮಾಡುವುದಕ್ಕೆ ಅವಕಾಶವಿದೆ. ಈ ದೃಷ್ಟಿಯಿಂದಲೂ ಮತ್ತು ಮಳೆ ಬೆಳೆ ಸಕಾಲದಲ್ಲಿ ಆಗಿಲ್ಲವಾದುದರಿಂದಲೂ ತೀವ್ರ ಎಚ್ಚರಿಕೆಯಿಂದ ಕಾದು ನೋಡುವುದು ಒಳ್ಳೆಯದು ಮತ್ತು ಮುಂದೆ ಹೇಗಾಗುತ್ತದೆ ಎಂಬುದನ್ನು ಗಮನಿಸಿ ಸ್ವಲ್ಪ ನಿಧಾನವಾಗಿ ಹೆಜ್ಜೆಯಿಡುವುದು ಸೂಕ್ತವೆಂದು ಸರ್ಕಾರಕ್ಕೆ ಸೂಚಿಸುತ್ತೇನೆ.

ಇನ್ನು ಆಹಾರ ಪದಾರ್ಥಗಳನ್ನು ಮಾರುವುದಕ್ಕೆ ಲೈಸೆನ್ಸ್ ಕೊಡುವ ವಿಚಾರ. ಇದು ಬಹಳ ಮುಖ್ಯವಾದುದು. ಕಾಳಸಂತೆ ಪ್ರಾರಂಭವಾಗುವುದು ಇಲ್ಲಿಯೇ. ಇದಕ್ಕೆ ಅವಕಾಶ

(ಶ್ರೀ ಕೆ. ವಿ. ಶಂಕರಗೌಡರು)

ವಿಲ್ಲದಂತೆ ದೀರ್ಘವಾಗಿ ಯೋಚನೆಮಾಡಿ, ಹೇಗೆ ಲೈಸನ್ಸ್ ಕೊಡಬೇಕು, ಯಾರಿಗೆ ಕೊಡ ಬೇಕು, ಏನು ದರವಿರಬೇಕು, ಒಬ್ಬ ಲೈಸೆನ್ಸ್ ಪಡೆದ ವ್ಯಾಪಾರಿ ಎಷ್ಟು ಪರಿಮಾಣದಲ್ಲಿ ಧಾನ್ಯ ಶೇಖರಣೆಮಾಡಬಹುದು, ಆ ನಿಗದಿಯಾದ ಪರಿ ಮಾಣಕ್ಕಿಂತ ಹೆಚ್ಚಿಗೆ ಶೇಖರಿಸಬಹುದಾದ ತಪ್ಪಿತಸ್ಥರಿಗೆ ಏನು ಉಗ್ರಶಿಕ್ಷೆ ವಿಧಿಸಬಹುದು-ಇತ್ಯಾದಿ ಇತ್ಯಾದಿ ವಿಷಯಗಳನ್ನು ದೀರ್ಘವಾಗಿ ಆಲೋಚಿಸಿ ಲೈಸನ್ಸ್ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಈಗಿರುವ ಪದ್ಧತಿ ಯನ್ನು ಇನ್ನೂ ಸ್ವಲ್ಪಕಾಲ ಮುಂದುವರಿಸಿ ಕೊಂಡು ಒರುವುದು ಒಳ್ಳೆಯದೆಂದೂ ಮನವಿ ಮಾಡಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ.

*ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು (ಹೊಸಕೋಟೆ — ಆನೇಕಲ್).—ಅಧ್ಯಕ್ಷರೇ, ಹತೋಟಿ ಬಂದಾಗ ಉಂಟಾದ ಸಾಧಕಬಾಧಕ ಗಳ ವಿಚಾರದಲ್ಲಿ ಈಗ ಭಾಷಣ ಮಾಡಬೇಕಾ ಗಿಲ್ಲ. ಬಾಕಿ ವಿಚಾರದಲ್ಲಿ ಇಷ್ಟನ್ನು ಹೇಳ ಬಯಸುತ್ತೇನೆ. ಇಡೀ ದೇಶಾದ್ಯಂತ ಹತೋಟಿ ಬಂದಾಗಿನಿಂದ ಅದು ಎಂದಿಗೆ ಹೋದೀತು ಎಂದು ದೇಶದ ಪ್ರತಿಯೊಬ್ಬ ಪ್ರಜೆಯೂ ಪರ ಮಾತ್ಮನನ್ನು ಧ್ಯಾನ ಮಾಡುತ್ತಿದ್ದನು. ಆ ರೀತಿಯಾಗಿ ಪರಮಾತ್ಮನನ್ನು ಧ್ಯಾನಮಾಡಿದ ಫಲವಾಗಿ ಹೊಸದಾಗಿ ಮಂತ್ರಿಮಂಡಲ ಬಂದೊ ಡನೆ ಮುಖ್ಯಮಂತ್ರಿಗಳು ಮೊದಲನೆಯದಾಗಿ ಮಹಾಜನರ ನೆರವಿಗೆ ಬಂದು ಇಡೀ ದೇಶದ ಗ್ರಾಮಾಂತರಗಳಲ್ಲಿ ಹತೋಟಿಯನ್ನು ವಜಾ ಮಾಡಿದರು. ಇದರಿಂದ ನಮ್ಮ ಗ್ರಾಮಗಳಲ್ಲಿ ಯಾರನ್ನು ಕೇಳಿದರೂ ಕೂಡ ಹತೋಟಿ ಹೋಗಿದ್ದರಿಂದ ಉಂಟಾದ ಅಪಾರ ಸಂತೋಷ ಹೇಳತೀರದು. ಇದರಿಂದ ತೊಂದರೆಯಾಯಿ ತೆಂಬ ವಾಕ್ಯ ಯಾರ ಬಾಯಿಂದಲೂ ಬಂದಿಲ್ಲ. ಅದಕ್ಕಾಗಿ ಮುಖ್ಯಮಂತ್ರಿಗಳಿಗೂ ಮತ್ತು ಮಂತ್ರಿವರ್ಗಕ್ಕೂ ಅಭಿನಂದನೆಗಳನ್ನು ಸಲ್ಲಿಸು ತ್ತೇನೆ. ಹತೋಟಿಯಿಂದ ಜಮೀನ್ದಾರರಿಗೆ, ರೈತರಿಗೆ, ಮಧ್ಯಮ ವರ್ಗದವರಿಗೆ ಮತ್ತು ಇತರ ಮಂದಿಗೆ ಉಂಟಾದ ತೊಂದರೆಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. "ಅಮ್ಮ ಪೆಟ್ಟೀ ಅಟ್ಲ ಲೇದು, ಅಡುಕ್ಕೋನಿ ತಿನೇಟ್ಲ ಲೇದು" ಎಂದು ತೆಲುಗಿನಲ್ಲಿ ಹೇಳುವ ಗಾದೆಯಂತೆ ಬಹಳ ತೊಂದರೆಯಾಯಿತು.

ಈ ಕಂಟ್ರೋಲ್ ತರಲಿಕ್ಕೆ ಕಾರಣವೇ ನೆಂದರೆ ನಾವು ಬೆಳೆಯತಕ್ಕ ದವಸ ನಮ್ಮ ಉಪಯೋಗಕ್ಕೆ ಸಾಕಷ್ಟು ಇಲ್ಲದೆ ಇರುವುದ ರಿಂದ. ಅದನ್ನು ಉಳಿಸಿಕೊಂಡು ಬರುತ್ತೇ ವೆಂದು ಮಂತ್ರಿವರ್ಯರು ಕೊಡತಕ್ಕ ಅಂಕಿ ಅಂಶಗಳಿಂದ ಮಾತ್ರ ಸಮಾಧಾನ ದೊರೆಯು ತ್ತದೆಯೇ ಹೊರತು, ಜನಸಾಮಾನ್ಯರ ಅಭಿ ಪ್ರಾಯ ತೆಗೆದುಕೊಂಡಲ್ಲಿ ಕಂಟ್ರೋಲ್ ವಿಷಯ ದಲ್ಲಿ ನಿಜವಾಗಿಯೂ ಸಂಶಯ ಹುಟ್ಟಿದೆ. ಇದ ರಿಂದ ಉಪಯೋಗ ಪಡೆದೆವು ಎಂದು ಹೇಳತ ಕ್ಕವರು ಯಾರೂ ಇಲ್ಲ. ಆಹಾರ ಇಲಾಖೆ ಯವರು ಅಧಿಕಾರಿಗಳು ಮಟ್ಟಿಗೆ ಕಂಟ್ರೋಲ್ ಹೋಯಿತಲ್ಲಾ ಎಂದು ವ್ಯಥೆ ಪಡಬಹುದೇ ಹೊರತು, ಸಾಮಾನ್ಯ ನಾಗರಿಕರಾಗಲಿ, ಸಾರ್ವ ಜನಿಕರಾಗಲಿ ಯಾರೂಕೂಡ ವ್ಯಥೆಪಡಬೇಕಾ ಗಿಲ್ಲ; ಪಡಲೂ ಇಲ್ಲ. ಈ ಸಂದರ್ಭದಲ್ಲಿ ಈಗ ಕಂಟ್ರೋಲನ್ನು ಗ್ರಾಮಾಂತರ ಪ್ರದೇಶ ಗಳಲ್ಲಿ ವಜಾ ಮಾಡಿದ್ದಾರೆ. ಬೆಂಗಳೂರು, ಮೈಸೂರು, ಕೆ.ಜಿ.ಎಫ್., ದಾವಣಗೆರೆ, ಭದ್ರಾ ವತಿ ಈ ಪ್ರದೇಶಗಳಲ್ಲಿ ಮಾತ್ರ ಉಳಿಸಲಾಗಿದೆ. ಅದಕ್ಕೆ ಕಾರಣವೇನೆಂದರೆ, ಇದನ್ನು ತೆಗೆದು ಬಿಡುವುದಾದರೆ ಇರತಕ್ಕ ದವಸ ನಮಗೆ ಸಾಕಾದಷ್ಟು ಲಭಿಸುವುದಿಲ್ಲ. ವ್ಯಾಪಾರಕ್ಕೆ ಅಡಚಣೆಯಿಲ್ಲದೆ ಇರುವ ದವಸವನ್ನು ಹಣ ಗಾರರು ಹೆಚ್ಚಾಗಿ ಶೇಖರಿಸಿದರೆ ಗತಿಯೇನು ಎಂದು ಸರ್ಕಾರದವರು ಕಳವಳವನ್ನು ವ್ಯಕ್ತಪಡಿ ಸುತ್ತಾರೆ. ಇದು ಸಹಜವಾದದ್ದು. ಈ ಬಗ್ಗೆ ನನ್ನ ಸಲಹೆ ಇಷ್ಟೆ. ಸರ್ಕಾರದವರು ಈ ರೀತಿ ಸಂಶಯ ಪಡಲು ಕಾರಣವಿಲ್ಲ. ಲಕ್ಷಾಂತರ ರೂಪಾಯಿ ಹಣ ಇರತಕ್ಕ ಹಣಗಾರರು ಮಾತ್ರ ದವಸವನ್ನು ಶೇಖರಿಸಬಲ್ಲರು. ಅದರಲ್ಲಿ ಲಕ್ಷಾಂತರ ರೂಪಾಯಿ ಆಸ್ತಿ ಇರತಕ್ಕವರು

ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿ ಮಾಡತಕ್ಕ ಮನೋಭಾವ ಎಷ್ಟು ಜನಕ್ಕೆ ಇದೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳುವುದಕ್ಕೆ ಕಷ್ಟವಾಗುವುದಿಲ್ಲ. ಏಕೆಂದರೆ, ಗೂಢಚಾರ ಇಲಾಖೆ ಸರ್ಕಾರದಲ್ಲಿದೆ. ಅದರ ಮೂಲಕ ಯಾರು ಹೆಚ್ಚು ದವಸವನ್ನು ತಂದು ಶೇಖರಣೆ ಮಾಡುತ್ತಾರೋ ಅಂಥವರ ಮೇಲೆ ಕಣ್ಣು ಇಡಬಹುದು. ಗಡಿಯಿಂದಾಚೆಗೆ ದವಸ ಸಾಗಿಹೋಗದಂತೆ ಏರ್ಪಾಡು ಮಾಡುವುದು ಅತಿ ಮುಖ್ಯ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಆಹಾರ ಸಾಲದೇ ಇರುವುದು ನಿಜವಾಗಿಯೂ ಸತ್ಯವಾದದ್ದು. ಇದು ಎಲ್ಲರಿಗೂ ತಿಳಿದೇ ಇದೆ. ಆಹಾರವನ್ನು ಬೆಳೆಯತಕ್ಕ ಯೋಜನೆಯನ್ನು ಮುಂದುವರಿಸಬೇಕು. ಈಗ ಹಿಂದಿನಿಂದ ನಡೆದುಬಂದಿರುವ ಆಹಾರ ಬೆಳೆಯುವ ಯೋಜನೆ ಪ್ರಕಾರ ರೈತರಿಗೆ ಜಮೀನು ಕೊಡುವುದು, ಗೊಬ್ಬರ ಒದಗಿಸುವುದು, ಬೀಜ ಕೊಡುವುದು, ನೀರಾವರಿ ಸೌಕರ್ಯ ಅಲ್ಲದೆ ಟ್ರಾಕ್ಟರ್ಸ್ ಮತ್ತು ಬುಲ್‌ಡೋಜರುಗಳನ್ನು ತರಿಸಿಕೊಡುವುದು, ಇತ್ಯಾದಿಗಳನ್ನು ರೈತರಿಗೆ ಒದಗಿಸಲಾಗಿದೆಯೇ ಹೊರತು ಅದರಿಂದ ಜನಗಳಿಗೆ ಯಾವ ಮಟ್ಟದಲ್ಲಿ ಉಪಯೋಗ ಲಭಿಸುತ್ತದೆ ಎಂಬ ಭಾವನೆ ಮೂಡಿತ್ತೋ ಆ ಮಟ್ಟದಲ್ಲಿ ಲಭಿಸಿಲ್ಲ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಅದಕ್ಕಾಗಿ ಮುಖ್ಯವಾದ ಕಾರಣಗಳಿರಬೇಕು. ಏನು ಕಾರಣ ಎಂಬುದನ್ನು ಸರ್ಕಾರದವರು ಕಂಡುಹಿಡಿದು ರೋಗ ಎಲ್ಲಿ ತಗಲಿದೆಯೋ ಅದಕ್ಕೆ ತಕ್ಕ ಔಷಧಿ ಕೊಡಬೇಕು. ರೋಗ ಎಲ್ಲಿದೆ ಎಂಬುದನ್ನು ಕಂಡುಹಿಡಿದು ನಾಡಿ ನೋಡಿ ಔಷಧಿ ಕೊಡುವುದಾದರೆ ಜಾಗ್ರುತೆ ಗುಣವಾಗುತ್ತದೆ, ದೇಶದಲ್ಲಿ ಹೆಚ್ಚು ಬೆಳೆ ಬೆಳೆಯಲು ಅವಕಾಶವಾಗುತ್ತದೆ. ಸಮಗ್ರ ವ್ಯವಸಾಯ ನಡೆಸಿರತಕ್ಕದ್ದರಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಆಧಾರದಮೇಲೆ ಹೇಳುವುದಾದರೆ, ಒಂದು ಎಕರೆ ಜಮೀನಿನಲ್ಲಿ 70 ಸೇರು ದವಸ ಬೆಳೆಯುವುದಕ್ಕೆ 340 ರೂಪಾಯಿ ಖರ್ಚಾಗಿದೆ. ಹೀಗೆ ಖರ್ಚು ಮಾಡಿದರೆ ದವಸದ ಬೆಲೆ ಏನಾಯಿತು? ಈ ರೀತಿ ಸರ್ಕಾರದವರು ಉದಾಹರಣೆಗೆ ಮಾಡಿರತಕ್ಕ ಸಮಗ್ರ ವ್ಯವಸಾಯವನ್ನು (Co-operative farming) ನಡೆಸುವುದಾದರೆ ನಿಜವಾಗಿಯೂ ಅದರಲ್ಲಿ ಜನರಿಗೆ ನಂಬಿಕೆ ಬಂದೀತೇ? ಈ ರೀತಿ ಹಣ ಖರ್ಚುಮಾಡುವುದಕ್ಕೆ ಸಾಧ್ಯವೆ? ಇದನ್ನು ಮುಂದುವರಿಸಿಕೊಂಡು ಹೋಗುವುದಾದರೆ ಎಂದಿಗೆ ನಮ್ಮ ದೇಶ ಆಹಾರ ಪರಿಪೂರ್ಣತೆಯನ್ನು ಪಡೆದೀತು ಎಂಬುದನ್ನು ಆಲೋಚಿಸಬೇಕು. ಈಗ ಇರತಕ್ಕ ಕಂಟ್ರೋಲ್‌ನಿಂದ ಆಗತಕ್ಕ ಅನುಕೂಲ, ಅನಾನುಕೂಲಗಳನ್ನು ಹೇಳುವುದರಿಂದ ಪ್ರಯೋಜನವಾಗಲಾರದು. ಒಟ್ಟಿನಲ್ಲಿ ಮೈಸೂರು, ದಾವಣಗೆರೆ ಮತ್ತು ಭದ್ರಾವತಿಯಲ್ಲಿ ಕಂಟ್ರೋಲ್ ರದ್ದುಮಾಡಿ, ಬೆಂಗಳೂರು ಮತ್ತು ಕೋಲಾರದ ಚಿನ್ನದಗಣಿಯ ಪ್ರದೇಶದಲ್ಲಿ.......

ಶ್ರೀ ಬಿ. ಹುಚ್ಚೇಗೌಡರು.—ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನವರು ಕಂಟ್ರೋಲ್ ತೆಗೆದುಬಿಡಿ ಎಂದು ಓಟು ಮಾಡಿದ್ದಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು.—ಈಗಿನ ಪರಿಸ್ಥಿತಿಯಲ್ಲಿ 20 ಸೇರುಗಳವರೆಗೆ ದವಸವನ್ನು ಊರಿನೊಳಕ್ಕೆ ತೆಗೆದುಕೊಂಡು ಬರಲು ಅನುಮತಿ ಕೊಟ್ಟು ರದ್ದುಮಾಡುವುದು ಒಳ್ಳೆಯದು ಎಂದು ಹೇಳಿ ಸಾರ್ವಜನಿಕರ ಅಭಿಪ್ರಾಯವನ್ನು ಸಭೆಯಮುಂದೆ ಇಟ್ಟಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಸ್ವಾಮಿ, ಇದುವರೆಗೂ ಮಾನ್ಯ ಸದಸ್ಯರು ಅನೇಕ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಸರ್ಕಾರದ ನೀತಿಗೆ ಪುರಸ್ಕಾರ ಕೊಟ್ಟಿದ್ದಾರೆ. ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ನಮ್ಮ ಸಭಾನಾಯಕರು ಪಕ್ಷದ ನೀತಿ ವಿಚಾರದಲ್ಲಿ ಸರ್ಕಾರದವರು ಮುಂದೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ವಿಷಯದಲ್ಲೂ ಮತ್ತು ಸಾಮಾನ್ಯವಾಗಿ ಈಗ ನಡೆದಿರತಕ್ಕ ಚರ್ಚೆಗೂ ಉತ್ತರ ಕೊಡುವವರಾಗಿದ್ದಾರೆ. ಈಗ ನಾನು ಎದ್ದಿರುವುದು ಏಕೆಂದರೆ, ಶ್ರೀಮಾನ್ ಶಂಕರಲಿಂಗೇಗೌಡರು

(ಶ್ರೀ ಎಚ್. ಸಿದ್ದವೀರಪ್ಪನವರು)

ಅವರದೇ ಆದ ಒಂದು ವೈಶಿಷ್ಟ್ಯ ರೀತಿಯಲ್ಲಿ ಅಂಕಿ ಅಂಶಗಳನ್ನು ಕೊಟ್ಟರು ಎಂಬುದನ್ನು ನಾನು ತಿಳಿಸದೇ ಇದ್ದರೆ ಇದೇರೀತಿ ರೆಕಾರ್ಡ್‌ನಲ್ಲಿ ಹೋಗಿ ತಪ್ಪು ತಿಳುವಳಿಕೆ ಬರಬಹುದು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ.

ಶ್ರೀಮರ್ಾ ಲಿಂಗಣ್ಣನವರು ಹಿಂದೆ ಕೇಳಿದ 119ನೇ ಪ್ರಶ್ನೆಗೆ ಜವಾಬು ಆಗಲೇ ಕೊಟ್ಟೆ. ಇವೊತ್ತು ಸಹ ಅದೇ ಪ್ರಶ್ನೆ ಕೇಳಿದ್ದಾರೆ; ಅದಕ್ಕೆ ಸರಿಯಾದ ಜವಾಬು ಕೊಡುವುದು ನನ್ನ ಕರ್ತವ್ಯ. ದೇಶದಲ್ಲಿ ಎಷ್ಟು ಭತ್ತ ಪ್ರೊಕ್ಯೂರ್ ಮಾಡಿದರು, ಆಗಿನ ರೇಟ್‌ನಂತೆ ಎಷ್ಟು ದುಡ್ಡು ಬರುತ್ತಾ ಇತ್ತು, ಕೊಂಡದ್ದು ಎಷ್ಟು ಎಂಬುದಕ್ಕೆ ಜವಾಬು ಕೊಟ್ಟಿದೆಯೇ ಹೊರತು 1 ಕೋಟಿ 70 ಲಕ್ಷ ರೂಪಾಯಿ ಲಾಭ ಮಾಡಿಕೊಂಡಿದ್ದೇವೆ ಎಂಬ ಅರ್ಥವಾಗುವುದಿಲ್ಲ. ಅದನ್ನು ಅವೊತ್ತೇ ವಿಶದೀಕರಿಸಿದ್ದೆ, ಅದು ಸಾಕು ಎಂದು ತಿಳಿದುಕೊಂಡಿದ್ದೆ. ಈ ದಿವಸ ಪುನಃ ಕೇಳಿರುವುದರಿಂದ ಹೇಳುತ್ತೇನೆ. 10-4-1952ರಲ್ಲಿ ನಮ್ಮ ಹತ್ತಿರ ಆಗಲೇ ಪ್ರೊಕ್ಯೂರ್ ಮಾಡಿದ ಭತ್ತದಲ್ಲಿ ಕೆಲವುಭಾಗ ಖರ್ಚಾಗಿತ್ತು. 9,35,650 ಪಲ್ಲಾ ಭತ್ತ, 1 ಲಕ್ಷ 30 ಸಾವಿರ ಪಲ್ಲ ಅಕ್ಕಿ ಇವುಗಳನ್ನು 16-4-52ರಲ್ಲಿ ಒಂದು ಧಾರಣೆಯಂತೆ ಮಾರಾಟ ಮಾಡುವುದರಿಂದ ಅವರು ಹೇಳುವಹಾಗೆ ಲಾಭ ಬರುವುದಿಲ್ಲ ಎಂಬುದನ್ನು ಹೇಳುತ್ತೇನೆ. ಈಗ ಸಭಾನಾಯಕರು ಬಾಕಿ ವಿಷಯಗಳನ್ನು ಹೇಳುತ್ತಾರೆ.

ಶ್ರೀ ಕೆ. ಹನುಮಂತಯ್ಯನವರು.—ಸಭಾಧ್ಯಕ್ಷರೇ, ಈ ಚರ್ಚೆಯಿಂದ ಸರ್ಕಾರದವರಿಗೆ ಬಹಳ ಸಹಾಯವಾಗಿದೆ. ಅನೇಕ ಉಪಯುಕ್ತವಾದ ಸಲಹೆಗಳು ಬಂದಿವೆ. ಅಭಿಪ್ರಾಯ ವಿನಿಮಯವಾಗಿದೆ. ಈ ದಿವಸ ಸರ್ಕಾರದವರು ತಮ್ಮ ನೀತಿಯನ್ನು ನಿರ್ಧರಿಸುವುದಕ್ಕೆ ಇದರಿಂದ ಬಹಳ ಸಹಾಯವಾಗಿದೆ. ಎದುರು ಪಕ್ಷದ ನಾಯಕರಾದ ಶ್ರೀಮರ್ಾ ಇಮಾಂರವರು ಮೊದಲು ಮಾತನಾಡಿ ಆಹಾರ ಪ್ರಶ್ನೆಯನ್ನು ಒಂದು ಪಕ್ಷದ ಪ್ರಶ್ನೆಯನ್ನಾಗಿ ಪರಿಗಣಿಸದೇ ದೇಶದ ದೃಷ್ಟಿಯಿಂದ ಪರಿಗಣಿಸಬೇಕು ಎಂಬ ಸಂದೇಶವನ್ನು ಕೊಟ್ಟರು. ಅದನ್ನು ನಾನು ಸ್ವಾಗತಿಸುತ್ತೇನೆ. ಈ ಸಭೆಯಲ್ಲಿ ಇಂಥಾ ಮುಖ್ಯಪ್ರಶ್ನೆಗಳ ವಿಚಾರದಲ್ಲಿ ಒಂದು ಸಂಕುಚಿತ ಭಾವನೆಯಿಲ್ಲದೆ, ಪಕ್ಷಾತೀತ ಭಾವನೆಯಿರುವುದು ಒಳ್ಳೆಯ ಸಂಪ್ರದಾಯ. ಈ ಮಂತ್ರಿಮಂಡಲ ಅಧಿಕಾರ ವಹಿಸಿದ ತರುಣದಲ್ಲೇ ಪ್ರತಿಪಾದಿಸಿದ ಆಹಾರನೀತಿಯನ್ನು ಅವರು ಸ್ವಾಗತಿಸಿದರು. ಮತ್ತು ಆ ನೀತಿಯಿಂದ ದೇಶದಲ್ಲಿ ಸಮಾಧಾನವುಂಟಾಗಿದೆ ಎಂದು ಹೇಳಿದರು. ಹಾಗೆಯೇ ಅವರ ಪಕ್ಷದ ಅಧ್ಯಕ್ಷರಾದ ಶ್ರೀ ಹುಚ್ಚೇಗೌಡರೂ ಹೇಳಿದರು. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಆದರೆ ಭಾಷಣವನ್ನು ಮುಗಿಸುವಾಗ ಈ ಪಕ್ಷದ ನೀತಿಯಿಂದ ಯಾವ ಪ್ರಯೋಜನವೂ ಆಗಲಿಲ್ಲ, ಈ ಸರ್ಕಾರ 'it has failed to the country' ಎಂದು ಹೇಳಿದರು. ಶಾಸ್ತ್ರೋಕ್ತವಾಗಿ ಎದುರುಪಕ್ಷದವರು ಹೇಳಬೇಕಾದ ಹಾಡು ಅದು. ಅದನ್ನು ಹೇಳಿದ್ದಾರೆ ಎಂದು ನಾನು ತಿಳಿದುಕೊಂಡೆ. ಅನಂತರ ಇಮಾಂರವರು ಇಂಗ್ಲೆಂಡಿಗೆ ಅವರು ಹೋಗಿದ್ದಾಗ ನೋಡಿದ್ದನ್ನೆಲ್ಲಾ ಇಂಥ ಭಾಷಣಗಳಲ್ಲಿ ಪದೇ ಪದೇ ಹೇಳುತ್ತಾ ಇರುತ್ತಾರೆ. ಯಾವ ವಿಷಯ ಪ್ರಸ್ತಾಪ ಮಾಡಿದರೂ ಕೂಡ ತಾವು ಇಂಗ್ಲೆಂಡಿನಲ್ಲಿದ್ದಾಗ ನೋಡಿದ್ದನ್ನು ಪ್ರಸ್ತಾಪಿಸಿ ಅಲ್ಲಿ ಎಲ್ಲಾ ಸರ್ವಸಮರ್ಪಕವಾಗಿದೆ ಎಂದು ಅವರು ಹೇಳಿದ್ದಾರೆ. Sir, I suspect, that the Leader of the Opposition must have left his heart behind in London.

Janab J. MOHAMED IMAM.—My heart is with me.

ಶ್ರೀ ಕೆ. ಹನುಮಂತಯ್ಯನವರು.—ಅವರೂ ಮತ್ತು ಇತರ ಕೆಲವು ಮಾನ್ಯ ಸದಸ್ಯರೂ ಹತೋಟಿ ಆಜ್ಞೆಗಳು ಪೂರ್ತಿ ಹೊರಟುಹೋಗಬೇಕೆಂಬ ವಾದವನ್ನು ಸಭೆಯ ಮುಂದಿಟ್ಟರು. ಕಾಂಗ್ರೆಸ್ ಪಕ್ಷದ ನೀತಿಯಾದರೂ ಕೂಡ ಅದೇ ಆಗಿದೆ.

ಜನಾಬ್ ಜೆ. ಮಹಮುದ್ ಇಮಾಂರವರು.--ಜಾರಿಗೆ ಮಾತ್ರ ತರುವುದಿಲ್ಲ.

ಶ್ರೀ ಕೆ. ಹನುಮಂತಯ್ಯನವರು — ಈ ದಿವಸ ಕಾಂಗ್ರೆಸ್ ಪಕ್ಷದವರಿಗೆ, ಉತ್ತರೋತ್ತರ ಈ ಹತೋಟಿ ಪದ್ಧತಿ ಸಂಪೂರ್ಣವಾಗಿ ಹೋಗಿ ದೇಶದಲ್ಲಿ ಸಂಪೂರ್ಣ ಸಮಾಧಾನ ಸ್ಥಾಪನೆಯಾಗಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ. ಆದರೆ ಎಂದಿನವರೆಗೆ ದೇಶದಲ್ಲಿ ಸುಭಿಕ್ಷ ಪರಿಸ್ಥಿತಿಯುಂಟಾಗುವುದಿಲ್ಲವೋ ಅಂದಿನವರೆಗೆ ಹತೋಟಿ ಪದ್ಧತಿ ಒಂದಲ್ಲೊಂದು ರೀತಿಯಲ್ಲಿ ಇರತಕ್ಕದ್ದು ಆವಶ್ಯಕವೆಂಬುದನ್ನು ಎಲ್ಲರೂ ಮನಗಂಡಿದ್ದಾರೆಂದು ನಮ್ಮ ಭಾವನೆ. ಅಭಾವವಿದ್ದಾಗ ಹಂಚಿಕೊಂಡು ತಿನ್ನಬೇಕಾದ್ದು ಎಲ್ಲರ ಕರ್ತವ್ಯ. ಒಂದು ಮನೆಯಲ್ಲಿ ಹೇಗೋ, ಒಂದು ದೇಶದಲ್ಲಿಯೂ ಹಾಗೆಯೇ ಅಭಾವ ಪರಿಸ್ಥಿತಿಯಲ್ಲಿ ಇದ್ದದ್ದನ್ನು ಹಂಚಿಕೊಂಡು ತಿನ್ನಬೇಕಾದದ್ದು ಅನಿವಾರ್ಯ. ಯಾವುದು ಅನಿವಾರ್ಯವೋ ಅದರ ವಿಷಯದಲ್ಲಿ ಟೀಕೆಯ ರೂಪವಾಗಿ ಒಂದು ಬಾಣವನ್ನು ಯಾವ ಸರ್ಕಾರದ ಮೇಲಾಗಲಿ, ಯಾವ ಪ್ರತಿಪಕ್ಷದ ಮೇಲಾಗಲಿ ಹೂಡುವುದು ವ್ಯರ್ಥವೇ ಸರಿ. ಇಂಡಿಯಾ ದೇಶದಲ್ಲಿ ಸುಭಿಕ್ಷ ಪರಿಸ್ಥಿತಿ ಈಗಿಲ್ಲ, ಸಾಕಷ್ಟು ದವಸ ಧಾನ್ಯಗಳಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಮೈಸೂರು ದೇಶದಲ್ಲಿಯೂ ಜನರೆಲ್ಲರೂ ತಿಂದು ತೇಗುವಷ್ಟು ಪ್ರಮಾಣದಲ್ಲಿ ದವಸ ಒದಗುತ್ತಿಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ಹೀಗೆ ಅಭಾವ ಪರಿಸ್ಥಿತಿ ಎಂದಿನಂತೆ ಅಥವಾ ಇನ್ನೂ ಕೊಂಚ ಹೆಚ್ಚಿನ ಪ್ರಮಾಣದಲ್ಲಿರುವಾಗ ಸಂಪೂರ್ಣವಾಗಿ ಹತೋಟಿಯನ್ನು ತೆಗೆದುಹಾಕಬೇಕೆಂದು ಹೇಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಶ್ರೀಮಾನ್ ಗೋಪಾಲಗೌಡರು ಹೇಳಿದಹಾಗೆ, ಹತೋಟಿ ಆಜ್ಞೆಗಳನ್ನು ಹಾಗೆ ಪೂರ್ತಿಯಾಗಿ ತೆಗೆದುಹಾಕಿದರೆ, ದೇಶದಲ್ಲಿ ಅನಾಯಕತ್ವಕ್ಕೆ ಎಡೆ ಕೊಟ್ಟಹಾಗಾಗುತ್ತದೆ. ಆದ್ದರಿಂದ ಕಂಟ್ರೋಲನ್ನು ತೆಗೆಯಬೇಕೇ ಅಥವಾ ಇಟ್ಟುಕೊಳ್ಳಬೇಕೇ ಎಂಬುದನ್ನು ದೇಶದ ಹಿತದೃಷ್ಟಿಯಿಂದ ನಾವು ನೋಡಬೇಕು. ಹಾಗೆ ನೋಡದೆ, ವಾಸ್ತವಿಕ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ, ಹತೋಟಿಯನ್ನು ಸಂಪೂರ್ಣವಾಗಿ ತೆಗೆಯಬೇಕೆಂದು ಹೇಳಿದರೆ, ಆ ಸಾಮರ್ಥ್ಯವನ್ನು ದೇವರು ಸರ್ಕಾರಕ್ಕೂ ನಮಗೂ ಕೊಡಲೆಂದು ಮಾತ್ರ ಪ್ರಾರ್ಥಿಸುತ್ತೇನೆ.

ನಮ್ಮ ಮಂತ್ರಿಮಂಡಳದವರ ಉದ್ದೇಶವಾದರೂ ಸಾಧ್ಯವಾದಷ್ಟು ಜಾಗ್ರತೆ ಕಂಟ್ರೋಲುಗಳನ್ನು ತೆಗೆಯಬೇಕೆಂಬುದೇ ಆಗಿದೆ. ಎರಡು ತಿಂಗಳ ಹಿಂದೆ "Free movement of food grains" ಎಂದು ಯಾವ ಒಂದು ನೀತಿಯನ್ನು ಪ್ರತಿಪಾದಿಸಿ ಅನುಷ್ಠಾನಕ್ಕೆ ತಂದೆವೋ, ಆಗ ನಾನಾದರೂ ತಿಳಿದುಕೊಂಡಿದ್ದೆ, ಇನ್ನು ಒಂದೆರಡು ತಿಂಗಳುಗಳಲ್ಲಿ ಕಂಟ್ರೋಲುಗಳನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಸಾಧ್ಯ, ಎಂದು. ಕಾಂಗ್ರೆಸ್ ಪಕ್ಷದವರ ಉದ್ದೇಶವೂ ಅದೇ ಆಗಿತ್ತು. ಆದರೆ ದೇವರ ಕೃಪೆ ಮೈಸೂರು ದೇಶದವರಮೇಲೆ ಸಾಕಾದಷ್ಟು ಆಗಲಿಲ್ಲ! ಎಲ್ಲೆಲ್ಲೂ ಕೂಡ ಮಳೆ ಸಕಾಲದಲ್ಲಿ ಬರಲಿಲ್ಲವೆಂದು ಹಾಹಾಕಾರವೆದ್ದಿದೆ! ನಾನು ಪ್ರತಿ ಡಿಸ್ಟ್ರಿಕ್ಟಿನಿಂದಲೂ ಪರಿಸ್ಥಿತಿ ಯಾವ ರೀತಿಯಿದೆಯೆಂದು ದಿನದಿನವೂ ವರದಿ ತರಿಸಿಕೊಳ್ಳುತ್ತಿದ್ದೇನೆ. ಮೈಸೂರು ದೇಶದಲ್ಲಿ ಹಿಂದಿನ 10-15 ದಿವಸಗಳಲ್ಲಿ ರಾಗಿ, ಜೋಳ ಇವುಗಳು ಯಾವ ಬೆಲೆಗೆ ಮಾರಾಟವಾಗುತ್ತಿದ್ದುವೋ ಅದು ಈಗ ದ್ವಿಗುಣವಾಗಿದೆ. ರೂಪಾಯಿಗೆ 5 ಸೇರು 6 ಸೇರುಗಳಂತೆ ಮಾರಾಟವಾಗುತ್ತಿದ್ದ ರಾಗಿ, ಜೋಳ ಈಗ ರೂಪಾಯಿಗೆ 2 ಸೇರಿಗೆ ಏರಿವೆ. ಮಳೆ ಹಿಂತೆಗೆದು ಜನಗಳ ಮನಸ್ಸಿನಲ್ಲಿ ಒಂದು ರೀತಿಯ ಕಳವಳವುಂಟಾಗಿರುವ ದೆಶೆಯಿಂದ ಸರ್ಕಾರದವರು ಯಾವ ಒಂದು ಉದ್ದೇಶವನ್ನು ಸಾಧಿಸಿ ಕೊನೆಗಾಣಿಸಬೇಕೆಂದಿದ್ದರೋ ಅದು ಸಾಧ್ಯವಾಗಲಿಲ್ಲ. 'ನಾವು ಒಂದು ನೆನೆದರೆ ದೇವರು ಒಂದು ನೆನೆದ' ಎಂಬ ಗಾದೆಗೆ ಸರಿಯಾಗಿದೆ ಪರಿಸ್ಥಿತಿ! ಆದ್ದರಿಂದ ಈ ದಿವಸ ತಾವುಗಳೆಲ್ಲರೂ ಯಾವ ಅಂತ್ಯತೀರ್ಮಾನವನ್ನು ಸರ್ಕಾರದವರು ಅನುಷ್ಠಾನಕ್ಕೆ ತರಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರೋ ಅದನ್ನು ಈ ದಿವಸವೇ, ಈ ತಿಂಗಳೇ

(ಶ್ರೀ ಕೆ. ಹನುಮಂತಯ್ಯನವರು.)

ಅನುಷ್ಠಾನಕ್ಕೆ ತರುವುದು ಅಸಾಧ್ಯವಾಗಿದೆ. ಆದರೂಕೂಡ, ಎದೆಗುಂದದೆ ಪ್ರಗತಿಮಾರ್ಗದಲ್ಲಿ ಮುಂದುವರಿದು ಆಹಾರದ ಹತೋಟಿ ಆಜ್ಞೆಗಳನ್ನು ಸಂಪೂರ್ಣವಾಗಿ ತೆಗೆದುಹಾಕತಕ್ಕಂಥ ಗುರಿಯನ್ನು ಮುಟ್ಟಬೇಕೆಂಬ ತೀವ್ರಾಕಾಂಕ್ಷೆ ಮಂತ್ರಿಮಂಡಲದ ಮನಸ್ಸಿನಲ್ಲಿದೆ. ಈ ದಿವಸ ಆ ದೃಷ್ಟಿಯಿಂದ ಪರಿಸ್ಥಿತಿ ಇಷ್ಟು ಕಷ್ಟಕರವಾಗಿದ್ದರೂ ಕೂಡ ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳದೆ ನಾಲ್ಕಾರು ಹೆಜ್ಜೆಯಿಡಬೇಕೆಂಬುದು ಆಗದಿದ್ದರೂ ಒಂದೆರಡು ಹೆಜ್ಜೆಯನ್ನಾದರೂ ಮುಂದಕ್ಕೆ ಇಡಲೇಬೇಕೆಂಬ ನಿರ್ಧಾರವನ್ನು ಸರ್ಕಾರದವರು ಮಾಡಿದ್ದಾರೆ. ಆ ದೃಷ್ಟಿಯಿಂದ ಒಂದೆರಡು ವಿಷಯಗಳಲ್ಲಿ ಸರ್ಕಾರದ ನಿರ್ಧಾರವನ್ನು ಈ ಸಭೆಗೆ ತಿಳಿಸಬೇಕೆಂದಿದ್ದೇನೆ.

ಗ್ರಾಮಾಂತರಗಳಲ್ಲಿ ಹತೋಟಿ ಪದ್ಧತಿಯಿಂದ ಏನು ಕಳವಳವಿತ್ತೋ ಅದೀಗ ಸಂಪೂರ್ಣವಾಗಿ ಹೋಗಿದೆಯೆಂಬ ಭಾವನೆ ಎಲ್ಲರಲ್ಲಿಯೂ ಹುಟ್ಟಿದೆ. ಅಲ್ಲೂ ಇಲ್ಲೂ ಸ್ವಲ್ಪಮಟ್ಟಿಗೆ ಕಳವಳ ವಿರಬಹುದು. ಸಂಪೂರ್ಣವಾಗಿ ಕಂಟ್ರೋಲ್ ಪದ್ಧತಿ ರದ್ದಾಗಿ ಸುಭಿಕ್ಷ ಪರಿಸ್ಥಿತಿ ದೇಶದಲ್ಲಿ ಇದ್ದಾಗ ಏನು ಒಂದು ಸಮಂಜಸತೆಯ ವಾತಾವರಣವುಂಟಾಗಬೇಕೋ ಆ ಸಮಂಜಸ ವಾತಾವರಣ ಈಗ ತಕ್ಷಣವೇ ಉಂಟಾಗುವುದು ಕಷ್ಟ. ಅಭಾವವಿದ್ದಾಗ ಹಂಚಿಕೆ ಇರಬೇಕು; ಹಂಚಿಕೆಯಿರುವತನಕ—ಮನುಷ್ಯ ಸ್ವಭಾವ ನೋಡಿಕೊಂಡರೆ—ಅಸಮಂಜಸತೆ ಇದ್ದೇ ಇರುತ್ತದೆ. ಯಾವ ಅಸಮಂಜಸತೆಯೂ ಇಲ್ಲದಿರುವ ನೀತಿಯನ್ನು ಅನುಸರಿಸುವುದಾಗಲಿ ಆಚರಣೆಗೆ ತರುವುದಾಗಲಿ ಅಸಾಧ್ಯದ ವಿಷಯ. ನಾವು ಏನೇ ಯೋಚಿಸಿಕೊಂಡರೂ ಅದರಲ್ಲಿ ಅಸಮಂಜಸತೆ ಇದ್ದೇ ಇರುತ್ತದೆ. ಆದರೆ ಆ ಅಸಮಂಜಸತೆಯಲ್ಲಿ ಹಿರಿದು ಯಾವುದು ಕಿರಿದು ಯಾವುದು ಎಂಬುದನ್ನು ಯೋಚನೆ ಮಾಡಬೇಕು ಅಷ್ಟೆ. ಕಿರಿಯದನ್ನು ಇಟ್ಟುಕೊಂಡು ಹಿರಿಯದನ್ನು ಬಿಟ್ಟುಬಿಡುವುದು ಸೂಕ್ತವೆಂಬುದು ನಾವೆಲ್ಲರೂ ಮನಗಾಣಬೇಕಾದ ವಿಷಯ.

ಈಗ ಹೊಸ ಆಹಾರದ ನೀತಿ ಬಂದಮೇಲೆ ಸ್ಟ್ಯಾಟ್ಯುಟರಿ ರೇಷನಿಂಗ್ ಪದ್ಧತಿ ಮೈಸೂರು ನಗರ, ಬೆಂಗಳೂರು ನಗರ, ದಾವಣಗೆರೆ ಮತ್ತು ಕೋಲಾರದ ಚಿನ್ನದಗಣಿ ಪ್ರದೇಶ—ಇವುಗಳಲ್ಲಿದೆ. ನಾವು ಮುಂದಕ್ಕೆ ಹೆಜ್ಜೆಯಿಟ್ಟದ್ದರೆ ನ್ಯಾಯವಾಗಿ ಈ ನಾಲ್ಕು ನಗರಗಳಲ್ಲೂ ಕೂಡ ಹಂಚಿಕೆ ಪದ್ಧತಿಯನ್ನು ರದ್ದುಮಾಡಬೇಕಾಗುತ್ತದೆ. ಈ ನಾಲ್ಕು ನಗರಗಳ ವಿಷಯದಲ್ಲೂ ಸಂಪೂರ್ಣವಾಗಿ ಹಂಚಿಕೆ ಪದ್ಧತಿಯನ್ನು ತೆಗೆಯುವ ಬಗ್ಗೆ ಪ್ರಜಾಭಿಪ್ರಾಯವನ್ನೂ, ಆಯಾ ಸ್ಥಳೀಯ ಸಂಸ್ಥೆಗಳ ಮತ್ತು ಈ ಮಾನ್ಯ ಸಭೆಯ ಸದಸ್ಯರುಗಳ ಅಭಿಪ್ರಾಯಗಳನ್ನೂ ಶೇಖರಿಸಿದ್ದಾರೆ. ಪೌರಸಭೆಯವರು 'ಹತೋಟಿ ಪದ್ಧತಿಯು ಸಂಪೂರ್ಣವಾಗಿ ಹೋಗಬೇಕು, ಆದರೆ ಅಲ್ಲಲ್ಲಿ ಫೇರ್‌ಪ್ರೈಸ್ ಡಿಪೋಗಳನ್ನಿಡಬೇಕು' ಎಂದು ತಿಳಿಸಿದ್ದಾರೆ. ಈ ಸಭೆಯವರ ಅಭಿಪ್ರಾಯ ಮತ್ತೊಂದು ಬಗೆಯಾಗಿದೆ. ಚಿನ್ನದ ಗಣಿಯಿಂದ ಬಂದಿರತಕ್ಕ ಇಬ್ಬರು ಸದಸ್ಯರ ಅಭಿಪ್ರಾಯವೂ ಕೂಡ ಅಲ್ಲಿ ಹತೋಟಿಯನ್ನು ತೆಗೆಯಕೂಡದು, ಈಗಿರತಕ್ಕ ರೇಷನಿಂಗ್ ಪದ್ಧತಿಯೇ ಇರಬೇಕೆಂಬುದಾಗಿದೆ. ಮೈಸೂರು ಸಿಟಿ ಮತ್ತು ಬೆಂಗಳೂರು ಸಿಟಿಯಿಂದ ಬಂದಿರತಕ್ಕ ಮಾನ್ಯ ಸದಸ್ಯರ ಅಭಿಪ್ರಾಯ 'ಈ ತಕ್ಷಣವೇ ರೇಷನಿಂಗ್ ಪದ್ಧತಿಯನ್ನು ರದ್ದುಮಾಡುವುದು ಅಪಾಯಕರ, ಸಾವಧಾನವಾಗಿ ಆ ಮಾರ್ಗದಲ್ಲಿ ಮುಂದುವರಿಯಬೇಕು' ಎಂಬ ಎಚ್ಚರಿಕೆಯ ರೂಪದಲ್ಲಿದೆ. ದಾವಣಗೆರೆಯಲ್ಲೂ ಹೀಗೆಯೇ ಅಭಿಪ್ರಾಯವಿದೆ. ಆದ್ದರಿಂದ ಸರ್ಕಾರದವರು ಒಂದೇ ದಿವಸ ಈ ನಾಲ್ಕು ನಗರಗಳಲ್ಲೂ ಹಂಚಿಕೆಯ ಪದತ್ಧಿಯನ್ನು ರದ್ದು ಮಾಡುವುದು ಸಾಧ್ಯವಾಗುವುದೇ ಇಲ್ಲ.

4-30 P.M.

ಆದರೆ ನಾನು ಮೊದಲೇ ಹೇಳಿದಹಾಗೆ, ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಸರಿಸುವ ನೀತಿ ನಮ್ಮದಲ್ಲ. ಮುಂದೆ ಹೆಜ್ಜೆ ಇಡಬೇಕು. ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸ್ವಲ್ಪ ಸಾವಕಾಶವಾಗುತ್ತದೆ. ಈ ದೃಷ್ಟಿಯಿಂದ

ಮೊಟ್ಟಮೊದಲು ಮೈಸೂರು ನಗರದಲ್ಲಿ ಈ ಹಂಚಿಕೆ ವ್ಯವಸ್ಥೆಯನ್ನು ತೆಗೆದುಹಾಕಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ದಾವಣಗೆರೆ, ಕೆ.ಜಿ.ಎಫ್. ಮತ್ತು ಬೆಂಗಳೂರು ಈ ಮೂರು ಸ್ಥಳಗಳಲ್ಲಿ ಸ್ಟ್ಯಾಚ್ಯೂಟರಿ ರೇಷನಿಂಗ್ ಮುಂದುವರಿಸಿಕೊಂಡು ಹೋಗೋಣವೆಂದು ನಮ್ಮ ಅಭಿಪ್ರಾಯ. ಹೀಗೆ ಮುಂದುವರಿಸಿಕೊಂಡು ಹೋಗೋಣ ಎಂದಮಾತ್ರಕ್ಕೇ ಸತತವಾಗಿ ಮುಂದುವರಿಸಿಕೊಂಡು ಹೋಗಬೇಕೆಂಬ ಅಭಿಪ್ರಾಯವೇನೂ ಇಲ್ಲ. ನಾನು ಬಡ್ಜೆಟ್ ಭಾಷಣದಲ್ಲಿ ಹೇಳಿದಹಾಗೆ ಮತ್ತು ಶ್ರೀವೀರರುದ್ರಪ್ಪನವರು ಸೂಚನೆ ಕೊಟ್ಟಿರುವ ಹಾಗೆ, ಇನ್ನು ಎರಡು ಮೂರು ತಿಂಗಳು ಕಷ್ಟಕಾಲ. ಈ ಕಾಲದಲ್ಲಿ ಪರಿಸ್ಥಿತಿ ಹೇಗಾಗುತ್ತದೆಯೋ, ಯಾವರೂಪ ತಾಳುತ್ತದೆಯೋ ನೋಡೋಣ. ದೇವರ ದಯೆಯಿಂದ ಮಳೆ ಬೆಳೆ ಚೆನ್ನಾಗಿ ಆಗುವ ಸೂಚನೆ ಕಂಡುಬಂದರೆ, ಈ ನಗರಗಳಲ್ಲಿಯೂ ಕೂಡ ಹಂಚಿಕೆ ವ್ಯವಸ್ಥೆಯನ್ನು ರದ್ದು ಮಾಡುತ್ತೇವೆ. ಈಗ ಮೈಸೂರು ನಗರದಲ್ಲಿ ರದ್ದುಮಾಡಿ ಈ ಪ್ರಯೋಗ ಯಾವ ರೀತಿ ಪರಿಣಮಿಸುತ್ತದೆಯೋ ನೋಡಿ, ಅನಂತರ ಮುಂದುವರಿಯೋಣ. ಬೆಂಗಳೂರು ಪೌರಸಭೆಯವರೂ ಇತರ ಸ್ಟ್ಯಾಚ್ಯೂಟರಿ ರೇಷನಿಂಗ್ ಇರುವ ನಗರಗಳ ಸಭೆಯವರೂ—'ಈಗ ಎರಡು ಸೇರು ಧಾನ್ಯ ಮಾತ್ರ ನಗರಗಳೊಳಗೆ ಬರುವುದಕ್ಕೆ ಅವಕಾಶವಿದೆ, ಇದರ ಪ್ರಮಾಣವನ್ನು ಹೆಚ್ಚು ಮಾಡಬೇಕು' ಎಂಬ ವಾದವನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಈ ವಾದಕ್ಕೆ ಮನ್ನಣೆ ಕೊಟ್ಟು ಎರಡು ಸೇರು ಪ್ರಮಾಣವನ್ನು ಐದು ಸೇರಿಗೆ ಹೆಚ್ಚಿಸೋಣ. ಇನ್ನು ಮುಂದೆ ಸ್ಟ್ಯಾಚ್ಯೂಟರಿ ರೇಷನಿಂಗ್ ಇರುವ ಪ್ರದೇಶಗಳಿಗೆ ಐದು ಸೇರು ಧಾನ್ಯ ತರತಕ್ಕ ಅವಕಾಶವನ್ನು ಸರ್ಕಾರದವರು ಕಲ್ಪಿಸಿ ತಕ್ಕ ಆಜ್ಞೆಯನ್ನು ಮಾಡುತ್ತಾರೆ. ಆದರೆ ಒಂದು ವಿಷಯವನ್ನು ಮಾತ್ರ ನಿಖರವಾಗಿ ಹೇಳಬೇಕು. ಇದನ್ನು ಆಹಾರ ಮಂತ್ರಿಯವರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಎಲ್ಲಿ ಹಂಚಿಕೆಯ ವ್ಯವಸ್ಥೆಯ ಜವಾಬ್ದಾರಿಯನ್ನೂ ವೆಚ್ಚವನ್ನೂ ಸರ್ಕಾರದವರು ವಹಿಸಿಕೊಂಡಿದ್ದಾರೋ ಅಲ್ಲಿನ ಜನರೂ ಕೂಡ 'ಈ ಹೊಣೆಯನ್ನು ಸರ್ಕಾರದವರು ವಹಿಸಿದ್ದಾರೆ, ಆದುದರಿಂದ ನಮ್ಮ ಕರ್ತವ್ಯವನ್ನು ನಾವೂ ಪಾಲನೆ ಮಾಡಬೇಕು' ಎಂದು ಜವಾಬ್ದಾರಿಯಿಂದ ನಡೆಯುಬೇಕು. ಹಂಚಿಕೆ ವ್ಯವಸ್ಥೆಯಿಂದಾಗತಕ್ಕ ಪ್ರಯೋಜನವೂ ಬೇಕು ಮತ್ತು ಎಷ್ಟು ಧಾನ್ಯವನ್ನಾದರೂ ಪಟ್ಟಣಗಳಿಗೆ ತರುವ ಸೌಲಭ್ಯವೂ ಬೇಕೆಂದು ಹೇಳುವುದೂ, ಎರಡನ್ನೂ ಪಡೆಯುವುದೂ ನ್ಯಾಯವಲ್ಲ. ಹೀಗೆ ಆಸೆಪಡುವುದರಲ್ಲಿ ದುರಾಶೆ ಹೆಚ್ಚುತ್ತದೆಯೇ ಹೊರತು ಇದು ದೇಶದ ಹಿತದೃಷ್ಟಿಯಿಂದ ಮಾಡುವ ಯೋಚನೆಯಲ್ಲ. ಇನ್ನು ಮುಂದೆ ಸ್ಟ್ಯಾಚ್ಯೂಟರಿ ರೇಷನಿಂಗ್ ಪ್ರದೇಶದೊಳಕ್ಕೆ ಐದು ಸೇರಿಗಿಂತಲೂ ಹೆಚ್ಚಾಗಿ ಸಾಗಾಣಿಕೆ ಮಾಡತಕ್ಕವರನ್ನು ಕಠಿಣವಾದ ಶಿಕ್ಷೆಗೆ ಗುರಿಮಾಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಾಡುಮಾಡುತ್ತಾರೆಂಬುದನ್ನು ಸಾರಿ ಸಾರಿ ಹೇಳುತ್ತೇನೆ.

Sri K. PATTABHI RAMAN.—May I just seek one clarification from the Hon'ble the Chief Minister ?

Free movement is permitted in the areas other than statutory rationed areas. In the statutorily rationed areas five seers can be moved from place to place. Where are these grains to be got from under the present Harvest Control Order ?

Sri K. HANUMANTHAIYA.—In the course of my reply, I would have touched these points. I will answer these points.

Sri K. PATTABHI RAMAN.—I will be very much obliged.

ಶ್ರೀ ಕೆ. ಹನುಮಂತಯ್ಯನವರು.—ಇನ್ನು ಸರ್ಕಾರದ ತೀರ್ಮಾನದ ವಿಷಯದಲ್ಲಿ ಇನ್ನು ಒಂದು ಅಂಶವನ್ನು ಹೇಳಿ ಮಿಕ್ಕ ಸಮಸ್ಯೆಗಳಿಗೆ ಉತ್ತರವನ್ನು ಕೊಡುತ್ತೇನೆ. ಆಹಾರ ಧಾನ್ಯಗಳ ಬೆಲೆ ಹೆಚ್ಚಿಸಬೇಕಾದದ್ದು, ಹೆಚ್ಚಿಸಿದ್ದು ಎಲ್ಲರಿಗೂ ಆಗಲೇ ಗೊತ್ತಿದೆ ; ಸಂಪೂರ್ಣವಾಗಿ ಪ್ರಸ್ತಾಪ ಮಾಡಲ್ಪಟ್ಟಿದೆ. ಹಿಂದೆ ಇಂಡಿಯಾ ಸರ್ಕಾರದವರು ಗೋಧಿ ಬೆಲೆಯನ್ನು ಇಳಿಸಿದ್ದರ

(ಶ್ರೀ ಕೆ. ಹನುಮಂತಯ್ಯನವರು)

ಪರಿಣಾಮವಾಗಿ ಜೋಳದ ಬೆಲೆಯನ್ನಿಳಿಸಿದರು. ಅದರ ಪರಿಣಾಮವಾಗಿ ನಾವು ನ್ಯಾಯದೃಷ್ಟಿಯಿಂದ ಅದರ ಫಲ ಗೋಧಿ ಉಪಯೋಗಿಸುವವರಿಗೆ ಹೋಗಬೇಕೆಂದು ತೀರ್ಮಾನಮಾಡಿ ರೂಪಾಯಿಗೆ ಒಂದೂವರೆ ಸೇರು ಮಾರುತ್ತಿದ್ದುದನ್ನು 2 ಸೇರು ಮಾರಬಹುದೆಂದು ತೀರ್ಮಾನ ಮಾಡಿ ಅದರಂತೆ ಜ್ಹಾರಿಮಾಡಿದೆವು. ಈಗ ಮತ್ತೆ ಇಂಡಿಯಾ ಸರ್ಕಾರದವರು ಗೋಧಿಯ ಬೆಲೆಯನ್ನು ಇಳಿಸಿರುವುದು ತಮಗೆಲ್ಲ ಗೊತ್ತಿದೆ. ಇದರ ಪರಿಣಾಮವಾಗಿ ಇನ್ನುಮುಂದೆ ಒಂದು ರೂಪಾಯಿಗೆ ಎರಡು ಸೇರು ಮಾರುತ್ತಿದ್ದುದನ್ನು ಮೂರು ಸೇರು ಮಾರುವುದಕ್ಕೆ ತೀರ್ಮಾನವಾಗಿದೆ.

(ಹರ್ಷಧ್ವನಿ!)

ಜನಾಬ್ ಜೆ. ಮುಹಮದ್ ಇಮಾಂರವರು.–ಅಕ್ಕಿಯನ್ನು ಅಗ್ಗಮಾಡಬೇಕು; ನಮಗೆ ಗೋಧಿ ಬೇಕಾಗಿಲ್ಲ.

ಶ್ರೀ ಕೆ. ಹನುಮಂತಯ್ಯನವರು.—I thought doctors had prescribed wheat to you (laughter).

ಇಷ್ಟೇ ಅಲ್ಲದೆ ನಮ್ಮಲ್ಲಿ ಹೆಚ್ಚು ಗೋಧಿ ದಾಸ್ತಾನು ಇರುವುದರ ದೆಸೆಯಿಂದ ಯಾರು ಎಷ್ಟು ಬೇಕಾದರೂ ಗೋಧಿಯನ್ನು ಕೊಂಡುಕೊಳ್ಳಬಹುದು. ಇದಕ್ಕೆ ಪರಿಮಿತಿ ಇಲ್ಲ. ಆಹಾರದ ಪ್ರಮಾಣವನ್ನು ಹೆಚ್ಚಿಸಬೇಕೆಂದು ಜನರು ಕೇಳುತ್ತಿದ್ದರು. ಈ ದಿವಸ ಈ ಹೊಸ ಪರಿಸ್ಥಿತಿ ದೇವರ ದಯೆಯಿಂದ ಉಂಟಾಗಿದೆ. ಗೋಧಿ ಒಂದು ವಿಷಯದಲ್ಲಿ ಹಳ್ಳಿಯಲ್ಲಾಗಲಿ ಪಟ್ಟಣದಲ್ಲಿ ಆಗಲಿ ಎಲ್ಲಿ ಬೇಕಾದರೂ ಜನರು ಎಷ್ಟು ಕೊಂಡುಕೊಳ್ಳುವುದಕ್ಕೆ ಅಪೇಕ್ಷೆ ಪಡುತ್ತಾರೋ ಅಷ್ಟನ್ನು ಮಾರುವುದಕ್ಕೆ ವ್ಯವಸ್ಥೆ ಮಾಡಿ ಆ ರೀತಿ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಸಂಸ್ಥಾನದಲ್ಲಿ ಎಲ್ಲಾ ಕಡೆಯೂ ಮಾರಾಟ ಮಾಡುವುದಕ್ಕೆ ಅವಕಾಶವಿರುತ್ತದೆಯೆ? Even within these city areas and throughout the year?

Sri H. SIDDAVEERAPPA:—I have already issued by means of Government circulars that it can be had anywhere in the State as the Hon'ble Chief Minister has stated.

Mr. SPEAKER.—The question was: "Is it throughout the year or is it until further orders"?

Sri H. SIDDAVEERAPPA.—Until further orders, no doubt. (Laughter.)

ಶ್ರೀ ಕೆ. ಹನುಮಂತಯ್ಯನವರು.—ಒಂದು ಪ್ರಶ್ನೆ ಬಹಳ ಜಟಿಲವಾದ ಪ್ರಶ್ನೆ. ಇದನ್ನು ಒಂದು ರೂಪದಲ್ಲಿ ಶ್ರೀ ಪಟ್ಟಾಭಿರಾಮ‌ುರವರು ಎತ್ತಿದರು. ನಾವು free movement ಅವಕಾಶ ಮಾಡಿದೆವು, ಆದರೆ free marketing conditions ಗೆ ಅವಕಾಶ ಕೊಟ್ಟಿಲ್ಲ. ಉದ್ದೇಶ ಪೂರ್ವಕವಾಗಿಯೇ ಕೊಟ್ಟಿಲ್ಲ. ಈ ರೀತಿ ಮಾಡಿರುವುದರಲ್ಲಿ ಬುದ್ಧಿವಂತಿಕೆ ಮತ್ತು ದೂರದೃಷ್ಟಿ ಇದೆ ಎಂಬುದನ್ನು ನಾನು ಸಮರ್ಥಿಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮ‌ುರವರು.—ಮತ್ತು ಅನೀತಿಯೂ ಇದೆ......

ಶ್ರೀ ಕೆ. ಹನುಮಂತಯ್ಯನವರು.—ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಈ ದಿವಸ ನಾನು ಹೇಳಿದುದನ್ನು ಅವರು ಮನಸ್ಸಿಟ್ಟು ಕೇಳಿದ್ದರೆ ಚೆನ್ನಾಗಿತ್ತು. ಸುಭಿಕ್ಷ ಪರಿಸ್ಥಿತಿಯುಂಟಾಗಿ ಕಂಟ್ರೋಲ್ ಎಲ್ಲವೂ ಸಂಪೂರ್ಣವಾಗಿ ಹೋಗುವಾಗ ಸಮಂಜಸ ಪರಿಸ್ಥಿತಿ ಸ್ಥಾಪಿತವಾಗುವುದಕ್ಕೆ ಸಾಧ್ಯವಾಗುತ್ತದೆ. ಎಂದಿನವರೆಗೆ ಕಂಟ್ರೋಲುಗಳು ಒಂದಲ್ಲ ಒಂದು ರೂಪದಲ್ಲಿ ಇರುತ್ತದೆಯೋ ಅಂದಿನವರೆಗೆ ಅಸಮಂಜಸ ಪರಿಸ್ಥಿತಿ ಇದ್ದೇ ಇರುತ್ತದೆ. ಸ್ನಾನ ಮಾಡುವವರೆಗೆ ಬೆವರಿರುತ್ತದೆ; ಮಾಡಿದ ಮೇಲೆ ಇರುವುದಿಲ್ಲ. ಪುನಃ ಬರಬಹುದು, ಅದು ಬೇರೆ ಮಾತು. ಕಂಟ್ರೋಲ್ ಹೋಗಿ ಸಂಪೂರ್ಣಸ್ನಾನ ದೇಶಕ್ಕೆ ಆಗಿಲ್ಲ. ಆದುದರಿಂದ ಸ್ನಾನ ಮಾಡುವುದಕ್ಕೆ ಮೊದಲೇ ಬೆವರು ಇರಬಾರದೆಂದು ಹೇಳುವ ವಾದದಂತೆ, ಕಂಟ್ರೋಲು ಇರಬೇಕು ಅಸಮಂಜಸ, ಪರಿಸ್ಥಿತಿ ಇರ

ಬಾರದು ಎನ್ನುವ ವಾದ ಪರಸ್ಪರ ಹೊಂದಿಕೊಳ್ಳುವುದಿಲ್ಲ. ಮಾನ್ಯ ಸದಸ್ಯರಿಗೆ ಹೇಳುವುದಿಷ್ಟೆ: ನಾನೇ ಅಸಮಂಜಸತೆ ಇದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಅಸಮಂಜಸತೆ ಇದೆಯೆಂದು ವಾದಿಸುವುದರಲ್ಲಿ ಅರ್ಥವಿಲ್ಲ. ಈ ರೀತಿ ಅಸಮಂಜಸ ಪರಿಸ್ಥಿತಿ ಇದೆ, ಇದನ್ನು ಹೀಗೆ ಹೋಗಲಾಡಿಸಿ ಎಂದು ಸಲಹೆ ಕೊಟ್ಟರೆ ಅದನ್ನು ನಾವು ಯೋಚನೆ ಮಾಡಿ, ತಕ್ಕ ಏರ್ಪಾಡು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಸಂತೋಷದಿಂದ ಪರಿಶೀಲನೆ ಮಾಡುತ್ತೇವೆ.....

Sri K. PATTABHI RAMAN.—May I make one submission, Mr. Speaker? Amend the Harvest Control Order to the extent to which you have permitted the free movement of foodgrains into these statutorily rationed areas. When you say '*bona fide*' consumption, you must also provide some scope for grain to come. Otherwise you know the rest. I will not say anything more.

ಶ್ರೀ ಕೆ. ಹನುಮಂತಯ್ಯನವರು.—ಈ ದಿವಸ ನಾವು ಮಾರಾಟಕ್ಕೆ ಅವಕಾಶಕೊಟ್ಟಿಲ್ಲ. ಈಗಾಗಲೇ ಅನೇಕ ಸ್ಥಳಗಳಲ್ಲಿ, ಸಂತೆಗಳು ಮತ್ತು ಇತರ ವ್ಯಾಪಾರ ಸ್ಥಳಗಳಲ್ಲಿ ವ್ಯಾಪಾರಿಗಳು ಕೈಹಾಕಿ ಹೆಚ್ಚು ಧಾನ್ಯ ಸಂಗ್ರಹ ಮಾಡಿ ಬೆಲೆಗಳನ್ನು ಏರಿಸಲು ಅವಕಾಶ ಕಲ್ಪಿಸುತ್ತಿದ್ದಾರೆ ಎನ್ನುವ ಕೂಗು ಅಲ್ಲಲ್ಲಿ ಕೇಳಿಬರುತ್ತಿದೆ. ಹಿಂದೆ ವ್ಯಾಪಾರಸ್ಥರ ದೆಶೆಯಿಂದ ಕಂಟ್ರೋಲು ಪುನಃ ವಾಪಸು ಬರಬೇಕಾಯಿತು ಎಂದು ತಾವೆಲ್ಲರೂ ಒಪ್ಪಿಕೊಂಡಿದ್ದೀರಿ. ಆದುದರಿಂದ ಕನ್ನಡದಲ್ಲಿ ಒಂದು ಗಾದೆ ಹೇಳುವ ಹಾಗೆ, ರಾತ್ರಿ ಹೊತ್ತು ನೋಡಿದ ಹಳ್ಳಕ್ಕೆ ಹಗಲು ಬೀಳುವುದು ಬುದ್ಧಿವಂತಿಕೆಯಲ್ಲ, ಉಚಿತವೂ ಅಲ್ಲ. ಆದುದರಿಂದ ಅಸಮಂಜಸತೆ ಇದ್ದರೂ ಕೂಡ ಜೀರ್ಣಿಸಿಕೊಳ್ಳೋಣ. ವ್ಯಾಪಾರಸ್ಥರಿಗೆ ಸಂಪೂರ್ಣ ಅವಕಾಶವನ್ನು ಈ ಅಭಾವ ಪರಿಸ್ಥಿತಿಯಲ್ಲಿ ಕೊಟ್ಟರೆ ಅದರಿಂದ ಬೆಲೆ ಏರುತ್ತದೆ, ದೇಶದಲ್ಲಿ ಹಾಹಾಕಾರ ವುಂಟಾಗುತ್ತದೆ. ಪುನಃ ಯಾವ ಕಂಟ್ರೋಲ್ ಬೇಡವೆಂದು ಹೇಳುತ್ತಿದ್ದರೋ ಅದು ವಾಪಸುಬರುತ್ತದೆ. ಆದ ಕಾರಣ, ಈ ಕಂಟ್ರೋಲ್ ಸಂಪೂರ್ಣವಾಗಿ ರದ್ದಾಗಿ, ಈ ಪರಿಸ್ಥಿತಿ ಹೋಗುವವರೆಗೆ, it is inevitable that the position will be nebulous.

We have to judge the situation from day to day, from week to week, from month to month and adjust our policy accordingly, our final goal being the stage of decontrol.

ಆದುದರಿಂದ ಹೀಗೊಂದು ಅಸಮಂಜಸವಾದ ಕಾರಣಗಳನ್ನು ಎತ್ತಿ ವಾದ ಮಾಡುತ್ತಾ ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ದಿವಸ ಸಾಗಾಣಿಕೆ ವಿಷಯದಲ್ಲಿ ಸಂಸ್ಥಾನದೊಳಗೆ ಎಲ್ಲಿಂದ ಎಲ್ಲಿಗೆ ಬೇಕಾದರೂ, ಆಹಾರ ನಿಯಂತ್ರಣವಿರುವ ಸ್ಥಳಗಳನ್ನು ಬಿಟ್ಟು ಸಾಗಿಸಿಕೊಂಡು ಹೋಗಬಹುದೆಂದು ಅವಕಾಶ ಕೊಡಲಾಗಿದೆ. ಮೊದಲು ಈ ರೀತಿಯ ಅವಕಾಶ ಕೊಟ್ಟಿರಲಿಲ್ಲ. ಈ ದಿವಸ ಜಾರಿಯಲ್ಲಿರತಕ್ಕ ಒಂದು ಆಜ್ಞೆಯನ್ನು ತೆಗೆದು ಹಾಕಿಬಿಟ್ಟ ಮೇಲೆ ಪುನಃ ಅದನ್ನು ಜಾರಿಗೆ ತರಲು ಬಹಳ ಕಷ್ಟವಿದೆ.

Sri M. SHANKAR LINGE GOWDA.—I want to know the meaning of *bona fide* consumption.

ಶ್ರೀ ಕೆ. ಹನುಮಂತಯ್ಯನವರು.—ನಾನು ಈಗ ಅದನ್ನೇ ಹೇಳುತ್ತ ಇದ್ದೇನೆ. ಈ ಬೋನಾ ಫೈಡೀಕೇಸಸ್ ಇಂಥಾದ್ದೇ ಎಂಬುದಾಗಿ ಅದಕ್ಕೆ ಒಂದು ಸೂತ್ರವನ್ನು ಹೇಳತಕ್ಕದ್ದು ಶ್ರೀಮಾನ್ ಶಂಕರಲಿಂಗೇಗೌಡರಿಗೂ ಸಾಧ್ಯವಾಗುವುದಿಲ್ಲ. ಆದರೆ ಅವರು ಹೇಳಿರತಕ್ಕ ಸ್ಥಿತಿಯಲ್ಲಿ ಅವು ನಡೆದುಕೊಂಡುಹೋದರೆ, ಅದರಿಂದ ಜನರಿಗೆ ಅನುಕೂಲವಾದೀತೆಂಬ ಒಂದು ಉದ್ದೇಶದಿಂದ ಅವುಗಳ ಒಳವಿಚಾರಕ್ಕೆ ಹೋಗದೆ ಇರುವುದೇ ಉತ್ತಮವೆಂದಿರುವಾಗ, ಅದಕ್ಕೊಂದು ಡೆಫಿನಿಷನ್ ಕೊಡಬೇಕೆಂದು ವ್ಯಾಜ್ಯವಾಡುವುದರಲ್ಲಿ ಏನೂ ಪ್ರಯೋಜನವಿಲ್ಲ. ಈ ದಿವಸ ನಮ್ಮ ಅಧಿಕಾರಿಗಳಿಗೆ ಆ ರೀತಿಯಾಗಿ ಸೂಚನೆ ಕೊಟ್ಟಿದ್ದೇವೆ. ಜನರು ತಲೆಯ ಮೇಲಾಗಲೀ ಅಥವಾ ಬಂಡಿಗಳ ಮೇಲಾಗಲೀ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದರಲ್ಲಿ ಅವರು 10 ಪಲ್ಲವಲ್ಲ

(ಶ್ರೀ ಕೆ. ಹನುಮಂತಯ್ಯನವರು)

20 ಪಲ್ಲದವರೆಗೂ ತೆಗೆದುಕೊಂಡು ಹೋದರೂ ಹೋಗಬಹುದು. ಆದರೆ 50, 100, 200 ಪಲ್ಲಾಗಟ್ಟಲೆ, ದೊಡ್ಡದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ರೈಲು, ಲಾರಿ ಇತ್ಯಾದಿ ಗಳ ಮೂಲಕ ಸಾಗಿಸತಕ್ಕದ್ದನ್ನು ನಿಷೇಧಿಸಲಾಗಿದೆ. Roughly we can easily presume, whoever transports in lorries and trains does so for trading purposes.

ಆದುದರಿಂದ ಈ ಸಂಬಂಧವಾಗಿ ನಾವು ಜನರಲ್ಆಗಿ ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಆದರೆ ಇದರಲ್ಲಿ ಒಂದು ಪ್ರಶ್ನೆಬರುತ್ತದೆ: ಹತ್ತು ಇಪ್ಪತ್ತು ಜನರು ಒಟ್ಟಾಗಿ ಸೇರಿಕೊಂಡು ಅವರೆಲ್ಲರಿಗೂ ಬೇಕಾಗುವಂಥ ದವಸವನ್ನು ಗಾಡಿಯಲ್ಲೋ ಅಥವಾ ಲಾರಿಯಲ್ಲೋ ತೆಗೆದುಕೊಂಡು ಹೋಗಲು ತಾವು ಏಕೆ ಅವಕಾಶ ಕೊಡಬಾರದು ಎಂದು. ಅಂಥ ಪರಿಸ್ಥಿತಿಯಲ್ಲಿ ಹಾಗೆ ಹೆಚ್ಚಿನ ಪ್ರಮಾಣದಲ್ಲಿ ದವಸವನ್ನು ಸಾಗಿಸುವಂಥಾ ಒಂದು ಅವಕಾಶವನ್ನು ಸಹಕಾರ ಸಂಘಗಳವರಿಗೂ, ಮತ್ತು ವಿವಿಧೋದ್ದೇಶ ಸಹಾಯಕ ಸಂಘಗಳವರಿಗೂ ಕೊಟ್ಟಿದ್ದೇವೆ. ಈ ಕೆಲಸವನ್ನು ವ್ಯಕ್ತಿಗಳ ಮೂಲಕ ಮಾಡುವುದಕ್ಕೆ ಅವಕಾಶ ನೀಡುವುದಕ್ಕಿಂತ, ಸಹಕಾರ ಸಂಘ, ಸಂಸ್ಥೆಗಳ ಮೂಲಕ ಮಾಡುವಂತೆ ಮಾಡಿದರೆ ಬಹಳ ಉತ್ತಮವಾಗಿರುತ್ತದೆಂದು ಹಾಗೆ ಮಾಡಿದ್ದೇವೆ. ಹೀಗೆ ಆಹಾರ ಧಾನ್ಯಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಾಣಿಕೆ ಮಾಡುವುದರ ಸಂಬಂಧವಾಗಿ ಒಂದು ಹತೋಟಿಯನ್ನಿಟ್ಟುಕೊಳ್ಳಲೇ ಬೇಕಾಗಿದೆ. ಈ ಮಲ್ಟಿಪರ್ಪಸಸ್ ಸೊಸೈಟಿಗಳವರು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಆಹಾರ ಧಾನ್ಯಗಳನ್ನು ಸಾಗಿಸಲು ಅಪ್ಪಣೆ ಕೇಳಿದರೆ, ಅದನ್ನೂ ಧಾರಾಳವಾಗಿ ಕೊಡುತ್ತೇವೆ.

ಜನಾಬ್ ಜೆ. ಮಹಮದ್ ಇಮಾಂ ಅವರು.—ದಾವಣಗೆರೆಯಿಂದ ಅನೇಕರು ಕೆಲವು ದಿನಗಳ ಹಿಂದೆ ಲಾರಿಗಳಲ್ಲಿ ದವಸವನ್ನು ತುಂಬಿಕೊಂಡು ಕೋಲಾರ ಜಿಲ್ಲೆಗೆ ತಂದು ಅದನ್ನು ಉಪಯೋಗ ಮಾಡುತ್ತೇವೆಂದು ಹೇಳಿ ಅದನ್ನು ದುರುಪಯೋಗ ಮಾಡಿದರೆಂದು ನನಗೆ ತಿಳಿದು ಬಂದಿದೆ. ಅದನ್ನು ಸರ್ಕಾರದವರು ನಿರ್ಧರ ಮಾಡಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಕೆ. ಹನುಮಂತಯ್ಯನವರು.—ಆ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಈಗಾಗಲೇ ಕೈಕೊಂಡಿದ್ದೇವೆ. ಮತ್ತು ಕೆಲವು ಲಾರಿಗಳ ಧಾನ್ಯವನ್ನೂ ಸಹ ವಶಪಡಿಸಿಕೊಂಡಿದ್ದೇವೆ. ಯಾವ ವ್ಯಕ್ತಿಯಿಂದಲೇ ಆಗಲಿ, ಈ ಆಹಾರ ನೀತಿಯು ಸುಗಮವಾಗಿ ನಡೆಯುತ್ತಿರುವ ಸನ್ನಿವೇಶದಲ್ಲಿ, ಅದಕ್ಕೆ ಹಾನಿಯುಂಟಾಗಿರುತ್ತದೆಂದು ತಿಳಿದು ಬಂದರೆ ಅದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಸ್ವಲ್ಪವಾದರೂ ಅನುಮಾನವಿಲ್ಲದೆ ಅಂಥಾದ್ದನ್ನು ತಡೆಗಟ್ಟುವ ಮನೋನಿರ್ಧಾರವಿದೆ ಯೆನ್ನುವ ಭರವಸೆಯನ್ನೂ ಸಹ ಕೊಡುತ್ತೇನೆ. ಈ ರೀತಿ ಈಗ ಏನು ಒಂದು ವಾಸ್ತವಿಕ ಪರಿಸ್ಥಿತಿಯಿದೆಯೋ ಅದನ್ನು, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀಮರ್ಾ ಎಚ್. ಎಸ್. ರುದ್ರಪ್ಪನವರೂ, ಇನ್ನೂ ಕೆಲವು ಮಾನ್ಯ ಸದಸ್ಯರುಗಳೂ ತಿಳಿಸಿರುವಂತೆ, ನಾವು ಮುಂದುವರಿಸಿಕೊಂಡು ಹೋಗಬೇಕೆಂಬುದೇ ನಮ್ಮ ಉದ್ದೇಶ. ನಾನು ಆಗಲೇ ಹೇಳಿದಂತೆ ಮಳೆಬೆಳೆಗಳು ಚೆನ್ನಾಗಿ ಆಗಿ, ದೇಶದಲ್ಲಿ ಸುಭಿಕ್ಷದ ಚಿಹ್ನೆಗಳು ಕಂಡುಬಂದರೆ ಆಗ ಈ ಆಹಾರ ನೀತಿಯನ್ನು ಮಾರ್ಪಾಡುಮಾಡಲಾಗುತ್ತದೆ. ಈಗ ನಾವು ಏನು ಒಂದು ಆಹಾರ ನೀತಿಯನ್ನು ಪ್ರತಿಪಾದನೆ ಮಾಡಿಕೊಂಡು ಬರುತ್ತಿದ್ದೇವೋ ಇದು ಶಾಶ್ವತವಾದಂಥಾ ಒಂದು ಸನಾತನ ಧರ್ಮವೇನೂ ಅಲ್ಲ. ಅಥವಾ ಶ್ರೀಮರ್ಾ ಗೋಪಾಲಗೌಡರು ಹೇಳಿರುವಂತೆ ಗಾಳಿ ಬಂದಾಗ ತೂರಿಕೋ ಎಂಬ ಮನೋಭಾವದಿಂದ ವರ್ತಿಸತಕ್ಕಂಥದ್ದೂ ಅಲ್ಲ. ಏತಕ್ಕೆಂದರೆ, ಶ್ರೀಮರ್ಾ ಗೋಪಾಲಗೌಡರು ಹೇಳಿರುವಂತೆ, ಗಾಳಿ ಬಂದಾಗ ತೂರಿಕೊಂಡರೆ ಆ ಧಾನ್ಯ ನಮ್ಮ ಕೈಗೆ ಸಿಕ್ಕುವುದೇ ಇಲ್ಲ. ಗಾದೆ

ವೇದಕ್ಕೆ ಸಮಾನ, ನಿಜ ; ಈ ಒಂದು ಸಂದರ್ಭ ದಲ್ಲಿ ಅಂಥ ಒಂದು ಗಾದೆಯನ್ನು ಅವರು ಉಪ ಯೋಗಿಸಿರುವುದರಲ್ಲಿ ಯಾವ ತತ್ವವೂ ಅಡಕ ವಾಗಿಲ್ಲ ಎಂದು ಹೇಳಿದರೆ ಅದೊಂದು ಕುಚೋ ದ್ಯವಾಗಲಾರದು. ಅಂಥ ಒಂದು ತತ್ವವನ್ನು ಸಾಮಾನ್ಯ ನೀತಿಗೆ ಅಳವಡಿಸಿಕೊಂಡು ಹೋಗ ತಕ್ಕದ್ದು ಒಂದು ರಾಜಕೀಯ ನೈಪುಣ್ಯತೆ. ಆದರೆ ಈಗ ಈ ಆಹಾರದ ಕಂಟ್ರೋಲನ್ನು ಕೆಲಕೆಲವು ದೊಡ್ಡ ಪಟ್ಟಣಗಳಲ್ಲಿ ಜಾರಿಯಲ್ಲಿಟ್ಟು ಕೊಂಡು ಉಳಿದಕಡೆ ಇದನ್ನು ಶೀಘ್ರವಾಗಿ ತೆಗೆದುಹಾಕಬೇಕೇ ಅಥವಾ ಸಾವಧಾನವಾಗಿ ತೆಗೆದುಹಾಕಬೇಕೇ ಎಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕಾದದ್ದು ನಮ್ಮ ಮುಖ್ಯ ಕರ್ತವ್ಯ. ಇದು ಒಂದು ವಾರ ಅಥವ ತಿಂಗಳಿಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಆದ್ದರಿಂದ ಈಗ ನಾವು ಏನು ಒಂದು ನೀತಿಯನ್ನು ಅನುಸರಿಸಿ ಕೊಂಡು ಬರಬೇಕೆಂದು ತೀರ್ಮಾನಮಾಡಿ ದ್ದೇವೋ ಅದನ್ನೇ ಈ ಮಾನ್ಯ ಸಭೆಯವರೂ ಸೂಕ್ತ ಎಂದು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಯಾವಾಗ ನಾವು ಈ ಹತೋಟಿ ಇನ್ನೂ ಸ್ವಲ್ಪ ಕಾಲ ಇರಬೇಕೆಂದು ಒಂದು ತೀರ್ಮಾನಕ್ಕೆ ಬಂದಿದ್ದೇವೊ, ಇದರ ಮೇಲೆ ನಾವು ನಿರ್ವಹಿಸಬೇಕಾದ ಒಂದು ಜವಾಬ್ದಾರಿಯೂ ಇದ್ದೇ ಇದೆ. ಈಗ ಎಲ್ಲೆಲ್ಲಿ ಈ ಹತೋಟಿ ಆಜ್ಞೆಯನ್ನು ಜಾರಿಗೆ ಕೊಡ ಲಾಗುತ್ತದೋ ಆ ಸ್ಥಳಗಳಿಗೆ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಣಮಾಡಲೇ ಬೇಕಾಗುತ್ತದೆ. ಆಹಾರ ಹತೋಟಿ ಆಜ್ಞೆಯಿ ರುವಾಗ ಹಂಚಿಕೆಯನ್ನು ಕೈಬಿಡುವುದಕ್ಕಾಗು ವುದಿಲ್ಲ. ಒಂದು ಮುಂದಕ್ಕೆ ಬಂದರೆ ಮತ್ತೊಂದು ಅದರ ಹಿಂದೆ ಇದ್ದೇ ಇರುತ್ತದೆ. ಬಸವ ಹೋದರೆ ಹಿಂದೆ ಬಾಲ ಹೇಗೆ ಬಂದೇ ಬರುತ್ತದೋ, ಹಾಗೆ ಈ ಹತೋಟಿ ಆಜ್ಞೆಗಳು ಇದ್ದಲ್ಲಿ ಹಂಚಿಕೆಯ ಬಗ್ಗೆ ಆಹಾರ ಧಾನ್ಯಗಳ ಸಂಗ್ರಹಣದ ಕಾರ್ಯವೂ, ಅಂದರೆ ಆಹಾರ ಶೇಖರಣೆಯ ಕಾರ್ಯ, ನಡೆಯಲೇಬೇಕು.

ಇದಕ್ಕೆ ಎರಡು ಮಾರ್ಗಗಳಿವೆ; ಒಂದನೆ ಯದು; ಇಂಡಿಯಾ ಸರ್ಕಾರವು ಈ ಸಂಸ್ಥಾನಕ್ಕೆ ಕೊಡತಕ್ಕ ಧಾನ್ಯ, ಎರಡನೆಯದು ಈ ಸ್ಥಳದಲ್ಲಿ ನಾವು ಶೇಖರಿಸುವ ಧಾನ್ಯ. ಇಂಡಿಯಾ ಸರ್ಕಾರದವರು ಯಾವ ಪ್ರಮಾಣ ದಲ್ಲಿ ಈ ಧಾನ್ಯವನ್ನು ನಮಗೆ ಕೊಡಬೇಕೆಂಬು ದನ್ನು ನಾವೂ ಅವರೂ ಚರ್ಚಿಮಾಡಿ ನಿರ್ಧಾ ರಮಾಡಿಕೊಳ್ಳುತ್ತೇವೆ. ಆ ವಿಚಾರದಲ್ಲಿ ಏನೂ ಅಷ್ಟು ಕಷ್ಟ ತೋರುವುದಿಲ್ಲ. ಈಗಿರುವ ತೊಂದರೆ ಈ ಸಂಸ್ಥಾನದಲ್ಲಿ ಶೇಖರಣೆಯಾಗಬೇಕಾದ ಧಾನ್ಯದ ವಿಷಯಕ್ಕೆ ಸಂಬಂಧಪಟ್ಟಿದೆ. ಹಿಂದಿದ್ದ ಶೇಖರಣೆ ಪದ್ಧತಿ ಪ್ರಕಾರ ಈಗಲೂ ನಡೆಯಬೇಕೇ ಅಥವಾ "ಲೆವಿ ಸಿಸ್ಟಂ" ಪ್ರಕಾರ ಮುಂದುವರಿಯಬೇಕೇ ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ.

Sri M. SHANKAR LINGE GOWDA.—That point could be settled after the month of August, Sir.

Mr. SPEAKER.—The Chief Minister is on his legs and not the Hon'ble Member.

ಶ್ರೀ ಕೆ. ಹನುಮಂತಯ್ಯನವರು.—ಶೇಖ ರಣೆ ವ್ಯವಸ್ಥೆ ಏನಿತ್ತೋ—ಪಟೇಲ ಶ್ಯಾನುಭೋ ಗರು ಪಹಣಿ ಬರೆಯುವುದು, ಆ ಆಧಾರದ ಮೇಲೆ ಎಚ್. ಎಸ್. ಫಾರಂ ಬರೆಯುವುದು, ಅದರ ಮೂಲಕ ರೈತರಿಗೆ ಕಿರುಕುಳವುಂಟಾಗು ವುದು—ಅದಕ್ಕೆ ಮುಂದೆ ಅವಕಾಶ ಕೊಡಬಾ ರದು, ಸರ್ವಥಾ ಯಾರನ್ನೂ ತೊಂದರೆ ಪಡಿಸ ಬಾರದು ಎಂಬುದೇ ಸರ್ಕಾರದ ಉದ್ದೇಶ. ಆದರಿಂದ ಹಿಂದೆ ಇದ್ದ ಶೇಖರಣೆ ಪದ್ಧತಿಯನ್ನು ನಾವು ಇಂದು ಜಾರಿಯಲ್ಲಿಟ್ಟುಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ "ಲೆವಿ ಸಿಸ್ಟಂ" ಎಂಬ ಪದ್ಧತಿಯನ್ನು ಜಾರಿಗೆ ತಂದು ಅದರ ಸಾಧಕ ಬಾಧಕಗಳನ್ನು ನೋಡೋಣ. ಇರುವುದು ಎರಡು ಮಾರ್ಗ, ಒಂದು ಬೇಡವೆಂದು ಹೇಳಿ ದರೆ, ಇನ್ನೊಂದು ಮಾರ್ಗವನ್ನು ಹಿಡಿಯಲೇ ಬೇಕು, ಅದರ ಸಾಧಕ ಬಾಧಕಗಳನ್ನು ಅನುಭ ವಿಸಲೇಬೇಕು. ಆ "ಲೆವಿ ಸಿಸ್ಟಂ" ಯಾವ ರೀತಿ ಮಾಡಬೇಕು, ಯಾವ ಪ್ರಮಾಣದಲ್ಲಿ ಮಾಡ ಬೇಕು, ಎಲ್ಲೆಲ್ಲಿ ಮಾಡಬೇಕು ಎಂಬುದು ತಪ ಶೀಲಾಯಿತು. ಅದಕ್ಕೆ ಒಂದು ಸಮಿತಿ

(ಶ್ರೀ ಕೆ. ಹನುಮಂತಯ್ಯನವರು)

ಯನ್ನು ಖಾಯಂ ಆಗಿ ರಚಿಸಿ ಲೆವಿ ಪದ್ಧತಿಯನ್ನು ಯಾವ ರೀತಿಯಲ್ಲಿ ಜಾರಿಗೆ ತರಬೇಕು, ಯಾವಯಾವ ನಿಯಮವನ್ನನುಸರಿಸಿ ಅದನ್ನು ನಡೆಸಬೇಕು ಎಂಬುದನ್ನು ಇನ್ನೂ ಸರ್ಕಾರ ನಿರ್ಧರಿಸಿಲ್ಲ. ಆದರೆ ಈ ತತ್ವವೇನಿದೆ, "ಲೆವಿ ಸಿಸ್ಟಂ'' ಎಂಬುದು, ಇದನ್ನು ಈ ದಿವಸ ಒಪ್ಪಿಕೊಂಡಿದ್ದೇವೆ ಮತ್ತು ಇದನ್ನು ಜಾರಿಗೆ ತೆಗೆದುಕೊಂಡು ಬರುತ್ತೇವೆ. ಆ ಸಮಿತಿಯವರು ಇದನ್ನು ಆಲೋಚಿಸಬಹುದು ಮತ್ತು ಮಾನ್ಯ ಸದಸ್ಯರು ಸಲಹೆಯನ್ನು ಕೂಡ ಆ ಸಮಿತಿಯವರಿಗೆ ಕೊಡಬಹುದು. ಆ ರೀತಿಯಾಗಿ ಸಲಹೆ ಪಡೆದು ಎಲ್ಲರ ಅಭಿಪ್ರಾಯವನ್ನು ಶೇಖರಿಸಿ ಕಿರುಕುಳವಿಲ್ಲದೆ, ನೀತಿಗೆ ಆದಷ್ಟು ಲೋಪಬಾರದೆ ದೇಶಕ್ಕೆ ಒಳ್ಳೆಯದಾಗುವ ಒಂದು "ಲೆವಿ ಸಿಸ್ಟಂ'' ನಿರ್ಮಾಣ ಮಾಡೋಣ. ಶ್ರೀ ಎಂ. ಶಂಕರಲಿಂಗೇಗೌಡರು ಹೇಳಿದ ಹಾಗೆ, ಅದಕ್ಕೆ ಇನ್ನೂ ಸ್ವಲ್ಪ ಕಾಲ ಬೇಕಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—Procurement price factor ಕೂಡ ಬರುತ್ತದೆಯೆ ?

ಶ್ರೀ ಕೆ. ಹನುಮಂತಯ್ಯನವರು.—These are the main factors. I am bound to touch on them. That will be the next point. ಲೆವಿ ಪದ್ಧತಿಯನ್ನು ಈ ದಿವಸ ನಾವು ಅನುಸರಿಸುತ್ತೇವೆಂದು ಹೇಳಿ ಸಾರದಿದ್ದರೆ ಶೇಖರಣೆ ಇಲ್ಲ, ಇನ್ನಾವ ತರಹ ವ್ಯವಸ್ಥೆಯೂ ಇಲ್ಲ ಎಂದು there will be a vacuum. ಆದ್ದರಿಂದ ಲೆವಿ ಪದ್ಧತಿಯನ್ನು ಜಾರಿಗೆ ತರುವುದು ಸರ್ಕಾರದ ನೀತಿ ಎಂಬುದನ್ನು ಈ ದಿವಸ ನಾನು ಸ್ಪಷ್ಟಪಡಿಸುತ್ತೇನೆ. ಲೆವಿ ಸಿಸ್ಟಂ ಬಂದಮೇಲೆ ಶೇಖರಣೆ ಪದ್ಧತಿಯಿದ್ದಾಗ ಹೇಗಿತ್ತೋ ಹಾಗೆಯೇ ರೈತರಿಂದ ತೆಗೆದುಕೊಳ್ಳುವ ದವಸಕ್ಕೆ ಬೆಲೆ ಕೊಡಲೇಬೇಕು. ನಾನು ಹೇಳಿದ ಹಾಗೆ ಬೆಲೆ ಯಾವರೀತಿ ಇರಬೇಕೆಂಬ ಪ್ರಶ್ನೆ ಆಗ ಬರುತ್ತದೆ. ಶ್ರೀ ವೆಂಕಟಪ್ಪನವರು ಪ್ರತಿಪಾದಿಸಿರುವ ವಾದ ನನ್ನ ಮನಸ್ಸಿಗೆ ಸಂಪೂರ್ಣವಾಗಿ ತೃಪ್ತಿಕರವಾಗಿರುವ ವಾದ. ನನಗೆ ಆ ವಾದವನ್ನು ಈ ಸಭೆಯಲ್ಲಿ ಪ್ರತಿಪಾದಿಸುವುದಕ್ಕೆ ಅವಕಾಶ ಹಿಂದೆ ಇಲ್ಲದಿದ್ದರೂ ಬೇರೆ ಕಡೆಗಳಲ್ಲಿತ್ತು. ಪಾರ್ಲಿಮೆಂಟಿನಲ್ಲಿ ಪ್ಲಾನಿಂಗ್ ಕಮಿಷನ್ ಮುಂದೆ ಮತ್ತು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಚರ್ಚೆಗೆ ತೆಗೆದುಕೊಂಡಾಗ ಈ ಎಲ್ಲಾ ಕಡೆಗಳಲ್ಲೂ ನನಗೆ ಚರ್ಚೆಯಲ್ಲಿ ಭಾಗವಹಿಸಲು ಅವಕಾಶವಿತ್ತು. ಆದ್ದರಿಂದ ಯಾವ ಯಾವ ಉನ್ನತ ಸಭೆಗಳಲ್ಲಿ, ಸಮಿತಿಗಳಲ್ಲಿ ಈ ಪ್ರಶ್ನೆಯನ್ನು ಪ್ರತಿಪಾದಿಸಬೇಕೋ ಅಲ್ಲೆಲ್ಲಾ ನಾನು ಪ್ರತಿಪಾದಿಸಿದ್ದೇನೆ. ಹಿಂದೆ ಇದನ್ನು ನಾನು ಆ ಸ್ಥಳಗಳಲ್ಲಿ ಪ್ರತಿಪಾದನೆ ಮಾಡಿದಾಗ ಆ ಸರ್ಕಾರವನ್ನು ನಡೆಸುವುದಕ್ಕೆ ಜವಾಬ್ದಾರಿಯನ್ನು ವಹಿಸಿಕೊಂಡಿರುವವರೂ, ಪ್ಲಾನಿಂಗ್ ಕಮಿಷನ್ನಲ್ಲಿರುವ ಸದಸ್ಯರೂ ನನ್ನ ವಾದವನ್ನು ಒಪ್ಪಲಿಲ್ಲ. ಅವರು ಹೇಳುತ್ತಿದ್ದುದು ಆಹಾರ ಧಾನ್ಯಗಳ ಬೆಲೆ ಹೆಚ್ಚಿದರೆ ಇತರ ಪದಾರ್ಥಗಳ ಬೆಲೆಯೂ ಹೆಚ್ಚಾಗುತ್ತದೆ. ಅದು ಹೆಚ್ಚಾದ ಮೇಲೆ ಜೀವನದ ವೆಚ್ಚ ಹೆಚ್ಚುತ್ತದೆ. ಅದರಿಂದ ಕೂಲಿಕಾರರು, ಸರ್ಕಾರಿ ಸಿಬ್ಬಂದಿ ಹೆಚ್ಚು ಸಂಬಳ ಕೇಳುತ್ತಾರೆ. A spiral of inflation will set in ಎಂದು ಅರ್ಥಶಾಸ್ತ್ರವನ್ನು ಭೂತವನ್ನಾಗಿ ಮಾಡಿ ನಮ್ಮ ಮುಂದೆ ಇಡುತ್ತಿದ್ದಾರೆ. ಆದರೆ ನನ್ನ ವಾದ ಇದು. ಒಂದು ಕಾರ್ಖಾನೆಯಲ್ಲಿ ತಯಾರಾಗುವ ಸಾಮಾನುಗಳನ್ನು ಮಾರಬೇಕಾದರೆ ಅದರ ಬಂಡವಾಳದ ಖರ್ಚು, ಕೂಲಿ ಮತ್ತು ಇತರ ಎಲ್ಲಾ ಖರ್ಚುಗಳನ್ನೂ ನಾವು ಗಣನೆಗೆ ತೆಗೆದುಕೊಂಡು ಅದರಮೇಲೆ ಲಾಭ ಬರುವುದಾದರೆ ಆವಾಗ ಮಾರುತ್ತೇವೆಯೇ ಹೊರತು ಇಲ್ಲದಿದ್ದರೆ ಕಾರ್ಖಾನೆಯನ್ನೇ ಮುಚ್ಚಿಬಿಡುತ್ತೇವೆ. ತಯಾರಾದ ಪದಾರ್ಥಗಳಿಗೆ ಏನೊಂದು ತತ್ವವನ್ನು ಅನ್ವಯಿಸುತ್ತೇವೋ ಆ ತತ್ವವನ್ನೇ ಆಹಾರಧಾನ್ಯಗಳಿಗೂ ಕೂಡ ಅನ್ವಯಿಸಬೇಕಾಗಿರುವುದು ನ್ಯಾಯ ಎಂಬುದು ನಮ್ಮ ವಾದವಾಗಿದೆ. ಆ ರೀತಿ ಮಾಡದೆ ಆಹಾರ ಧಾನ್ಯದ

ವಿಷಯದಲ್ಲಿ ರೈತರಿಗೆ ನಷ್ಟವಾದರೂ ಆಗಲಿ, ಅವರು ಬೆಳೆದುಕೊಂಡುಹೋಗಲಿ, ಮಿಕ್ಕ ಎಲ್ಲಾ ಕಸುಬುಗಳಲ್ಲೂ, ಎಲ್ಲಾ ಕೈಗಾರಿಕೆಗಳಲ್ಲೂ ಲಾಭ ಸಿಕ್ಕಲು ಅವಕಾಶವಿರಬೇಕು ಎಂದರೆ, ಈ ಆಹಾರಧಾನ್ಯಗಳ ಬೆಳವಣಿಗೆ ತನ್ನಷ್ಟಕ್ಕೆ ತಾನೇ ಕಡಮೆಯಾಗುವುದು ಸ್ವಾಭಾವಿಕ. ಈಗ ನಮ್ಮ ದೇಶದಲ್ಲಿ ಎಲ್ಲಕ್ಕಿಂತಲೂ ಹೆಚ್ಚಿನ ಆವಶ್ಯಕತೆಯಿರುವುದು ಆಹಾರಧಾನ್ಯಗಳಿಗೆ ಎಂದು ಬೇರೆ ಹೇಳಬೇಕಾಗಿಲ್ಲ. ರೈಲ್ವೆ ಎಂಜಿನ್ ತಯಾರುಮಾಡುವುದು, ವಿಮಾನ ತಯಾರಿಕೆ, ಫರ್ಟಿಲೈಸರ್ಸ್ ಮುಂತಾದ್ದಕ್ಕೆಲ್ಲಾ ಈಗ ಹೆಚ್ಚು ಅವಕಾಶ ಕೊಟ್ಟಿದೆ. ಇವೆಲ್ಲಕ್ಕಿಂತ ಹೆಚ್ಚಾದ ಪ್ರಾಶಸ್ತ್ಯ ಆಹಾರಕ್ಕೆ ನೀಡಬೇಕೆಂಬುದನ್ನು ಹೇಳಬೇಕಾಗಿಲ್ಲ. ಆ ರೀತಿಯಾಗಿ ಒಂದು ಹೆಚ್ಚಿನ ಸ್ಥಾನವನ್ನು ಅದಕ್ಕೆ ಕೊಟ್ಟಮೇಲೆ ಬೆಳೆಯುವ ರೈತರಿಗೆ ಸಾಕಾದಷ್ಟು ಲಾಭ ದೊರೆತು ತನ್ಮೂಲಕ ಉತ್ತೇಜನ ದೊರೆಯಲೇಬೇಕು. ನಾನು ಹಿಂದಿನ ಸರ್ಕಾರಗಳನ್ನು ಟೀಕಿಸಬೇಕೆಂಬ ಉದ್ದೇಶವನ್ನಿಟ್ಟು ಕೊಂಡಿಲ್ಲ. ಇದು ತತ್ವಕ್ಕೆ ಸಂಬಂಧಪಟ್ಟಿದೆ. ಶ್ರೀ ರುದ್ರಪ್ಪನವರು ಹೇಳಿದ ಹಾಗೆ, ಹಿಂದೆ 'ನಾವು ಹೆಚ್ಚು ಆಹಾರ ಬೆಳೆಯುವ ಯೋಜನೆಗಾಗಿ ಕಮಿಷನ್ ಏರ್ಪಾಡಿಗೂ ಅಧಿಕಾರಿಗಳು ವಗೈರೆಯವರಿಗೂ ಖರ್ಚು ಮಾಡುವುದಕ್ಕಿಂತ ನೇರವಾಗಿ ಆ ಹಣವನ್ನೆಲ್ಲಾ ಬೋನಸ್ ರೂಪದಲ್ಲಿ ಬೆಳೆದುಕೊಡುವ ರೈತರಿಗೆ ಕೊಟ್ಟರೆ ಹೆಚ್ಚು ಆಹಾರಧಾನ್ಯ ಬೆಳೆಯುವುದಕ್ಕೆ ಸಾಧಕವಾಗುತ್ತದೆ' ಎಂಬುದು ನನ್ನ ವಾದವಾಗಿತ್ತು. ಈಗಲೂಕೂಡ ಅದೇ ನನ್ನ ಮನೋಭಾವನೆ. ಅದನ್ನು ಅನೇಕಸಲ ಉದಾಹರಣೆಗಳ ಮೂಲಕ ಹೇಳಿದ್ದೇನೆ.

5 P.M.

Mr. SPEAKER.—You are looking at that side only !

Sri K. HANUMANTHAIYA.—Do you want me to conclude it by 5 P.M.? Then Sir, I will take another opportunity to reply to the points raised and with the leave of the House Sir, I will conclude.

Sri B. HUTCHE GOWDA.—This is a food debate, Sir ?

Mr. SPEAKER.—Order, Order.

ಶ್ರೀ ಕೆ. ಹನುಮಂತಯ್ಯನವರು.—ಆದ್ದರಿಂದ ಈ ದಿವಸ ನಾನು ಯಾವ ಒಂದು ಆಹಾರ ಧಾನ್ಯದ ಬೆಲೆ ವಿಷಯವನ್ನು ಪ್ರತಿಪಾದಿಸುತ್ತಾ ಇದ್ದೇನೆಯೋ ಅದಕ್ಕೆ ಇನ್ನೂ ಅವಕಾಶ ಸಿಕ್ಕುತ್ತದೆ, ಅದನ್ನು ಪ್ರಸ್ತಾಪ ಮಾಡುತ್ತೇನೆ. ಬಹಳ ಮುಖ್ಯವಾದ ವಿಚಾರದಲ್ಲಿ ಮಂತ್ರಿಮಂಡಲದವರು ಏನು ಕಾರ್ಯಕ್ರಮ ಕೈಕೊಳ್ಳಬೇಕೆಂದಿದ್ದಾರೆಂಬುದನ್ನು ಹೇಳಬೇಕೆಂದಿದ್ದೆ. ಮತ್ತೊಂದು ಅವಕಾಶ ಉಪಯೋಗಿಸಿಕೊಂಡು ಹೇಳುತ್ತೇನೆ. ಈ ದಿವಸ ಇಲ್ಲಿಗೆ ನನ್ನ ಭಾಷಣವನ್ನು ಮುಗಿಸಿ, ಕೊಡಲ್ಪಟ್ಟ ಪ್ರತಿಯೊಂದು ಉಪಯುಕ್ತವಾದ ಸಲಹೆಗಳಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಮಂತ್ರಿಮಂಡಲದ ಪರವಾಗಿ ಸಭೆಗೆ ಅರ್ಪಿಸುತ್ತೇನೆ.

Mr. SPEAKER.—The question is :

"That a sum not exceeding Rs. 27,19,000 be granted to the Government to complete the sum necessary to defray the charges which will come in course of payment during the year ending 31st day of March 1953, in respect of "Extraordinary Charges".

The motion was adopted.

Mr. SPEAKER.—The House will now adjourn and meet tomorrow at 12 NOON.

The Assembly adjourned at One Minute past Five of the Clock to meet again at Twelve of the Clock on Tuesday, the 8th July 1952.

WD 2802—GPB—500—10-11-1952